(ಅನುಬಂಧ-9)

7 ಕಬ್ಬು ಬೆಳೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಸರ್ಕಾರದ ಹೇಳಿಕೆ

ಅಧ್ಯಕ್ಷರು: ಈಗ ಕಾರ್ಯಕಲಾಪಗಳು

(ಗೊಂದಲ)

ಅಧ್ಯಕ್ಷರು: ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಜಗದೀಶ್ ಶೆಟ್ಟರ್‌ರವರೆ, ನಿಮ್ಮ ಸ್ನೇಹಿತರಿಗೆ ಹೇಳಿ ಸದನದ ಕಾರ್ಯ ಕಲಾಪಗಳನ್ನು ನಡೆಸಿಕೊಂಡು ಹೋಗೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ನಾವು ಮಾತುಕತೆ ಮಾಡಿದ ಹಾಗೆ proposal ತೆಗೆದುಕೊಂಡು ಮುಖ್ಯಮಂತ್ರಿಗಳ ಬಳಿ ಮಾತನಾಡಿಕೊಂಡು ಬರುತ್ತೇವೆ ಎಂದು ದೇಶಪಾಂಡೆಯವರು ಹೇಳಿದರು ಏನು ಮಾತನಾಡಿಕೊಂಡು ಬಂದರು ಏನಾಯಿತು?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ನಿಮ್ಮ proposals ಮುಖ್ಯ ಮಂತ್ರಿಗಳಿಗೆ ನೀಡಿದ್ದು, ಮುಖ್ಯ ಮಂತ್ರಿಗಳು ಹೇಳಲಿದ್ದಾರೆ.

ಶ್ರೀ ಸಿದ್ದರಾಮಯ್ಯ: ಇರಿ, ನಾವು ಹೇಳುವುದನ್ನು ಸ್ವಲ್ಪ ಕೇಳಿಸಿಕೊಳ್ಳಿ

(ಗೊಂದಲ)

ಅಧ್ಯಕ್ಷರು: ಹೇಳುತ್ತಾರೆ. ಆಯಿತು, ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು: ಅವರು ಹೇಳುವುದಕ್ಕೆ ಅವಕಾಶ ಕೊಡಿ

ಶ್ರೀ ಜಗದೀಶ್ ಶೆಟ್ಟರ್: ಪ್ರಜಾತಂತ್ರ ವ್ಯವಸ್ಥೆ ಎನ್ನುವುದೇ ಇಲ್ಲ ನೀವು House adjourn ಮಾಡಬೇಕಿತ್ತು. ಇಷ್ಟು ತುರ್ತಾಗಿ ಏಕೆ ವಿಧೇಯಕಗಳ

ಮಂಡನೆ ಮಾಡಬೇಕಿತ್ತು ಇನ್ನೂ ಒಂದು ವಾರ ಅಧಿವೇಶನ ನಡೆಯಲಿದೆ. ಇಂದೇ ಮಂಡನೆ ಮಾಡುವ urgent ಏನಿತ್ತು?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಉತ್ತರ ಕರ್ನಾಟಕ ಭಾಗದಲ್ಲಿ ಅಧಿವೇಶನ ನಡೆಸಲಿಕ್ಕಾಗಿ ಕೋಟ್ಯಂತರ ಖರ್ಚು ಮಾಡಿ ಈ ಭಾಗದ ಜನರ ಸಮಸ್ಯೆಗಳ ಕುರಿತು ಚರ್ಚೆ ಮಾಡುವುದನ್ನು ಬಿಟ್ಟು ಸುಮ್ಮನೆ ಗಲಾಟೆ ಮಾಡುತ್ತಿದ್ದೀರಿ. ನೀವು ಪ್ರಜಾಪ್ರಭುತ್ವದ ವಿರೋಧಿಗಳು, ರೈತರ ವಿರೋಧಿಗಳು. ಬಡವರ ವಿರೋಧಿಗಳು ನೀವು, ನಾಚಿಕೆಯಾಗಬೇಕು ನಿಮಗೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ. ನಾನು ನಿನ್ನೆ ಏನು ಹೇಳಿದ್ದೇನೆ, ರೈತರಿಗೆ ಪ್ರತಿ ಟನ್ ಕಬ್ಬಿಗೆ 2.500/- ರೂ.ಗಳನ್ನು ಕಾರ್ಖಾನೆ ಯವರು ಕೊಡಬೇಕು. ಜೊತೆಗೆ ಸರ್ಕಾರದಿಂದ 150/- ರೂ. ಹೆಚ್ಚುವರಿಯಾಗಿ ಕೊಡುತ್ತಿದ್ದು, ರೈತರಿಗೆ ಪ್ರತಿ ಟನ್ ಕಬ್ಬಿಗೆ 2650/- ರೂ. ಆ ಭಾಗದಲ್ಲಿ ಸಿಗುತ್ತದೆ. ಈ ಭಾಗದ ರೈತರಿಗೆ 2,650/- ಸಿಗುತ್ತದೆ. ನಾವು ಇದಕ್ಕೆ ಬದ್ಧರಾಗಿದ್ದೇವೆ ಕಾರ್ಖಾನೆಯವರು ಇದಕ್ಕೆ ತಪ್ಪಿದ್ದಲ್ಲಿ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ತಯಾರಾಗಿದ್ದೇವೆ ನಿಮ್ಮ ಕಾಲದಲ್ಲಿ ರೈತರ ಪರ ಏನೂ ಮಾಡಲಿಲ್ಲ ನೀವು, ಗುಂಡಿಟ್ಟು ಕೊಂದು ಹಾಕಿದಿರಿ ನೀವು ಇಬ್ಬರು ರೈತರನ್ನು ಕೊಂದಿರಿ ನೀವು

(ಗೊಂದಲ)

ಶ್ರೀ ಹೆಚ್ ಡಿ ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಸದನ ಪ್ರಾರಂಭವಾದಾಗ ಮತ್ತೆ ನಮ್ಮ ಸ್ನೇಹಿತರು ಧರಣಿ ಕುಳಿತಾಗ ತಾವು ಸದನವನ್ನು adjourn ಮಾಡಿದಿರಿ. ಎಲ್ಲಾ ಪಕ್ಷದ ನಾಯಕರುಗಳ ಒಂದು ಸಭೆ ಕರೆದಿರಿ. ಸರ್ಕಾರದ ಪರವಾಗಿ ದೇಶಪಾಂಡೆಯವರು ಹಾಗೂ ಕಾನೂನು ಸಚಿವರು ಬಂದರು ಅಲ್ಲಿ ಚರ್ಚೆಯಾಯಿತು, ಲಕ್ಷ್ಮಣ ಸವದಿಯವರು ಕೆಲವು

ಸಲಹೆ ನೀಡಿದರು. ಚರ್ಚೆಯಾದ ನಂತರ ದೇಶಪಾಂಡೆಯವರು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ನಮ್ಮ stand ಏನಿದೆ ಎಂಬುದನ್ನು ಹೇಳುತ್ತೇವೆಂಬ ಮಾತನ್ನು ಸಭೆಯಲ್ಲಿ ಹೇಳಿದರು. ಸಭೆ ಪ್ರಾರಂಭ ಮಾಡುವ ಮೊದಲು ಒಂದು ಹತ್ತು ನಿಮಿಷ ಸಭಾನಾಯಕರು ಎಲ್ಲಾ ಪಕ್ಷಗಳ ನಾಯಕರು ಸೇರಿ ಒಂದು ಸಭೆ ಮಾಡಿ ಚರ್ಚಿಸಿ ಅಲ್ಲಿಯೇ ಒಂದು ತೀರ್ಮಾನಕ್ಕೆ ಬಂದಿದ್ದರೆ ಬಹುಶಃ ಸದನದ ಕಲಾಪ ಸರಿಯಾದ ರೀತಿಯಲ್ಲಿ ಹೋಗುತ್ತಿತ್ತು ಎಂದು ಕಾಣುತ್ತದೆ ಈಗಲೂ ನೀವು 10 ನಿಮಿಷ ಸಭೆಯನ್ನು ಮುಂದೂಡಿ, ಎಲ್ಲಾ ಪಕ್ಷದ ಪ್ರಮುಖರನ್ನು ಕರೆಸಿ 10 ನಿಮಿಷ ಸಭೆ ನಡಸಿ ಮಾತ ನಾಡಿ, ನಮ್ಮ ಬಿಜೆಪಿ ಸ್ನೇಹಿತರು ಏನೂ ಸಲಹೆ ನೀಡಿದ್ದಾರೆ, 2,500/- ರೂ.ಗಳನ್ನು ಕಾರ್ಖಾನೆಯ ಮಾಲಿಕರು ಕೊಡಬೇಕೆಂದು ಏನು ನೀವು ಸರ್ಕಾರ ಘೋಷಣೆ ಮಾಡಿದ್ದೀರಿ, ಸರ್ಕಾರದಿಂದ 150/- ರೂ ಬೆಂಬಲ ಬೆಲೆ ನೀಡುತ್ತವೆಂದು ಕೂಡ ಹೇಳಿದ್ದೀರಿ. ಅದಕ್ಕೆ ರೈತರಿಗೆ ಏನು 2,650/- ರೂ. ಸೇರಬೇಕಿತ್ತು. ಸರ್ಕಾರ ಕಾರ್ಖಾನೆ ಮಾಲೀಕರು ₹ 1,800/, ₹ 2,000/- ಗಳಿಗೆ ಏನು ಈಗಾಗಲೇ ಮುಚ್ಚಳಿಕೆ ಬರೆಸಿ ಕೊಂಡಿದ್ದಾರೆ, ಇನ್ನು 500-600 ರೂ difference ಏನಿದೆ, ಅದನ್ನು ರೈತರಿಗೆ ಕೊಡಿಸಲು ಯಾವ ರೀತಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ ಎಂಬ ಬಗ್ಗೆ ಚರ್ಚೆಯಾಗಬೇಕೆಂದು ಬೆಳಿಗ್ಗೆ ಸಭೆಯಲ್ಲಿ ಹೇಳಿದ್ದಾರೆ. ಮುಖ್ಯಮಂತ್ರಿಗಳು ಮತ್ತು ಜಗದೀಶ್ ಶೆಟ್ಟರ್‌ರವರನ್ನು ಕರೆಸಿ ತಮ್ಮ ಅಧ್ಯಕ್ಷತೆಯಲ್ಲಿ ಒಂದು 10 ನಿಮಿಷ ಸಭೆ ನಡೆಸಿ, ಅಲ್ಲಿ ಒಂದು ತೀರ್ಮಾನ ಮಾಡಿ ಮತ್ತೆ ಮುಖ್ಯಮಂತ್ರಿಗಳು ಪ್ರಕಟ ಮಾಡಿದರೆ ಸಭೆ smooth ಆಗಿ ನಡೆಸಲು ಸಾಧ್ಯವಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸಭೆಯನ್ನು ಮೊದಲೇ ಮಾಡಬೇಕಾಗಿತ್ತು

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಹೇಳುವುದನ್ನು ಕೇಳಿ.

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡಲಿಕ್ಕೆ ಸರ್ಕಾರ ಸಿದ್ಧವಾಗಿದೆ.

(ಗೊಂದಲ)

ಅಧ್ಯಕ್ಷರು: ಈಗ 10 ನಿಮಿಷಗಳ ಕಾಲ ಸಭೆಯನ್ನು ಮುಂದಕ್ಕೆ ಹಾಕಿದ್ದೇನೆ. 10 ನಿಮಿಷದ ನಂತರ ಪುನಃ ಇಲ್ಲಿ ಸೇರೋಣ. ಈ ಮಧ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದನಾಯಕರು, ಮಾನ್ಯ ಜಗದೀಶ್ ಶೆಟ್ಟರ್‌ರವರು, ಮಾನ್ಯ ಯಡಿಯೂರಪ್ಪನವರನ್ನು ನಾನು ಕರೆಸಿಕೊಂಡು ಚರ್ಚೆ ಮಾಡಿ ಸಮಸ್ಯೆ ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

(ಸದನವನ್ನು ಮಧ್ಯಾಹ್ನ 3.41 ಗಂಟೆಗೆ 10 ನಿಮಿಷಗಳ ಕಾಲ ಮುಂದೂಡಲಾಯಿತು.)

(ಸದನವು ಪುನಃ ಸಾಯಂಕಾಲ 4 53 ಗಂಟೆಗೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

(ಭಾರತೀಯ ಜನತಾ ಪಕ್ಷದ ಮಾನ್ಯ ಸದದ್ಯರುಗಳು ಹಾಗೂ ಕರ್ನಾಟಕ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿದ್ದರು)

ಅಧ್ಯಕ್ಷರು: ನನ್ನ ಛೇಂಬರಿನಲ್ಲಿ ಏನು ಚರ್ಚೆಯಾಗಿದೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಎರಡು ಮಾತು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ): ಮೊದಲು ತಾವು ಹೇಳಿಬಿಡಿ

ಶ್ರೀ ಕೆ.ಎಂ ಶಿವಲಿಂಗೇಗೌಡ: ಮೊದಲು ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡಿದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಆಮೇಲೆ ಶ್ರೀ ಜಗದೀಶ್ ಶೆಟ್ಟರ್‌ರವರು ಮಾತನಾಡಲಿ

ಶ್ರೀ ವೈ.ಎಸ್.ವಿ. ದತ್ತಾ: ಮೊದಲು ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲಿ ಆಮೇಲೆ ವಿರೋಧ ಪಕ್ಷದ ನಾಯಕರು ಮಾತನಾಡಲಿ, ನಂತರ ಜಗದೇಶ ಶೆಟ್ಟರ್‌ರವರು ಮಾತನಾಡಲಿ. ಪದ್ಧತಿ ಬಿಡಬಾರದು.

ಶ್ರೀ ಜಗದೀಶ್ ಶೆಟ್ಟರ್ (ತಮ್ಮ ಸ್ಥಾನದಿಂದ) ಅವರ stand ಏನೆಂಬುದನ್ನು ಹೇಳಲಿ.

ಅಧ್ಯಕ್ಷರು: ಹೇಳುತ್ತಾರೆ

ಶ್ರೀ ಸಿದ್ದರಾಮಯ್ಯ: ನನ್ನ stand ಏನೆಂಬುದನ್ನು ಹೇಳಿದ್ದೆನಲ್ಲಾ?

ಅಧ್ಯಕ್ಷರು: ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಹೇಳಲಿ

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) ಸಭಾಧ್ಯಕ್ಷರೆ ತಮ್ಮ ಕೊರಡಿಯಲ್ಲಿ ಏನು ಚರ್ಚೆಯಾಗಿದೆ, ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದ stand ಏನು ಎನ್ನುವುದನ್ನು ಹೇಳಿ, ಧರಣಿಯಲ್ಲಿರುವ ಬಿಜೆಪಿ ಸದಸ್ಯರಿಗೆ ಅವರವರ ಸ್ಥಾನಗಳಿಗೆ ಹೋಗಲು ಮನವಿ ಮಾಡಲಿ. ಬಹುಶಃ ಅವರು ಇದಕ್ಕೆ ಒಪ್ಪಿಗೆ ಕೊಡಬಹುದೆಂಬ ವಿಶ್ವಾಸವನ್ನು ನಾನಿಟ್ಟುಕೊಂಡಿದ್ದೇನೆ. ನಿಮ್ಮ ಸರ್ಕಾರದ stand ಅನ್ನು ಮೊದಲು ಹೇಳಿಬಿಡಿ. ತಾವೇ ಮನವಿ ಮಾಡಿಬಿಡಿ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು): ಮಾನ್ಯ ವಿಧಾನಸಭಾ ಅಧ್ಯಕ್ಷರು ಅವರಿಗೆ ಬಹಳಷ್ಟು ಸಲ ಮನವಿ ಮಾಡಿದ್ದಾರೆ ಮಾನ್ಯ ಸದಸ್ಯರು ಅವರವರ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರೆ ಬಹಳ ಅನುಕೂಲ ವಾಗುತ್ತದೆ. ದಯಮಾಡಿ ಅವರು ಅಲ್ಲಿ ಹೋಗಿ ಕುಳಿತುಕೊಳ್ಳಬೇಕು.

ಶ್ರೀ ಹೆಚ್ ಡಿ ಕುಮಾರಸ್ವಾಮಿ: ಅವರ stand ಏನು ಎಂದು ಹೇಳುತ್ತಾರೆ, ತಾವು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವೂ ಅನೇಕ ಸಾರಿ ಮನವಿ ಮಾಡಿದ್ದೀರಿ. ನಾನೂ ಕೂಡ ಮನವಿ ಮಾಡುತ್ತೇನೆ. ಬಿಜೆಪಿ ಸ್ನೇಹಿತರು ಮಾನ್ಯ ಜಗದೀಶ್ ಶೆಟ್ಟರ್‌ರವರು Floor Leaders ಇದ್ದಾರೆ, ಮಾನ್ಯ ಯಡಿಯೂರಪ್ಪನವರು ಆಗಲೇ ತಮ್ಮ ಸ್ಥಾನಕ್ಕೆ ಹೋಗಿ ಕುಳಿತಿದ್ದಾರೆ. ನೀವೆಲ್ಲರೂ ಕೂಡ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕುಳಿತರೆ ಒಳ್ಳೆಯದು. ಈ ಭಾಗದ ಅನೇಕ ಸಮಸ್ಯೆಗಳಿವೆ. ರಾಜ್ಯದ ಅನೇಕ ಸಮಸ್ಯೆಗಳಿವೆ. ಅದರ ಬಗ್ಗೆ ನಾವೆಲ್ಲ ಚರ್ಚೆ ಮಾಡೋಣ. Assembly ಕರೆಯುವುದು ಅದಕ್ಕೋಸ್ಕರವೇ. ಇಷ್ಟೆಲ್ಲ ಹಣ ಖರ್ಚು ಮಾಡಿ ಇಲ್ಲಿ Assembly ಕರೆದು ಚರ್ಚೆ ಮಾಡಬೇಕು, ಈ ನಾಡಿನ ಜನರ ಸಮಸ್ಯೆಗಳಿಗೆ ಪರಿಹಾರ ಸಿಗಬೇಕು ಎನ್ನುವ ಕಾರಣಕ್ಕೋಸ್ಕರ ಇಲ್ಲಿ ಸೇರಿದ್ದೇವೆ ಆ ಕಾರಣದಿಂದ ನಾನು ನಿಮ್ಮಲ್ಲಿ ಮನವಿ ಮಾಡುತ್ತೇನೆ ಈಗಾಗಲೇ ಮಾನ್ಯ ಸಭಾಧ್ಯಕ್ಷರು ಅವರ ಕೊಠಡಿಗೆ ಎಲ್ಲರನ್ನು ಕರೆದು, ಬೆಳಗ್ಗೆ ಒಂದು ಸಲ Floor Leader ಜೊತೆ ಚರ್ಚೆ ಮಾಡಿದ್ದಾರೆ ಆ ನಾನು ಇರಲಿಲ್ಲ, Council ನಲ್ಲಿದ್ದೆ. ಈಗ ಮತ್ತೆ ಎರಡನೇ ಬಾರಿ ಕರೆದು ಚರ್ಚೆ ಮಾಡಿದ್ದಾರೆ. ನಾನೂ ಅಲ್ಲಿಯೂ ಕೂಡ ಸ್ಪಷ್ಟಪಡಿಸಿದ್ದೇನೆ ನಿನ್ನೆಯೂ ಕೂಡ ಸ್ಪಷ್ಟಪಡಿಸಿದ್ದೇನೆ. Council ನಲ್ಲೂ ಕೂಡ ಸ್ಪಷ್ಟಪಡಿಸಿದ್ದೇನೆ ಕರ್ನಾಟಕ ಸರ್ಕಾರ ಈಗ ಹೊಸದಾಗಿ ಒಂದಿರುವ ಕಾನೂನು ರೀತ್ಯಾ ಅಂದರೆ Karnataka Sugarcane Regulation Act 2013 ಇದರ ಪ್ರಕಾರ ಸರ್ಕಾರ Sugarcane Control Board ಅನ್ನು ರಚನೆ ಮಾಡಬೇಕು ಆ Board ನಲ್ಲಿ sugar Factory ಪ್ರತಿನಿಧಿಗಳು ಕೂಡ ಇರಬೇಕು ರೈತರ ಪ್ರತಿನಿಧಿಗಳು ಕೂಡ ಇರಬೇಕು. ಅಲ್ಲಿ ಚರ್ಚೆ ಮಾಡಿ ಇವತ್ತಿನ Sugar rate ಅದನ್ನೆಲ್ಲ ಗಮನದಲ್ಲಿಟ್ಟುಕೊಂಡು primary by products ಅದರ ಬೆಲೆಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಮಾಡಬೇಕೆನ್ನುವುದನ್ನು ಆ Board ನಲ್ಲಿ ಮೂರು ಬಾರಿ ಚರ್ಚೆ ಮಾಡಿದ್ದಾರೆ. ಕೊನೆಗೆ ದಿನಾಂಕ. 10-11-2013ರಲ್ಲಿ ಅಂತಿಮವಾಗಿ ಹೆಚ್ಚು ಕಡಿಮೆ consensus decision

ಆಯಿತು. ಆದರೆ ಅದರಲ್ಲಿ ಒಬ್ಬರು ಇಬ್ಬರು ಒಪ್ಪಲಿಲ್ಲ consensus decision was sugarcane ನಲ್ಲಿರತಕ್ಕಂಥ ತೆರಿಗೆಯನ್ನು ಮನ್ನಾ ಮಾಡಬೇಕು Roadcess ಇತ್ತು purchase Tax ಇತ್ತು ಮತ್ತು VAT ಇತ್ತು, ಈ ಮೂರು taxes ಅನ್ನು ಮನ್ನಾ ಮಾಡಬೇಕೆಂಬ ಸಲಹೆ ಆ Board ನಿಂದ ಬಂತು ಆ ಮೂರು taxes ಅನ್ನು ಅಂದರೆ ಸರ್ಕಾರಕ್ಕೆ ಸುಮಾರು 300 ಕೋಟಿ ರೂಪಾಯಿ ತೆರಿಗೆ ಬರುತ್ತಿತ್ತು. ಅದನ್ನು ಈ ಬಾರಿ ರೈತರಿಗೆ ಹಿತದೃಷ್ಟಿಯಿಂದ ಮತ್ತು ಈ ಸಾರಿ ಕಳೆದ ವರ್ಷಕ್ಕೆ ಹೋಲಿಸಿದರೆ ಸಕ್ಕರೆ ಬೆಲೆ ಕುಸಿದಿರುವುದರಿಂದ ಸರ್ಕಾರಕ್ಕೆ ಬರುತ್ತಿದ್ದ 300 ಕೋಟಿ ರೂ.ಗಳ ತೆರಿಗೆಯನ್ನು ಮನ್ನಾ ಮಾಡುತ್ತೇನೆ ಎಂದು ಅದಕ್ಕೆ ಸಂಬಂಧಪಟ್ಟ notification ಅನ್ನೂ ಕೂಡ issue ಮಾಡಿದ್ದೇನೆ. ಇದಾದ ಮೇಲೆ 300 ಕೋಟಿ ರೂ. ಅಂದರೆ ಅಂದಾಜು ಈ ರಾಜ್ಯದಲ್ಲಿ 3 ಕೋಟಿ ಕಬ್ಬು ಬೆಳೆದಿರಬಹುದು, ಆ ಮೂರು ಕೋಟಿ ಕಬ್ಬಿಗೆ 300 ಕೋಟಿ ರೂ ಗಳನ್ನು ರದ್ದು ಮಾಡಿದರೆ Sugar Factory ಯವರು ಕೊಡಬೇಕಾದ ತೆರಿಗೆಯನ್ನು ರದ್ದು ಮಾಡಿದರೆ ಅವರಿಗೆ ಒಂದು ಟನ್‌ಗೆ 100 ರೂ ಉಳಿತಾಯವಾಗುತ್ತದೆ ಆ 100 ರೂಪಾಯಿಗಳನ್ನು ರೈತರಿಗೆ transfer ಮಾಡಬೇಕು 100 ರೂಪಾಯಿ ಲೆಕ್ಕ ಹಾಕಿಕೊಂಡು ಮತ್ತು Sugar Factory ಯವರು 2400 ರೂಪಾಯಿಗಳನ್ನು ಕೊಡಬೇಕು. ಹಳೆಯ ಮೈಸೂರು ಕಡೆಗೆ ex-gate 2400 ರೂ ಕೊಡಬೇಕು +100 ರೂ. ತೆರಿಗೆ ರದ್ದು ಆಗಿರುವಂಥದ್ದು ಮತ್ತು ಉತ್ತರ ಕರ್ನಾಟಕದ ಕಡೆಗೆ ex-field 2400 ರೂ +100 ರೂ ತೆರಿಗೆ ರದ್ದು ಮಾಡಿರುವಂಥದ್ದು ಹೀಗೆ ಒಟ್ಟು 2500 ರೂಪಾಯಿ ಕೊಡಬೇಕು ಎಂದು ಹೇಳಿ sugarcane Control Board ನಲ್ಲಿ ದಿನಾಂಕ 10-11-2013ರಲ್ಲಿ ತೀರ್ಮಾನ ಆಗಿದೆ. ಇದಾದ ಮೇಲೆ ನಾವು Sugar Factoryಯ ಯಾರಾದರೂ ಕೆಲವರು Courtಗೆ ಹೋಗಬಹುದು ಎಂಬ ಸಂಶಯದಿಂದ ಅವತ್ತೇ ಆದೇಶ ಹೊರಡಿಸಲಿಲ್ಲ. ಈಗ ದಿನಾಂಕ 23-11-2013 ರಲ್ಲಿ ಆದೇಶ ಹೊರಡಿಸಿದ್ದೇವೆ. ಈಗ ಆದೇಶ ಹೊರಗಡೆ ಬಂದಿದೆ ಇದು ಸರ್ಕಾರದ ಆದೇಶ Sugarcane Regulation Act, ಅಡಿಯಲ್ಲಿ ಆಗಿರುವ ಆದೇಶ. ಇದು

ಈ ಸದನದಲ್ಲಿಯೇ pass ಆಗಿರುವಂಥದ್ದು. ಹಿಂದೆ ಬಿಜೆಪಿ ಸರ್ಕಾರವಿದ್ದಾಗಲೇ ಈ ಕಾಯ್ದೆ ಆಗಿರುವಂಥದ್ದು, ಇದು ಇದರ ಪ್ರಕಾರ ಆಗಿರುವಂಥದ್ದು ಈ ಆದೇಶ it is binding on both farmers and also on factories ಇದನ್ನು ಒಪ್ಪಿಕೊಳ್ಳಬೇಕು. Sugar Factory ಯವರೂ ಒಪ್ಪಿಕೊಳ್ಳಬೇಕು. ಇದನ್ನು ರೈತರೂ ಒಪ್ಪಿಕೊಳ್ಳುತ್ತಾರೆನ್ನುವ ವಿಶ್ವಾಸ ನನಗಿದೆ. ರೈತರು ಮತ್ತೆ ಇಲ್ಲಿ ಚಳುವಳಿ ಮಾಡಿದ ಮೇಲೆ ಎರಡು ದಿನಗಳ ಕಾಲ ಸದನದಲ್ಲಿ ಚರ್ಚೆಯಾದ ಮೇಲೆ ನಾನು ನಿನ್ನೆ ಉತ್ತರ ಕೊಡುವವನಿದ್ದೆ. ನಾನು ಮೊನ್ನೆಯೇ ಉತ್ತರ ಕೊಡಬೇಕಾಗಿತ್ತು ಕಾರಣ ಏನೆಂದರೆ, discussion incomplete ಆಯಿತು. ಆಗ ಕೊಡುವುದಕ್ಕಾಗಲಿಲ್ಲ ನಿನ್ನೆ ಉತ್ತರ ಕೊಡುತ್ತಿದ್ದೆ. ಅಷ್ಟು ಹೊತ್ತಿಗೆ ಈ ದುರ್ಘಟನೆ ಆಯಿತು ಈಗಾಗಲೇ ತೀರ್ಮಾನ ಮಾಡಿಕೊಂಡಿದ್ದೆವು ಸರ್ಕಾರಕ್ಕೆ ಸ್ವಲ್ಪ ಭಾರವಾದರೂ ಪರವಾಗಿಲ್ಲ, ಸ್ವಲ್ಪ incentive ಕೊಡೋಣವೆಂದು ತೀರ್ಮಾನ ಮಾಡಿ ಒಂದು ಟನ್ ಕಬ್ಬಿಗೆ 150 ರೂಗಳನ್ನು ಸರ್ಕಾರದಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅಂದರೆ, ಸುಮಾರು 300 ಲಕ್ಷ ಕಬ್ಬು ಇದೆ, ಅಂದರೆ 150 ರೂ. ಅಂದರೆ ಸುಮಾರು 450 ರಿಂದ 500 ಕೋಟಿ ರೂಪಾಯಿಗಳಾಗುತ್ತದೆ. ಸರ್ಕಾರದಿಂದ ಒಟ್ಟು 250 ಕೋಟಿ ರೂಪಾಯಿಗಳನ್ನು ಈ ಸಾರಿ ಒಂದು ಟನ್ ಕಬ್ಬಿಗೆ ಸರ್ಕಾರ ಇವತ್ತು incentive ಕೊಡುತ್ತಿದೆ. ಯಾವ ಕಾಲದಲ್ಲೂ ಇಷ್ಟೊಂದು ಅಂದರೆ ಒಂದು ಟನ್ ಕಬ್ಬಿಗೆ incentive ಕೊಟ್ಟಿರುವ ನಿದರ್ಶನವಿಲ್ಲ ಇದನ್ನು ಏಕೆ ಈ ತೀರ್ಮಾನ ಮಾಡಿದೆವು ಎಂದರೆ ರೈತರಿಗೆ ಒಳ್ಳೆಯ ಬೆಲೆ ಸಿಗಬೇಕು, ರೈತರಿಗೆ ಯಾವುದೇ ತೊಂದರೆಯಾಗಬಾರದು, ಕಳೆದ ವರ್ಷ ಟನ್ ಒಂದಕ್ಕೆ 2400 ರೂ ಇತ್ತು ಈ ವರ್ಷ ಅಷ್ಟೇ ಕೊಡೋಣ ಎಂದು ಇಂಥ ತೀರ್ಮಾನ ಮಾಡಿದೆವು ಕಳೆದ ವರ್ಷ ಏನಾಗಿತ್ತೆಂದರೆ, ಒಂದು ಕ್ವಿಂಟಾಲ್ ಸಕ್ಕರೆಗೆ 3200 ರಿಂದ 3400 ರೂ ಇತ್ತು. ಆಗ ಇವರೇ ಇದ್ದದ್ದು ಆಗ 2400 ರೂ ಕೊಟ್ಟಿದ್ದಾರೆ ಈ ಸಾರಿ Sugar ಬೆಲೆ ದುರಾದೃಷ್ಟವಶಾತ್ 2600 ರಿಂದ 2700 ರೂ.ಗೆ ಬಂದಿದೆ. ಕಳೆದ ಬಾರಿಗೂ ಈ ಬಾರಿಗೂ ಸುಮಾರು 700-800 ಕೋಟಿ ರೂ. ಕಡಿಮೆ ಆಗಿದೆ. ಉತ್ತರ ಪ್ರದೇಶ

ನಮಗಿಂತ ಜಾಸ್ತಿ ಕಬ್ಬು ಬೆಳೆಯುವ ರಾಜ್ಯವಾಗಿದೆ, ಮಹಾರಾಷ್ಟ್ರ ರಾಜ್ಯ ನಮಗಿಂತ ಜಾಸ್ತಿ ಕಬ್ಬು ಬೆಳೆಯುವ ರಾಜ್ಯವಾಗಿದೆ ಕರ್ನಾಟಕ ದೇಶದಲ್ಲಿ 3ನೇ ರಾಜ್ಯವಾಗಿದೆ. Sugarcane ಇಳುವರಿಯಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ ಮಹಾರಾಷ್ಟ್ರ ಒಂದನೇ ಸ್ಥಾನದಲ್ಲಿದೆ. ಇವತ್ತಿನವರೆಗೂ ಮಹಾರಾಷ್ಟ್ರದಲ್ಲಿ ಕಬ್ಬು ಅರೆಯಲಿಕ್ಕೆ ಪ್ರಾರಂಭ ಮಾಡಿಲ್ಲ, ರೈತರು ಚಳುವಳಿ ಮಾಡುತ್ತಿದ್ದಾರೆ ಉತ್ತರ ಪ್ರದೇಶದಲ್ಲೂ ಇವತ್ತಿನವರೆಗೂ ಕಬ್ಬು ಅರೆಯಲಿಕ್ಕೆ ಪ್ರಾರಂಭ ಮಾಡಿಲ್ಲ, ಅಲ್ಲಿಯೂ ರೈತರು ಚಳುವಳಿ ಮಾಡುತ್ತಿದ್ದಾರೆ ಕಬ್ಬು ಅರೆಯುವ ಅವಧಿ, time ಇರುವುದು ನವೆಂಬರ್ ತಿಂಗಳಿನಿಂದ ಏಪ್ರಿಲ್ ತಿಂಗಳವರೆಗೆ. ನಾವು ಸೆಪ್ಟೆಂಬರ್‌ನಲ್ಲಿ, ಅಕ್ಟೋಬರ್‌ನಲ್ಲಿ ಸಭೆ ಮಾಡಿ, ನವೆಂಬರ್ ತಿಂಗಳಲ್ಲಿ ಒಂದು ಸಭೆ ಮಾಡಿ ಎಂದು ಕೂಡ ವಿಳಂಬ ಮಾಡುವುದಾಗಲಿ ಅಥವಾ ರೈತರ ಸಮಸ್ಯೆ ಬಗ್ಗೆ ನಿರ್ಲಕ್ಷ್ಯ ಮಾಡುವುದಾಗಲಿ ಸರ್ಕಾರ ಯಾವುದನ್ನೂ ಮಾಡಿಲ್ಲ. ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುವ ಪ್ರಯತ್ನ ಮಾಡಿದ್ದೇವೆ. ಈಗ ನಾನು ಎಲ್ಲವನ್ನೂ ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಿನ್ನೆ ಕೂಡ ಹೇಳಿದ್ದೇನೆ. ಈಗಾಗಲೇ ಒಂದು ಟನ್ ಕಬ್ಬಿಗೆ 100 ರೂಪಾಯಿ tax ರಿಯಾಯಿತಿ ಕೊಟ್ಟಿದ್ದೇವೆ. ಇನ್ನೂ 150 ರೂ incentive ಕೊಡುತ್ತೇವೆ ಇದಕ್ಕೆ ಸರ್ಕಾರ ಬದ್ಧವಾಗಿದೆ. ಇದನ್ನು ನಾವು ಕೊಡುತ್ತೇವೆ ಇದಕ್ಕೆ Sugar Factory ಯವರೂ ಕೂಡ ಒಪ್ಪಿಕೊಳ್ಳಬೇಕು. ಏಕೆಂದರೆ, ಇದಕ್ಕೆ ಕಾನೂನು ಮಾಡಿದ್ದೇವೆ ಆದೇಶ ಹೊರಡಿಸಿದ್ದೇವೆ. ಇದನ್ನು Sugar Factoryಯವರು ಒಪ್ಪಿಕೊಳ್ಳಬೇಕು ಒಂದು ವೇಳೆ Sugar Factory ಯವರು ಯಾವುದಾದರೂ ಕಾರಣಕ್ಕೆ ಈ ಆದೇಶವನ್ನು ಉಲ್ಲಂಘನೆ ಮಾಡಿದರೆ ಕಾನೂನು ಏನಿದೆ, Sugarcane Regulation Act, ಏನಿದೆ, ಅದರಲ್ಲಿ 9,10,11, 12,13 ಈ section ಗಳಲ್ಲಿ penal clauseನಲ್ಲಿ ಏನು ಮಾಡಬೇಕೆಂದು ಇದೆ, payment ಯಾವ ತರಹ ಮಾಡಬೇಕು, ಅವರು ಕೊಡದೇ ಇದ್ದರೆ ಏನು ಮಾಡಬೇಕು ಎಂಬುದರ ಬಗ್ಗೆ clause ಇದೆ. ಅದರ ಪ್ರಕಾರ ಎಲ್ಲಾ Sugar Factory ಯವರೂ ಕೂಡ ಈ ಆದೇಶವನ್ನು ಪಾಲನೆ ಮಾಡುತ್ತಾರೆಂಬ ನಿರೀಕ್ಷೆ ಇಟ್ಟಿದ್ದೇನೆ ಒಂದು ವೇಳೆ Sugar Factory ಯವರೂ ಪಾಲನೆ ಮಾಡದೇ ಹೋದರೆ ಕಾನೂನು ರೀತ್ಯಾ

ನಾವು ಏನು ಕ್ರಮ ತೆಗೆದುಕೊಳ್ಳಬೇಕು, ಮುಲಾಜಿಲ್ಲದೆ ಕ್ರಮ ತೆಗೆದುಕೊ -ೃತ್ತೇವೆ ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇದು ನಾವೇ ಮಾಡಿರುವ ಕಾನೂನು. ಈ ಸದನದಲ್ಲಿ ಮಾಡಿರುವ ಕಾನೂನು ಇಡೀ ರಾಜ್ಯದ ಜನ ಈ ಕಾನೂನನ್ನು ಗೌರವಿಸುತ್ತಾರೆ ಈ ಸದನದ ಎಲ್ಲಾ 224 ಶಾಸಕರು ಮತ್ತು 75 MLC ನಾವೆಲ್ಲರೂ ಪಾಸ್ ಮಾಡಿರುವ ಕಾಯಿದೆ. ಆದ್ದರಿಂದ ಇದನ್ನು ಎಲ್ಲರೂ ಗೌರವಿಸಬೇಕಾಗುತ್ತದೆ. ಈಗಾಗಲೇ 58 Sugar Factoryಗಳಲ್ಲಿ 51 Sugar Factoryಗಳು ಪ್ರಾರಂಭವಾಗಿವೆ. 53 ಆಗಿವೆ ಎಂದು ಹೇಳುತ್ತಿದ್ದಾರೆ ಇನ್ನೂ 5 ಆರಂಭವಾಗಬೇಕಿದೆ. ಇನ್ನುಳಿದ Sugar Factory ಗಳು ಪ್ರಾರಂಭವಾಗಿವೆ. ಸುಮಾರು 32 ಲಕ್ಷ ಟನ್ ಕಬ್ಬನ್ನು ಈಗಾಗಲೇ ಅರೆಯಲಾಗಿದೆ ರೈತರು ಇವತ್ತು ಕಬ್ಬನ್ನು supply ಮಾಡುತ್ತಿದ್ದಾರೆ ಇದು ಇವತ್ತು ಇರುವ ರಾಜ್ಯದ ಪರಿಸ್ಥಿತಿ ಇದರಲ್ಲಿ ಯಾರು ರಾಜಕಾರಣ ಮಾಡುವುದು ಬೇಡ ಚರ್ಚೆ ಮಾಡೋಣ. ಇವತ್ತು ಪರಿಹಾರ ಹುಡುಕುವ ಪ್ರಯತ್ನ ಮಾಡೋಣ ಇಲ್ಲಿ ಇದೆಲ್ಲ ಚರ್ಚೆ ಮಾಡುವುದರಿಂದ ಇದೆಲ್ಲ ಪ್ರಯತ್ನ ಆಗಿರುವುದು ಪರಿಹಾರ ಸಿಕ್ಕಿರತಕ್ಕಂಥದ್ದು. ಬಹುಶಃ ಇದರಿಂದ ರೈತರೂ ಕೂಡ ಸಂತೋಷಪಡುತ್ತಾರೆ ಎನ್ನುವುದು ನನ್ನ ನಂಬಿಕೆ. ಮತ್ತೆ ಹೇಳುತ್ತೇನೆ. ನಿನ್ನೆ ದುರ್ಘಟನೆ ನಡೆದುಹೋಗಿದೆ. ಇದು ಆಗಬಾರದಾಗಿತ್ತು, ಆಗಿಬಿಟ್ಟಿದೆ. ನಾವಿನ್ನೂ ತೀರ್ಮಾನವೇ ಮಾಡಿರಲಿಲ್ಲ. ಅದಕ್ಕೆ ಮುಂಚಿತವಾಗಿ ಈ ಘಟನೆ ಆಯಿತು ನಾನು ಉತ್ತರವನ್ನೇ ಕೊಟ್ಟಿರಲಿಲ್ಲ. ಸರ್ಕಾರದ ನಿಲುವನ್ನು ಪ್ರಕಟಣೆ ಮಾಡಿರಲಿಲ್ಲ ಅದಕ್ಕಿಂತ ಮುಂಚಿತವಾಗಿ ಈ ಘಟನೆ ಆಗಿದ್ದು ಅತ್ಯಂತ ದುರದೃಷ್ಟಕರ. ಬಹಳ ನೋವಿನ ಸಂಗತಿ. ಯಾವುದೇ ವಿಷಯಗಳನ್ನು merit ಮತ್ತು ಮಾನವೀಯ ದೃಷ್ಟಿಯಿಂದ ತೀರ್ಮಾನ ಮಾಡುವುದನ್ನು ನಮ್ಮ ಸರ್ಕಾರ, ನಾವು ಯಾವತ್ತು ಕೂಡ ಮಾಡುತ್ತೇವೆ. ನಾವು ರೈತರ ಪರ ಇರುತ್ತೇವೆ, ರೈತರನ್ನು ರಕ್ಷಣೆ ಮಾಡುವ ಕೆಲಸವನ್ನು ಮಾಡುತ್ತೇವೆ ಹಾಗೆಂದು ಇನ್ನೊಂದು ವರ್ಗಕ್ಕೆ ವಿರುದ್ಧ ಇದ್ದೇವೆ, ಇನ್ನೊಬ್ಬರಿಗೆ ಅನ್ಯಾಯ ಆಗಬೇಕೆಂಬ ಉದ್ದೇಶವಲ್ಲ. ಇಲ್ಲಿ ರೈತರು Factoryಗಳವರು ಮತ್ತು ಗ್ರಾಹಕರು ಇಷ್ಟೂ ಒಳಗೊಂಡಿರುವುದರಿಂದ

ಇವುಗಳನ್ನು ಗಮನದಲ್ಲಿಟ್ಟುಕೊಂಡು ಈ ಸದನ ತೀರ್ಮಾನ ಮಾಡಬೇಕಾಗುತ್ತದೆ ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ಬಿಜೆಪಿಯ ಎಲ್ಲ ಮಾನ್ಯ ಸದಸ್ಯರು ಇದ್ದೀರಿ ಇದರಲ್ಲಿ ಯಾವುದೇ prestige ಮಾಡಿಕೊಳ್ಳುವುದು ಬೇಕಾಗಿಲ್ಲ ದಯಮಾಡಿ, ನಾವೂ ರಾಜಕೀಯ ಮಾಡುವುದು ಬೇಡ, ನೀವೂ ರಾಜಕೀಯ ಮಾಡುವುದು ಬೇಡ. ನಾನು ಈ ಸಂದರ್ಭದಲ್ಲಿ ಜೆ.ಡಿ(ಎಸ್)ನವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರೂ ಕೂಡ ಇದರಲ್ಲಿ ಬಹಳ ಸಹಕಾರ ಕೊಟ್ಟಿದ್ದಾರೆ. 'ಅವರಿಗೂ ಕೂಡ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.' ನೀವೂ ಕೂಡ ಇದಕ್ಕೆ ಒಪ್ಪಿಕೊಂಡು, ರಾಜ್ಯದ ರೈತರ ಹಿತದೃಷ್ಟಿಯಿಂದ ಇದನ್ನು ಒಪ್ಪಿಕೊಳ್ಳಬೇಕು. ನೀವೆಲ್ಲರೂ ಹೋಗಿ ನಿಮ್ಮ ನಿಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕೆಂದು ನಾನು ನಿಮ್ಮೆಲ್ಲರಲ್ಲೂ ಮನವಿ ಮಾಡುತ್ತೇನೆ ಇಷ್ಟು ಹೇಳಿ, ಇದು ನಮ್ಮ ಸರ್ಕಾರದ ನಿಲುವು ಎಂದು ಪ್ರಕಟ ಮಾಡುತ್ತಿದ್ದೇನೆ

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಮುಖ್ಯಮಂತ್ರಿಯವರಾದ ಮೇಲೆ Opposition Leader ಮಾತನಾಡಬೇಕು ಆಮೇಲೆ ಜಗದೀಶ್ ಶೆಟ್ಟರ್ ಮಾತನಾಡಬೇಕು ಆಮೇಲೆ ಯಡಿಯೂರಪ್ಪನವರು ಮಾತನಾಡಬೇಕು ಇದು ಪದ್ಧತಿ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ: ಮೊದಲು ಮುಖ್ಯಮಂತ್ರಿಯವರು, ಆಮೇಲೆ ವಿರೋಧ ಪಕ್ಷದ ನಾಯಕರು ಮಾತನಾಡಬೇಕು.

ಶ್ರೀ ಎನ್ ಹೆಚ್. ಕೋನರೆಡ್ಡಿ: ಪದ್ಧತಿಯನ್ನು maintain ಮಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಬಿಜೆಪಿಯ ಸ್ನೇಹಿತರು ಸ್ವಲ್ಪ urgent ನಲ್ಲಿರಬಹುದೆಂದು ಅನಿಸಿತು. ಅದಕ್ಕೆ ಅವರೇ ಮೊದಲು ಚರ್ಚೆ ಮಾಡಲಿ ಎಂದು ಇದ್ದೆ. ಸದನ ಮೊದಲನೇ ದಿವಸ ಪ್ರಾರಂಭವಾದಾಗಿನಿಂದ ಒಂದು ಕಡೆ ನಮ್ಮ ಬಿಜೆಪಿಯ ಸ್ನೇಹಿತರು ಪ್ರಮುಖವಾಗಿ ಕಬ್ಬು ಬೆಳೆಗಾರರ ಸಂಕಷ್ಟಗಳ ಬಗ್ಗೆ ಚರ್ಚೆಯಾಗಬೇಕೆಂದು ನಿಲುವಳಿ ಸೂಚನೆ ತಂದರು ಕಬ್ಬು ಬೆಳೆಗಾರರು ಜಾಸ್ತಿ ಇದ್ದಾರೆ. ಅದೇ ರೀತಿಯಲ್ಲಿ, ಬೇರೆ ಬೇರ ಬೆಳೆ ಬೆಳೆಯುವ

ಸಂಖ್ಯೆ ಕಡಿಮೆ ಇದ್ದರೂ ಆ ಬೆಳೆ ಬೆಳೆಯುವವರೂ ಸಂಕಷ್ಟ ದಲ್ಲಿದ್ದರು ಅದರ ಹಿನ್ನೆಲೆಯಲ್ಲಿ ದ್ರಾಕ್ಷಿ, ದಾಳಿಂಬೆ, ಮೆಕ್ಕೆಜೋಳ ಬೆಳೆಯು ವವರು, ನೆಲಗಡಲೆ, ಭತ್ತ, ಪ್ರಮುಖವಾಗಿ ಹತ್ತಿ ಬೆಳೆಯುವವರು ಇದ್ದಾರೆ. ನಿನ್ನೆ ಕೃಷಿ ಸಚಿವರೇ ಮೇಲ್ಮನೆಯಲ್ಲಿ ಉತ್ತರ ಕೊಟ್ಟಿದ್ದಾರೆ ಸುಮಾರು ನೂರು ಸಾವಿರಕ್ಕೂ ಹೆಚ್ಚಿನ ಹೆಕ್ಟೇರ್ ಪ್ರದೇಶದಲ್ಲಿ ಕಳಪೆ ಬೀಜ ಬಿತ್ತನೆಯಾಗಿ ನಷ್ಟವಾಗಿರುವುದರ ಬಗ್ಗೆ ಪ್ರಸ್ತಾಪಿಸಿ, ಸರ್ಕಾರ ರೈತರ ನೆರವಿಗೆ ಬರುತ್ತದೆ ಎಂದು ಪತ್ರಿಕೆಗಳಲ್ಲಿ ಹೇಳಿರುವುದನ್ನು ಗಮನಿಸಿದ್ದೇನೆ. ಇವತ್ತು ಎಲ್ಲಾ ರೈತರ ಸಮಸ್ಯೆ ಏನಿದೆ. ಕಬ್ಬಿನ ಬೆಳೆಗಾರರು ಅಷ್ಟೇ ಅಲ್ಲ, ಕಬ್ಬಿನ ಬೆಳೆಗಾರರ ಜೊತೆಗೆ ಬೇರೆ ಬೆಳೆ ಬೆಳೆಯತಕ್ಕಂಥವರು ಸಂಕಷ್ಟದಲ್ಲಿದ್ದಾರೆ. ಅವರ ನೆರವಿಗೂ ಇವತ್ತು ಸರ್ಕಾರ ಬರಬೇಕೆಂದು ಚರ್ಚೆ ಮಾಡಿದೆವು ನಿನ್ನೆ ಒಂದು ಕಡೆ ಆಗಬಾರದ ಕೆಟ್ಟ ಘಟನೆ ನಡೆಯಿತು. ಕಳೆದ ಮೂರು ದಿವಸಗಳಿಂದ ಪ್ರತಿಭಟನೆ ನಡೆಸುತ್ತಿದ್ದಂಥ ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡಂಥ ಕೆಟ್ಟ ಘಟನೆ ನಾವೇನು ಕೇಳಿದೆವು, ಆ ಸನ್ನಿವೇಶದಲ್ಲಿ ಹಲವಾರು ರೀತಿಯಲ್ಲಿ ಚರ್ಚೆಗಳಾಗಿವೆ. ಕೆಲವರು, ಕುಮಾರಸ್ವಾಮಿಯವರು ಸದನದಲ್ಲಿ ಹೆಚ್ಚಿನ ಸಮಯ ತೆಗೆದುಕೊಂಡಿದ್ದರಿಂದ ಸರ್ಕಾರ ಉತ್ತರ ಕೊಡುವುದು ಲೇಟಾಯಿತು. ಎಲ್ಲೋ ಒಂದು ಕಡೆಗೆ ಕುಮಾರಸ್ವಾಮಿಯವರು ಸದನದ ಕಲಾಪದಲ್ಲಿ ಹೆಚ್ಚಿನ ಸಮಯ ತೆಗೆದುಕೊಂಡಿದ್ದರಿಂದ ಸರ್ಕಾರ ಉತ್ತರ ಕೊಡುವುದಕ್ಕೆ ತೊಂದರೆಯಾಯಿತು, ಆದ್ದರಿಂದ ಅಂಥ ಘಟನೆಯಾಯಿತು ಎಂದು ನನ್ನ ತಲೆ ಮೇಲೆ ಹೊರಿಸಿಬಿಟ್ಟಿದ್ದಾರೆ. ನನ್ನಿಂದಲೇ ತೊಂದರೆಯಾಗಿ ಹೋಯಿತು ಎಂದು ಹೇಳಿಬಿಟ್ಟಿದ್ದಾರೆ. ಆದರೆ, ನಾನು ಸದನದಲ್ಲಿ ಎಂದೂ ಸದನದ ಕಲಾಪ ವ್ಯರ್ಥವಾಗಲಿಕ್ಕೆ ಅವಕಾಶ ಕೊಡದಿರುವವನು ಸದನದಲ್ಲಿ ಮುಕ್ತವಾದ ರೀತಿಯಲ್ಲಿ ರಾಜ್ಯದಲ್ಲಿರತಕ್ಕಂಥ ವಾಸ್ತವಾಂಶಗಳು, ರಾಜ್ಯದಲ್ಲಿರತಕ್ಕಂಥ ನಿಜವಾದ ಸಮಸ್ಯೆಗಳೇನಿವೆ, ಅದನ್ನು ಅಂಕಿ–ಅಂಶಗಳ ಸಮೇತ ಸದನದಲ್ಲಿ ಮಂಡಿಸಿ ಸರ್ಕಾರಕ್ಕೆ ಸಲಹೆ ಕೊಟ್ಟು ಸರ್ಕಾರದ ಮೂಲಕ ಸಮಸ್ಯೆಗಳಿಗೆ ಪರಿಹಾರ ದೊರಕತಕ್ಕಂಥ ತೀರ್ಮಾನಗಳಾಗಬೇಕೆನ್ನುವ ಹಿನ್ನೆಲೆಯಲ್ಲಿ, ನನ್ನ ತಿಳಿವಳಿಕೆಯಲ್ಲಿ ಹೇಳುವುದಾದರೆ, ನಾನು ಸರ್ಕಾರಕ್ಕೆ ಬಹಳ ಉತ್ತಮವಾದ

ರೀತಿಯಲ್ಲಿ ಸಲಹೆ ಕೊಡಲಿಕ್ಕೆ ಪ್ರಯತ್ನಿಸಿದ್ದೇನೆ. ಮೊನ್ನೆ ದಿನ ನಾನು ಮೂರೂವರೆ ಗಂಟೆಗಳ ಕಾಲ ಚರ್ಚೆ ಮಾಡಿ, ಎಲ್ಲಾ ರಾಜ್ಯಗಳಲ್ಲಿ ಯಾವ ಸಮಸ್ಯೆಗಳಿವೆ ಎಂಬುದರ ಬಗ್ಗೆ ಹೇಳಿದ್ದೇನೆ. ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆ, ನಾನು ಒಂದು ವಾರಗಳ ಕಾಲ ಬಾಗಲಕೋಟೆ, ಹುಬ್ಬಳ್ಳಿ-ಧಾರವಾಡ, ರಾಯಚೂರು, ಕೊಪ್ಪಳ, ಬಿಜಾಪುರ, ಈ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕೆಲವು ಹಳ್ಳಿಗಳಿಗೆ ಭೇಟಿ ಕೊಟ್ಟು ಆಯಾಯ ಜಿಲ್ಲೆಗಳ ರೈತರ ಸಮಸ್ಯೆಗಳ ಬಗ್ಗೆ ರೈತರಿಂದ ವಿಷಯ ಸಂಗ್ರಹಿಸಿದ್ದೇನೆ. ಸದನದಲ್ಲಿ ದ್ರಾಕ್ಷಿ ಬೆಳೆಗಾರರ ವಿಷಯದಲ್ಲಿ ಸುದೀರ್ಘವಾಗಿ ಏನು ಹೇಳಿದ್ದೇನೆ, ಈ ವಿಚಾರವಾಗಿ ಆ ದ್ರಾಕ್ಷಿ ಬೆಳೆಗಾರರ ಈ ಸಂಘದವರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಕಳೆದ 10 ವರ್ಷಗಳಿಂದ ಸುಮಾರು 9 ಜಿಲ್ಲೆಗಳಲ್ಲಿ ದ್ರಾಕ್ಷಿ ಬೆಳೆಗಾರರು ತಾವು ಬೆಳೆದಿರತಕ್ಕಂಥ ಬೆಳೆಗೆ ಕೇವಲ 4 ಅವಧಿಗೆ ಮಾತ್ರ ಲಾಭ ತೆಗೆದುಕೊಂಡಿದ್ದಾರೆ, 6 ವರ್ಷ ಅವರಿಗೆ ಸೂಕ್ತ ಬೆಲೆಯೇ ದೊರಕಿಲ್ಲ, ಜೊತೆಗೆ ಇವತ್ತು ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ದಾಳಿಂಬೆ ಬೆಳೆಗಾರರೂ ಕೂಡ ಅತ್ಯಂತ ದುಸ್ಥಿತಿಯಲ್ಲಿದ್ದಾರೆ ಕೊಪ್ಪಳ ಭಾಗದಿಂದ ದಾಳಿಂಬೆ ಬೆಳೆಗಾರರು ಕಳೆದ 5 ವರ್ಷಗಳಿಂದ ಬೆಂಗಳೂರಿಗೆ ಬಂದು ಹಲವಾರು ತಿಂಗಳು ಪ್ರತಿಭಟನೆ ನಡೆಸಿದ್ದಾರೆ. ಅವರು ಸುಮಾರು 205 ಕೋಟಿ ಸಾಲ ಮಾಡಿಕೊಂಡಿದ್ದಾರೆ. ಅದನ್ನು ಮನ್ನಾ ಮಾಡಿಸಿಕೊಳ್ಳಬೇಕೆಂದು ಹಿಂದಿನ ಸರ್ಕಾರದಿಂದಲೂ ಪ್ರಯತ್ನಪಟ್ಟರು. ಇವತ್ತು ಮೆಕ್ಕೆಜೋಳ ಬೆಳೆಯತಕ್ಕಂಥವರ ಬಗ್ಗೆ ಕೂಡ ಹೇಳುವುದಾದರೆ, ನಮ್ಮ ಕಾನೂನು ಸಚಿವರು 25 ಕ್ವಿಂಟಾಲ್ ಎಂದು ಏನು ಗೈಡ್ ಲೈನ್ ಇಟ್ಟಿದ್ದೇವೆ ಅದನ್ನು ತೆಗೆದು ಹಾಕಿದ್ದೇವೆಂದು ಹೇಳಿದರು. ಆದರೆ, ಆ ಬಗ್ಗೆ ಇನ್ನೂ ಆದೇಶವಾಗಿಲ್ಲವೆಂದು ನಮ್ಮ ಶಾಸಕ ಮಿತ್ರರು ನನ್ನ ಗಮನಕ್ಕೆ ತಂದರು.

ಶ್ರೀ ಟಿ.ಬಿ. ಜಯಚಂದ್ರ: ಆ ಬಗ್ಗೆ ಆದೇಶವಾಗಿದೆ, ನಿನ್ನೆಯೇ ಇಶ್ಯೂ ಮಾಡಿದ್ದೇವೆ.

ಶ್ರೀ ಹೆಚ್ ಡಿ ಕುಮಾರಸ್ವಾಮಿ: ಆದೇಶವಾಗಿದ್ದರೆ ಸಂತೋಷ ಅದೇ ರೀತಿಯಲ್ಲಿ ಭತ್ತ ಬೆಳೆಯತಕ್ಕಂಥ ಬೆಳೆಗಾರರಲ್ಲಿ ಅದರಲ್ಲೂ ನಾನು ಪ್ರಮುಖವಾಗಿ ಸಿಂಧನೂರು ಆ ಭಾಗದಲ್ಲಿ ಹೋಗಿದ್ದೆ. ಅಲ್ಲಿಯೂ ಕೂಡ ಅಕಾಲಿಕ ಮಳೆಯಿಂದ ಒಂದು ಕಡೆ ಭತ್ತದ ಇಳುವರಿಯೂ ಕಡಿಮೆಯಾಗಿದೆ. ಈಗ ಲೆವಿ ಸಂಗ್ರಹ ಮಾಡುವ ಹಿನ್ನೆಲೆಯಲ್ಲಿ ನಮ್ಮ ಭತ್ತದ ಬೆಳೆಗಾರರು ಕನಿಷ್ಠ 2000/- ದಿಂದ 2200/- ರೂಪಾಯಿ ಸಿಗಬೇಕೆನ್ನುವ ರೈತರ ಬಾವನೆ ಏನಿದೆ. ಆ ಎಲ್ಲಾ ವಿಷಯದ ಬಗ್ಗೆ ನಾನು ಸದನದಲ್ಲಿ ಗಮನ ಸೆಳೆದ್ದೇನೆ. ಕಬ್ಬು ಬೆಳೆಗಾರರಿಗೆ ಇರುವ ಸಮಸ್ಯೆಗಳಿಗೆ ಸರ್ಕಾರ ನಿನ್ನೆಯ ದಿವಸ ಒಂದು ಟನ್ ಕಬ್ಬಿಗೆ 150/- ರೂಪಾಯಿ ಇನ್‌ಸೆಂಟಿವ್ ಕೊಡತಕ್ಕಂಥ ತೀರ್ಮಾನ ಮಾಡಿದ್ದೀರಿ. ಇದಕ್ಕೆ ನನಗೆ ಸಂಪೂರ್ಣ ಸಮಾಧಾನವಿಲ್ಲ ಆದರೂ ಸರ್ಕಾರ ಈ ಒಂದು ತೀರ್ಮಾನ ಮಾಡಿದ್ದಕ್ಕೆ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಇವತ್ತು ಬೇರೆ ಬೇರೆ ಬೆಳೆ ಬೆಳೆದಿರತಕ್ಕಂಥ ದಾಳಿಂಬೆ ಬೆಳೆಗಾರರು, ದ್ರಾಕ್ಷಿ ಬೆಳೆಗಾರರು, ಮೆಕ್ಕೆಜೋಳ, ನೆಲಗಡಲೆ, ಪ್ರಮುಖವಾಗಿ ತೆಂಗು ಬೆಳೆಗಾರರು, ಕಳೆದ 6 ತಿಂಗಳುಗಳಿಂದ ಸತತವಾಗಿ ನಾವು ಚರ್ಚೆ ಮಾಡುತ್ತಿದ್ದರೂ ನಮ್ಮ ತೆಂಗು ಬೆಳೆಗಾರರಿಗೆ ಒಂದು ರೂಪಾಯಿ ಕೊಡತಕ್ಕಂಥ ನಿರ್ಧಾರ ಮಾಡಲಿಲ್ಲ. ಈ ಹಿನ್ನೆಲೆಯಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ, ತಾವು ಬೇಕಾದರೆ ಸರ್ವ ಪಕ್ಷಗಳ ಒಂದು ಸಭೆ ಕರೆಯಿರಿ. ಈಗ ನಾವು ನಿಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿಗಳೇನು ಇದೆ ಎಂಬುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಏಕೆಂದರೆ, ನಿಮ್ಮ ಕಷ್ಟಗಳು ನನಗೆ ಅರ್ಥವಾಗುತ್ತವೆ ಆದರೆ, ನಾನು ಮೊನ್ನೆ ಕೊನೆಯದಾಗಿ ಏನು ಹೇಳಿದ್ದೇನೆ, ಈ ಎಲ್ಲಾ ರೀತಿಯ ಬೆಳೆಯನ್ನು ಬೆಳೆಯುವ ರೈತರ ಕಷ್ಟ ಏನಿದೆ ಅದರ ನಿವಾರಣೆಗೆ ತಾವು ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುತ್ತೀರೆಂದು ಹೇಳಿದ್ದೀರಿ ನಿನ್ನೆ ನಮ್ಮ ಕೃಷಿ ಸಚಿವರು ಇದನ್ನು ಮುಂದಿನ ವರ್ಷ ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡುತ್ತೇವೆ, ಏಕೆಂದರೆ ಇದರಲ್ಲಿ ಹಲವಾರು ದೂರದೃಷ್ಟಿಯ ಕಾರ್ಯಕ್ರಮವನ್ನು ತರಬೇಕಾದರೆ ಅದಕ್ಕೆ ಉತ್ತಮವಾದಂಥ ಆಯೋಗ ರಚನೆ

ಮಾಡಬೇಕಾಗುತ್ತದೆ. ಮತ್ತು ಅದಕ್ಕೆ ಸಮಯ ಬೇಕೆಂದು ಹೇಳಿರುವುದನ್ನು ನಾನು ನೋಡಿದ್ದೇನೆ. ಮುಂದಿನ ವರ್ಷ ತಾವು ಕೃಷಿ ಬೆಲೆ ಆಯೋಗ ರಚನೆ ಮಾಡುವುದು. ಆದರೆ ಈ ವರ್ಷ ನಮ್ಮ ರೈತರು ಬಹಳ ಕಷ್ಟದಲ್ಲಿದ್ದಾರೆ. ನಿನ್ನೆ ಕಬ್ಬು ಬೆಳೆಗಾರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದರ ಹಿನ್ನೆಲೆಯಲ್ಲಿ ಅವರಿಗೆ ಸ್ವಲ್ಪ ಇನ್‌ಸೆಂಟಿವ್ ದೊರಕಿದೆ. ಆದರೆ, ಆ ಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳಲಿ ಎನ್ನುವ ನಿರೀಕ್ಷೆಯಿಟ್ಟುಕೊಂಡು ಆಮೇಲೆ ಅವರಿಗೆ ಪರಿಹಾರ ಕೊಡೋಣ ಎನ್ನುವಂಥದ್ದಾಗಬಾರದು. ಆ ರೈತರುಗಳನ್ನು ಉಳಿಸಿ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ ಅದೇನು ದೊಡ್ಡ ಮಟ್ಟದಲ್ಲಿಲ್ಲ, ದಾಳಿಂಬೆ. ದ್ರಾಕ್ಷಿ, ನೆಲಗಡಲೆ, ಭತ್ತ, ಮೆಕ್ಕೆಜೋಳ, ತೆಂಗು, ಇವೆಲ್ಲಾ ಬೆಳೆಗಳಿಗೆ ತಾವು ಬೆಂಬಲ ಬೆಲೆ ಕೊಡಬೇಕೆಂದು ತೀರ್ಮಾನಿಸುವುದಾದರೆ ಸಂತೋಷ ಭತ್ತದ ಬಗ್ಗೆ ಪತ್ರದ ಮುಖೇನ ಗಮನ ಸೆಳೆದಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ಬೆಳೆಯತಕ್ಕಂಥ ತರಕಾರಿ ಬೆಳೆ ಏನಿದೆ, ಅದು ಷೇರು ಮಾರ್ಕೆಟ್‌ಗಿಂತ ಡೇಂಜರ್ ಎಂದು ಹೇಳುತ್ತಿದ್ದರು. ಷೇರು ಮಾರ್ಕೆಟ್‌ನಲ್ಲಾದರೂ ನಾವು ಸ್ವಲ್ಪ ಧೈರ್ಯವಾಗಿ ಇರಬಹುದು. ಆದರೆ, ನಾವು ಬೆಳೆಯುವ ಬೆಳೆಯಲ್ಲಿ ಅದಕ್ಕಿಂತ worst condition ನಲ್ಲಿದ್ದೇವೆಂದು ಹೇಳುತ್ತಿದ್ದರು. ಆದ್ದರಿಂದ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇನೆ ಇವತ್ತೇನು ಕಬ್ಬು ಬೆಳೆಗಾರರಿಗೆ ಒಂದು ಔದರ್ಯ ತೋರಿಸಿದ್ದೀರಿ, ಅದು ಸಂಪೂರ್ಣವಾಗಿ ನಮಗೆ ಸಮಾಧಾನ ಇಲ್ಲ ಎನ್ನುವುದು ಬಹುಶಃ ನಮ್ಮ ಬಿಜೆಪಿಯ ಸದಸ್ಯರಲ್ಲಿಯೂ ಇದೆ ಆದರೆ, ಆ ಬೆಳೆಗಾರರನ್ನೂ ಉಳಿಸತಕ್ಕಂಥದ್ದಕ್ಕೆ ಏನಾದರೂ ಮಾಡಿ ಒಂದರಿಂದ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನೂ ಕೊಡುವುದರ ಬಗ್ಗೆ ಒಂದು ದಿಟ್ಟ ನಿರ್ಧಾರ ಮಾಡಿ ಈ ಬಗ್ಗೆ ತೀರ್ಮಾನ ಮಾಡಿ ಎಂದು ನಾನು ಈಗಲೂ ತಮ್ಮಲ್ಲಿ ಮನವಿ ಮಾಡುತ್ತೇನೆ. ತಾವು ಈಗ ಕಬ್ಬು ಬೆಳೆಗಾರರ ವಿಷಯದಲ್ಲಿ ಉತ್ತರ ಕೊಟಿದ್ದೀರಿ. ಬೇರೆ ಬೆಳೆ ಬೆಳೆಯುವಂತಹವರಿಗೆ ರಾಜ್ಯ ಸರ್ಕಾರದಿಂದಲೇ ಏನಾದರೂ ಒಂದು ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ನೀವು ಪತ್ರ ಬರೆದಿದ್ದೀರಿ. ಕೇಂದ್ರ ಸರ್ಕಾರ ಏನಾದರೂ ಆರ್ಥಿಕ ನೆರವು ಕೊಡಬಹುದು

ಎನ್ನುವ ನಿರೀಕ್ಷೆ ನೀವು ಇಟ್ಟುಕೊಂಡಿರಬಹುದು. ಆದರೆ, ಈಗಿನ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದಿಂದ ನೀವು ತಕ್ಷಣ ಆರ್ಥಿಕ ನೆರವು ಪಡೆಯುವುದು ಎಲ್ಲೋ ಒಂದು ಕಡೆಗೆ ಸಾಧ್ಯವಾಗದಿರಬಹುದು. ಅದರ ಹಿನ್ನೆಲೆಯಲ್ಲಿ ನಮ್ಮ ಎಲ್ಲಾ ರೈತರಿಗೆ ಭರವಸೆ ಕೊಡಿ. ರೈತರ ಆತ್ಮಹತ್ಯೆ ಯಿಂದ ಅವರ ರೈತ ಕುಟುಂಬಗಳು ಅನಾಥರಾಗಬಾರದು. ಆ ಹಿನ್ನೆಲೆಯಲ್ಲಿ ರೈತರಲ್ಲಿ ಒಂದು ಆತ್ಮಸ್ಥೈರ್ಯ. ಆತ್ಮವಿಶ್ವಾಸ, ಮೂಡಿಸುವುದಕ್ಕೆ ಕನಿಷ್ಠ ನಿಮ್ಮ ಮೇಲೆ ಒಂದೂವರೆಯಿಂದ ಎರಡು ಕೋಟಿ ರೂಪಾಯಿಗಳ burden ಬರಬಹುದು. ನಾನು ಮೊನ್ನೆ ಕೂಡ ಹೇಳಿದೆ. ಈ ವರ್ಷದ ನಿಮ್ಮ ಆಯವ್ಯಯದಲ್ಲಿ ಬಹುಶಃ ಯಾವ planning expenditure ಮಾಡಬೇಕಾಗಿದೆ, ಹಲವಾರು ಇಲಾಖೆಗಳಿಗೆ allot ಮಾಡಿದ್ದೀರಿ. ಅದು ಸಂಪೂರ್ಣವಾಗಿ ಬಳಕೆಯಾಗಲಾರದು. ಬಹುಶಃ ನೀವು ಒಂಭತ್ತೂವರೆ ಸಾವಿರ ಕೋಟಿ ನೀರಾವರಿ ಇಲಾಖೆಗೆ ಇಟ್ಟಿದ್ದೀರಿ. ಈ ಒಂಭತ್ತೂವರೆ ಸಾವಿರ ಕೋಟಿ, ಇರತಕ್ಕಂಥ 3–4 ತಿಂಗಳಲ್ಲಿ ಲೆಕ್ಕಚಾರ ಮಾಡುವುದಾದರೆ. ಅಷ್ಟು ಹಣ ಸಂಪೂರ್ಣವಾಗಿ ಬಳಕೆಯಾಗಲಾರದು. ನಾನು ರೈತರ ಪರವಾಗಿ ಮನವಿ ಮಾಡುತ್ತೇನೆ ರಾಜ್ಯದ ಬೇರೆ ಯಾವುದೇ ಭಾಗದಲ್ಲೂ ರೈತರು ಇವತ್ತು ಆತ್ಮಹತ್ಯೆಗೆ ಶರಣಾಗದೆ ಇರತಕ್ಕಂಥ ರೀತಿಯಲ್ಲಿ ಅವರಿಗೆ ವಿಶ್ವಾಸ ಮೂಡಿಸಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳುವುದರ ಮೂಲಕ ನೆನಪು ಮಾಡಿಕೊಡಲಿಕೆ ಬಯಸುತ್ತೇನೆ. ತಾವು 1995ನೇ ಇಸವಿಯಲ್ಲಿ ಆರ್ಥಿಕ ಸಚಿವರಾಗಿದ್ದಾಗ ಆಗ ಕೇಂದ್ರ ಸರ್ಕಾರದವರು ವಿರೋಧಿಸಿದರು. ನಬಾರ್ಡ್‌ನವರು ವಿರೋಧಿಸಿದರು. ಅಂಥ ವಿರೋಧವನ್ನೂ ಲೆಕ್ಕಿಸದೇ ಅವತ್ತು ತಮಗೆ ಇರತಕ್ಕಂಥ ವಾರ್ಷಿಕ ಬಜೆಟ್ ಬಹುಶಃ 3800 ದಿಂದ 3900 ಕೋಟಿ ಬಜೆಟ್. ಅಂಥ ಸಮಯದಲ್ಲಿ ತಾವು 950/– ಕೋಟಿ ರೂಪಾಯಿಗಳ ಇನ್‌ಸೆಂಟಿವ್ ಕೊಟ್ಟಿದ್ದೀರಿ. ಅದನ್ನು ನಾನು ಸ್ಮರಿಸಿಕೊಳ್ಳಲಿಕ್ಕೆ ಬಯಸುತ್ತಿದ್ದೇನೆ. ಅಂಥ ಕಾಲದಲ್ಲಿ 1995ರಲ್ಲಿ ರೈತರಿಗೇನು 950 ಕೋಟಿ ಇನ್‌ಸೆಂಟಿವ್ ಕೊಟ್ಟಿದ್ದೀರಿ. ಇವತ್ತು ನಮ್ಮ ರೈತರು ಬಹಳ ಕಷ್ಟದಲ್ಲಿದ್ದಾರೆ ಅವರಿಗೆ ಧ್ವನಿ ಇಲ್ಲ, ಇವತ್ತು ಎಲ್ಲರ ಮನೆ ಬಾಗಿಲಿಗೆ ಹೋಗಿದ್ದಾರೆ. ನಿಮ್ಮ ಜೊತೆಗೂ ಚರ್ಚೆ ಮಾಡಿದ್ದಾರೆ ದಯವಿಟ್ಟು ಅವರನ್ನು

ಆತಂಕಕ್ಕೀಡು ಮಾಡಬೇಡಿ. ಇವತ್ತು ಕಬ್ಬು ಬೆಳೆಗಾರರಿಗೆ 150/- ರೂಪಾಯಿ ಬೆಂಬಲ ಬೆಲೆ ಕೊಟ್ಟು 450 ಕೋಟಿ ಇನ್‌ಸೆಂಟಿವ್ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ಇತರ ರೈತರುಗಳನ್ನು ಉಳಿಸಿಕೊಡಿ. ಯಾವುದೇ ಕಾರಣಕ್ಕೂ ನಮ್ಮ ರಾಜ್ಯದಲ್ಲಿ ಮತ್ತೆ ನಿಮ್ಮ ಸರ್ಕಾರದಲ್ಲಿ ಈ ರೀತಿ ಆಗಬಾರದು. ಏಕೆಂದರೆ, ನಿನ್ನೆ ಸದನದಲ್ಲಿ ಕೂಗುತ್ತಿದ್ದುದನ್ನು ನೋಡಿದೆ. ಬಿಜೆಪಿಯವರು ರೈತರಿಗೆ ವಿಷ ಕೊಟ್ಟ ಸರ್ಕಾರ, ವಿಷ ಕೊಟ್ಟು ಕೊಂದರು ಎಂದು ಹೇಳಿದರು ತಾವು, ಹಾವೇರಿಯಲ್ಲಿ ಗುಂಡು ಹಾರಿಸಿ ರೈತರನ್ನು ಸಾಯಿಸಿರತಕ್ಕಂಥ ಸರ್ಕಾರ ಎಂದು ಹೇಳಿದಿರಿ. ಆದರೆ, ಯಾವುದೇ ಕಾರಣಕ್ಕೂ ಪುನಃ ನಿಮಗೆ ಕೆಟ್ಟ ಹೆಸರು ಬರುವುದು ಬೇಡ. ಅದು ನಿಮ್ಮಿಂದ ಆಗಿದೆಯೋ ಅಥವಾ ಇಲ್ಲವೋ ಅದನ್ನು ಹೇಳುವುದಕ್ಕೆ ಹೋಗವುದಿಲ್ಲ. ಇವತ್ತಿನ ದಿವಸ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆದರೆ ಪುನಃ ಆ ರೀತಿಯ ವಾತಾವರಣ ಈ ರಾಜ್ಯದಲ್ಲಿ ನಿರ್ಮಾಣವಾಗಬಾರದೆಂಬ ದೃಷ್ಟಿಯಿಂದ ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ರೈತರನ್ನು ಉಳಿಸುವುದಕ್ಕೆ ದಯವಿಟ್ಟು ಒಂದು ತೀರ್ಮಾನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವತ್ತಿನ ದಿವಸ ಏನು ರೈತರಿಗೆ 950 ಕೋಟಿ ರೂಪಾಯಿಗಳಷ್ಟು incentive ಅನ್ನು ಕೊಟ್ಟ ರೀತಿಯಲ್ಲಿಯೇ ಇವತ್ತಿನ ದಿವಸ minimum 2000 ಕೋಟಿ ರೂಪಾಯಿಗಳನ್ನು ಕೊಡುವುದರ ಮೂಲಕ ಎಲ್ಲಾ ಬೆಳೆ ಬೆಳೆಯತಕ್ಕಂಥ ರೈತರನ್ನು ಉಳಿಸುವುದಕ್ಕೆ ತೀರ್ಮಾನ ಮಾಡಿ. ನಿಮ್ಮ ಜೊತೆಯಲ್ಲಿ ನಾವೆಲ್ಲರೂ ಇದ್ದು ನಿಮಗೆ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಈ ಬಗ್ಗೆ ನಿಮಗೆ ವಿಶೇಷವಾಗಿ ಮನವಿ ಮಾಡುತ್ತೇನೆ ಮೊನ್ನೆ ದಿವಸ ಮಾನ್ಯ ರಮೇಶ್ ಕುಮಾರ್‌ರವರು ಮತ್ತು ಮಾನ್ಯ ಸಿದ್ದು ನ್ಯಾಮಗೌಡರು ಕಾರ್ಖಾನೆಯ ಮಾಲೀಕರ ಪರವಾಗಿ ಬಹಳ ಅಡ್ವೊಕೇಟ್ ಮಾಡುತ್ತಿದ್ದರು ಆ ಸಂದರ್ಭದಲ್ಲಿ ಅವರು ಮಾತನಾಡುತ್ತಿರುವಾಗ ಗ್ಯಾಟ್‌ನ ಒಪ್ಪಂದದ ಬಗ್ಗೆ ಚರ್ಚೆಗೆ ಬಂತು. ಆ ಸಂದರ್ಭದಲ್ಲಿ ನಮ್ಮ ಮಾನ್ಯ ದತ್ತಾರವರು ಗ್ಯಾಟ್ ಒಪ್ಪಂದದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದಾಗ ಸದನದಲ್ಲಿ ಒಂದು ವಿಷಯವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಆ ವಿಷಯವನ್ನು ನಿಮಗೆ

ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಆ ವಿಷಯ ರೆಕಾರ್ಡ್‌ನಲ್ಲಿ ತಪ್ಪಾಗಿ ಹೋಗಬಾರದು. ಆ ಒಂದು ಗ್ಯಾಟ್ ಒಪ್ಪಂದ ಆದಾಗ 9 ರಾಜ್ಯದ ಮುಖ್ಯಮಂತ್ರಿಗಳಲ್ಲಿ ಸನ್ಮಾನ್ಯ ದೇವೇಗೌಡರು ಅವರು ಒಬ್ಬರು ಇದ್ದರೆಂದು ತಾವು ಹೇಳಿದ್ದೀರಿ. ಆದರೆ, ಮಾನ್ಯ ದೇವೇಗೌಡರು ಅದರ ಪಾಲುದಾರರಲ್ಲ. ಅವರು ಗ್ಯಾಟ್ ವಿಷಯದಲ್ಲಿ ಮೊದಲಿನಿಂದಲೂ ಸಹ ವಿರೋಧ ಮಾಡಿಕೊಂಡು ಬಂದಿದ್ದಾರೆ ಬಹುಶಃ ಮಾನ್ಯ ಸಿದ್ದರಾಮಯ್ಯನವರೂ ಸಹ ಅವರ ಜೊತೆಯಲ್ಲಿದ್ದರು. ಗ್ಯಾಟ್ ಒಪ್ಪಂದವಾಗಬೇಕಾದರೆ ಕಬ್ಬನ್ ಪಾರ್ಕ್‌ನಲ್ಲಿ ರೈತರ ಪ್ರತಿಭಟನೆ ಆಗಿದ್ದಂಥದ್ದನ್ನು ನಾನು ನೆನಪಿಸಿಕೊಳ್ಳಬಯಸುತ್ತೇನೆ. ಅವರು 1989ರಲ್ಲಿ ಪಾರ್ಲಿಮೆಂಟ್‌ಗೆ ಹೋದರು. ಪಾರ್ಲಿಮೆಂಟ್‌ನಲ್ಲಿ ಈ ಒಂದು ವಿಷಯ ಪ್ರಸ್ತಾಪವಾದಾಗ ಗ್ಯಾಟ್ ಒಪ್ಪಂದದ ವಿರುದ್ಧ ಅತ್ಯಂತ ಖಂಡತುಂಡವಾಗಿ ವಿರೋಧ ಮಾಡಿದಂಥದ್ದನ್ನು ಇವತ್ತು ನೆನಪಿಸಿಕೊಡುತ್ತೇನೆ. 1947ನೇ ಇಸವಿಯಲ್ಲಿ ಮೊದಲ ಬಾರಿಗೆ ಗ್ಯಾಟ್ ಒಪ್ಪಂದ ಆಗಿರುತ್ತದೆ. ಪುನಃ ಅದು 1994ಗೆ end ಆಗುತ್ತದೆ. ಅಂದರೆ 15ನೇ ಸೆಪ್ಟೆಂಬರ್ 1994ರಲ್ಲಿ ಈ ಗ್ಯಾಟ್ ಒಪ್ಪಂದವಾಗಿದೆ ಸನ್ಮಾನ್ಯ ದೇವೇಗೌಡರು ಇದ್ದಂಥ ಕಾಲದಲ್ಲಿ ಇದಕ್ಕೆ ಅಗ್ರಿಮೆಂಟ್ ಆಗಿದೆ ಎಂದು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಸನ್ಮಾನ್ಯ ದೇವೇಗೌಡರು ಪಾಲುದಾರರಲ್ಲ. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದು 1994 ಡಿಸೆಂಬರ್ 9ನೇ ತಾರೀಖಿನ ದಿವಸ ಇರಬೇಕು. ಗ್ಯಾಟ್ ಅಗ್ರಿಮೆಂಟ್ ಆಗಿದ್ದು ಸೆಪ್ಟೆಂಬರ 1994ನಲ್ಲಿ. ಆದ್ದರಿಂದ, ಅದರಲ್ಲಿ ಮಾನ್ಯ ದೇವೇಗೌಡರ ಪಾತ್ರ ಇಲ್ಲ. 1997ರಲ್ಲಿ ಅವರು ಪ್ರಧಾನಮಂತ್ರಿ ಯಾಗಿದ್ದ ಅವಧಿಯಲ್ಲಿ World Bank ನವರ ಒತ್ತಾಯಗಳಿಗೆ ಮಣಿಯದೆ ಪ್ರಧಾನ ಮಂತ್ರಿಯಾಗಿ ಹಲವಾರು ರೀತಿಯ ತೀರ್ಮಾನಗಳನ್ನು ಮಾಡಿದ್ದಾರೆ ಅವರು ಮೊದಲಿನಿಂದಲೂ ರೈತರ ಪರವಾಗಿಯೇ ಹೋರಾಟ ಮಾಡಿಕೊಂಡು ಬಂದಿತಕ್ಕಂಥವರು. ಆರ್ಥಿಕ ಸಮ್ಮೇಳನಕ್ಕಾಗಿ ಅವರು ದಾಮೋಸ್‌ಗೆ ಹೋಗಿದ್ದರು. ಆದರೆ, ಅವತ್ತಿನ ದಿವಸ ಸನ್ಮಾನ್ಯ ನರಸಿಂಹರಾವ್‌ಯರು ಪ್ರಧಾನ ಮಂತ್ರಿಗಳಾಗಿದ್ದರು. ರಾಷ್ಟ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷ ಹೊರತುಪಡಿಸಿ ಬೇರೆ ಪಕ್ಷದ ಮುಖ್ಯಮಂತ್ರಿಯಾಗಿರುವ

ತಾವೂ ಸಹ ಒಂದು ನಿಯೋಗದಲ್ಲಿ ದಾವೋಸ್‌ನಲ್ಲಿ ನಡೆಯುವ ಆರ್ಥಿಕ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಮಾನ್ಯ ನರಸಿಂಹರಾವ್‌ಯರು ಅವರ ಮೇಲೆ ಒತ್ತಾಯ ಮಾಡಿ ಅಲ್ಲಿಗೆ ಕಳುಹಿಸಿಕೊಟ್ಟರು ಗ್ಯಾಟ್ ಒಪ್ಪಂದದಲ್ಲಿ ಮಾನ್ಯ ದೇವೇಗೌಡರ ಪಾತ್ರ ಇಲ್ಲ. ಈ ವಿಷಯ ಸದನದಲ್ಲಿ ತಪ್ಪಾಗಿ ದಾಖಲೆಗೆ ಹೋಗಬಾರದೆಂಬ ಹಿನ್ನೆಲೆಯಲ್ಲಿ ಈ ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಒಟ್ಟಾರೆಯಾಗಿ ಇವತ್ತಿನ ದಿವಸ ಸದನದ ಕಲಾಪಗಳು ನಡೆಯಬೇಕೆಂದು ನಮ್ಮ ಬಿಜೆಪಿ ಪಕ್ಷದ ಸ್ನೇಹಿತರಲ್ಲಿ ನಾನು ಮನವಿ ಮಾಡುತ್ತೇನೆ. ಉತ್ತರ ಕರ್ನಾಟಕದ ಈ ಭಾಗದಲ್ಲಿ 10 ದಿನಗಳ ಕಾಲ ಸದನವನ್ನು ನಡೆಸಬೇಕೆಂದು ತಾವು ನಿರ್ಧಾರ ಮಾಡಿ ನಾವೆಲ್ಲರೂ ಇಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಮುಂದಿನ 6 ದಿನಗಳ ಕಾಲ ಸದನ ನಡೆಯಬೇಕು. ಇವತ್ತಿನ ದಿವಸ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಹಾಗೂ ಪಂಚಾಯತ್ ರಾಜ್ ಇಲಾಖೆಯಲ್ಲಿರುವ ಅನೇಕ ನ್ಯೂನತೆಗಳ ಬಗ್ಗೆ ಚರ್ಚೆ ಆಗಬೇಕಾಗಿದೆ, ಹಲವಾರು ವಿಷಯಗಳ ಬಗ್ಗೆ ಏನು ಚರ್ಚೆ ಆಗಬೇಕಾಗಿದೆ ಆದ್ದರಿಂದ, ಬಿಜೆಪಿ ಸ್ನೇಹಿತರಿಗೂ ಮನವಿ ಮಾಡುತ್ತೇನೆ ಹಾಗೆಯೇ, ಮಾಧ್ಯಮದ ಸ್ನೇಹಿತರಿಗೂ ಸಹ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಎಲ್ಲೋ, ಒಂದು ಕಡೆ ಮಾಧ್ಯಮದ ಸ್ನೇಹಿತರು ಏನು ಮಾಡುತ್ತಿದ್ದಾರೆಂದರೆ, ಸದನದಲ್ಲಿ ಉತ್ತಮವಾದಂಥ ರೀತಿಯ ಯಾವೊಂದು ಚರ್ಚೆಗಳು ಆಗುತ್ತಿವೆಯೋ ಅದರ ಬಗ್ಗೆ ಮತ್ತು ಉತ್ತಮವಾದಂಥ ಸಲಹೆಗಳನ್ನು ಕೊಡುವಂಥವುಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿಲ್ಲ. ಆದರೆ, ಇಲ್ಲಿ ಧರಣಿ ನಡೆಯುವಂಥದ್ದನ್ನು ಬಹಳ ದೊಡ್ಡ ಮಟ್ಟದಲ್ಲಿ ಬಿಂಬಿಸಲಾಗುತ್ತಿದೆ. ಇದಕ್ಕೆ ಮಾನ್ಯ ಯಡಿಯೂರಪ್ಪನವರ ಸ್ಫೂರ್ತಿಯಾಗಿರಬೇಕೇನೋ ಗೊತ್ತಿಲ್ಲ. ಅಂದರೆ, ಶಾದಿಭಾಗ್ಯ ವಿಷಯದಲ್ಲಿ ಅವರೊಬ್ಬರೇ ಇಲ್ಲಿ ಧರಣಿ ಕುಳಿತಾಗ ಮಾಧ್ಯಮಗಳು ವಿಧಾನಸಭೆಯಲ್ಲಿ ನಡೆದಂಥ ಚರ್ಚೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಲಿಲ್ಲ. ಹೆಚ್ಚಿನ ರೀತಿಯಲ್ಲಿ ಮಾನ್ಯ ಯಡಿಯೂರಪ್ಪನವರ ಧರಣಿಯನ್ನು ಫೋಕಸ್ ಮಾಡುವುದಕ್ಕೆ ಹೊರಟಾಗ ಅದರ influence ನಮ್ಮ ಸ್ನೇಹಿತರ ಮೇಲೆ ಬಂತೇನೋ

ಗೊತ್ತಿಲ್ಲ. ನಿನ್ನೆ ದಿವಸ ಶಾದಿ ಭಾಗ್ಯ ವಿಷಯ ಚರ್ಚೆ ಆಗಬೇಕಾಗಿತ್ತು ಆದರೆ, ರೈತ ಆತ್ಮಹತ್ಯೆ ಮಾಡಿಕೊಂಡಾಗ ಶಾದಿಭಾಗ್ಯ ವಿಚಾರ ಈಗ ಮರೆತು ಬಿಟ್ಟರು. ಈಗ ಇದನ್ನು ಶುರು ಮಾಡಿದ್ದಾರೆ. ಆದ್ದರಿಂದ, ನಮ್ಮ ಸ್ನೇಹಿತರಲ್ಲಿ ಮನವಿ ಮಾಡುವುದೇನೆಂದರೆ, ಉಳಿದ 6 ದಿನಗಳ ಕಾಲ ಉತ್ತರ ಕರ್ನಾಟಕದ ಸಮಸ್ಯೆಗಳಿರಬಹುದು, ಹಳೆಯ ಕರ್ನಾಟಕ ಭಾಗದ ಸಮಸ್ಯೆಗಳಿರಬಹುದು, ಹಾಗೆಯೇ ಹಲವಾರು ಇಲಾಖೆಗಳಲ್ಲಿರತಕ್ಕಂಥ ವಿಷಯಗಳ ಬಗ್ಗೆ ಹಾಗೂ ನಾವು ವಿರೋಧ ಪಕ್ಷದಲ್ಲಿದ್ದು ಹಲವಾರು ಸಮಸ್ಯೆಗಳನ್ನು ಕ್ರೋಡೀಕರಿಸಿದ್ದೇವೆ. ಹಾಗೆಯೇ ಸರ್ಕಾರ ಮಾಡುವ ಹಲವಾರು ನಿರ್ಧಾರಗಳಲ್ಲಿ ಹಾದಿ ತಪ್ಪಿಸತಕ್ಕಂಥ ಕೆಲಸಗಳು ಏನು ನಡೆಯುತ್ತವೆಯೋ ಅವೆಲ್ಲವನ್ನೂ ಸರ್ಕಾರದ ಗಮನಕ್ಕೆ ತಂದು ಸರ್ಕಾರವನ್ನು ಸರಿದಾರಿಗೆ ತಂದು ಇವತ್ತು ಸದನದಲ್ಲಿ ಉತ್ತಮವಾದಂಥ ಚರ್ಚೆಗಳಾಗಿ ರಾಜ್ಯದ ಜನತೆಗಳಿಗೆ ಅನುಕೂಲವಾಗಬೇಕು. ಅದರ ಹಿನ್ನೆಲೆಯಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ 2500 ರೂಪಾಯಿ ಘೋಷಣೆ ಮಾಡಿದ್ದಾರೆ. ಅದರ ಜೊತೆಗೆ 150 ರೂಪಾಯಿ incentive ಸಹ ಕೊಟ್ಟಿದ್ದೀರಿ. ಹಾಗೆಯೇ 2500 ರೂಪಾಯಿಗಳಲ್ಲಿ ತೆರಿಗೆ ರೂಪದಲ್ಲಿ ಸುಮಾರು 300 ಕೋಟಿ ರೂಪಾಯಿ ಸರ್ಕಾರಕ್ಕೆ ಬರತಕ್ಕಂಥದ್ದನ್ನು ರಿಯಾಯಿತಿ ನೀಡಿ ಕಾರ್ಖಾನೆ ಮಾಲೀಕರಿಗೆ ಮತ್ತು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ತೀರ್ಮಾನ ಮಾಡಿದ್ದೀರಿ. ಆದ್ದರಿಂದ, ಈ ಸಂದರ್ಭದಲ್ಲಿ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಹಠ ಹಿಡಿಯುವುದು ಬೇಡ. ಉತ್ತಮವಾದಂಥ ಚರ್ಚೆಯಾಗಲಿ. ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದುಗೋಸ್ಕರ ಸರ್ಕಾರ ಕಬ್ಬು ನಿಯಂತ್ರಣ ಆ್ಯಕ್ಟ್ ಅನ್ನು ತಂದಿದ್ದಾರೆ ಏಕೆಂದರೆ, ಕಾರ್ಖಾನೆಯ ಮಾಲೀಕರು 1800 ಮತ್ತು 2000 ರೂಪಾಯಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಇಲ್ಲಿ 500 ರೂಪಾಯಿಗಳನ್ನು ಕೊಡುವವರು ಯಾರು? ಇದಕ್ಕೆ ಗ್ಯಾರಂಟಿ ಯಾರು ಕೊಡುತ್ತಾರೆಂಬುದು ನಮಗೂ ಸಹ ಸ್ವಲ್ಪ ಅನುಮಾನ ಇದೆ. ಈ ಬಗ್ಗೆ ಬಿಜೆಪಿ ಸದಸ್ಯರಿಗೆ ಏನು ಅನುಮಾನ ಇದೆಯೋ ಅದೇ ಅನುಮಾನ ನಮಗೂ ಸಹ ಇದೆ ಆದರೆ, ಸರ್ಕಾರ ಈಗ ನಿಯಂತ್ರಣ ಕಾಯಿದೆ ತಂದಿದೆ. ಆದರೆ, ಈ

ಕಾಯಿದೆ ಕಾಟಾಚಾರದ ಕಾಯಿದೆ ಆಗಬಾರದು, ಇವತ್ತು ಕಾರ್ಖಾನೆಯ ಮಾಲೀಕರು ಏನೊಂದು ಒಪ್ಪಂದ ಮಾಡಿಕೊಂಡಿರುವುದಕ್ಕೆ ಅವರು stick on ಆಗತಕ್ಕಂಥ ನಿರ್ಧಾರ ಮಾಡಿದಾಗ ಈಗಾಗಲೇ ರೈತ ಮುಖಂಡರು ಮತ್ತು ಕಾರ್ಖಾನೆಯ ಮಾಲೀಕರ ಮೂರು ಸಭೆಗಳನ್ನು ಸರ್ಕಾರ ಮಾಡಿ ಅಂತಿಮವಾಗಿ ದಕ್ಷಿಣ ಕನ್ನಡ ಭಾಗದಲ್ಲಿರತಕ್ಕಂಥ ಕಾರ್ಖಾನೆಗಳಿಗೆ ex-gate ಮತ್ತು ಈ ಭಾಗದಲ್ಲಿ ex-field ಎಂದು ತೀರ್ಮಾನ ಮಾಡಿಕೊಂಡಿದ್ದೀರಿ. ಸರ್ಕಾರದ ಈ ತೀರ್ಮಾನವನ್ನು ಉಲ್ಲಂಘನೆ ಮಾಡಿದರೆ ಸರ್ಕಾರ ಕಠಿಣವಾದಂಥ ರೀತಿಯಲ್ಲಿ ಒಂದು ದಿಟ್ಟವಾದ ನಿರ್ಧಾರವನ್ನು ಮಾಡುವುದು ಮುಖಾಂತರ ಆ ರೈತನಿಗೆ 2650 ರೂಪಾಯಿ ಸಂಪೂರ್ಣವಾಗಿ ಹೋಗತಕ್ಕಂಥದ್ದಕ್ಕೆ ದಿಟ್ಟವಾದಂಥ ನಿರ್ದಾರವನ್ನು ಮಾಡಿದರೆ ಅದಕ್ಕೆ ಸಹಕಾರ ಕೊಡುವುದಕ್ಕೆ ನಾವೆಲ್ಲರೂ ತಯಾರಾಗಿದ್ದೇವೆ ನಿನ್ನೆ ದಿವಸದಿಂದ ಸದನ ಎಲ್ಲೋ ಒಂದು ಕಡೆ ದಾರಿ ತಪ್ಪಿದೆ. ಆದ್ದರಿಂದ, ಇವತ್ತು ಉತ್ತಮವಾದಂಥ ರೀತಿಯಲ್ಲಿ ಮುಕ್ತವಾದಂಥ ಚರ್ಚೆ ಮಾಡೋಣ. ಹಠ ಮಾಡುವುದು ಬೇಡ. ಸದನ ಸುಗಮವಾಗಿ ಮತ್ತು order ನಲ್ಲಿ ನಡೆಯುವುದಕ್ಕೆ ತಾವು ಸಹಕಾರ ಕೊಡಿ ಎಂದು ಬಿಜೆಪಿ ಸ್ನೇಹಿತರಲ್ಲಿ ಮನವಿ ಮಾಡುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ – ಧಾರವಾಡ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕಬ್ಬು ಬೆಳೆಗಾರರ ಸಮಸ್ಯೆಗೆ ಸಂಬಂಧಪಟ್ಟಂತೆ ನಿನ್ನೆ ದಿವಸ ಒಂದು ಘೋಷಣೆಯನ್ನು ಮಾಡಿದರು. ಮತ್ತೆ ಇವತ್ತು ಕೂಡ ಅದೇ ಸ್ಟ್ಯಾಂಡ್‌ಅನ್ನು ಸದನದ ಮುಂದೆ ಇಟ್ಟಿದ್ದಾರೆ. ನಿನ್ನೆದಿವಸ ನಡೆದಂಥ ಆ ರೈತನ ಆತ್ಮಹತ್ಯೆ ಬಹಳ ಒಂದು ದೊಡ್ಡ ದುರಂತ. ಉತ್ತರ ಕರ್ನಾಟಕದ ಭಾಗದಲ್ಲಿ ಸುವರ್ಣಸೌಧವನ್ನು ಕಟ್ಟಿಸಿದ ಮೇಲೆ ಕಳೆದ ಬಾರಿ ನಾವು ಇಲ್ಲಿ ಅಧಿವೇಶನ ಮಾಡಿದ್ದೇವೆ. ಈ ಬಾರಿ ಕೂಡ ಅಧಿವೇಶನ ಬಹಳ ಉತ್ತಮ ರೀತಿಯಲ್ಲಿ ಪ್ರಾರಂಭವಾಗಿತ್ತು. ಕಳೆದ ಮೂರು ದಿವಸಗಳಿಂದ 50 ಸಾವಿಕ್ಕಿಂತ ಹೆಚ್ಚು ರೈತರು ಸುವರ್ಣಸೌಧದ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹವನ್ನು

ಪ್ರಾರಂಭ ಮಾಡಿದ್ದರು. ನಿನ್ನೆದಿವಸ ನಡೆದಂಥ ಅನಾಹುತ ಬಹುಶಃ ಯಾವುದೇ ಒಂದು ವಿಧಾನಸಭೆಯ ಕಲಾಪಗಳು ನಡೆಯುವಂಥ ಸಂದರ್ಭದಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ ಪರಿಸ್ಥಿತಿ ಬಂದಿದ್ದು ಒಂದು ದೊಡ್ಡ ದುರಂತ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಂದರೆ, ರೈತರ ಸಮಸ್ಯೆಗಳು ಎಷ್ಟು ಭೀಕರವಾಗಿವೆ ಮತ್ತು ಎಷ್ಟು ಗಂಭೀರವಾಗಿವೆ ಎಂಬುದನ್ನು ಇದು ತೋರಿಸುವುದಕ್ಕೆ ಸಾಧ್ಯವಿದೆ. ನನ್ನ ಒಂದು ಅಭಿಪ್ರಾಯದ ಪ್ರಕಾರ ಸರ್ಕಾರ ಕಬ್ಬು ಬೆಳೆಗಾರರ ಸಮಸ್ಯೆಗೆ ಸ್ಪಂದನೆ ಮಾಡುವುದಕ್ಕೆ ಎಲ್ಲೋ ಒಂದು ಕಡೆ ತಡ ಮತ್ತು ನಿರ್ಲಕ್ಷ್ಯ ಆಯಿತೆಂಬುದು ನನ್ನ ಅಭಿಪ್ರಾಯವಾಗಿದೆ. ಇವತ್ತು SAP ಕಾನೂನಿನ ಬಗ್ಗೆ ನಾವು ಮಾತನಾಡಿದ್ದೇವೆ. ಕಬ್ಬು ಬೆಳೆಗಾರರ ಸಮಸ್ಯೆ ಮತ್ತು ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ವಿಧಾನಸಭೆಯ ಅಧಿವೇಶನದಲ್ಲಿ ನಡೆಯುವ ಚರ್ಚೆಯನ್ನು ಇಡೀ ಉತ್ತರ ಕರ್ನಾಟಕದ ಜನರು ನೋಡುತ್ತಿದ್ದಾರೆ. ಅಂದರೆ, ನಮ್ಮ ಭಾಗದ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಯಾಗಿ ನಮ್ಮ ಸಮಸ್ಯೆಗಳಿಗೇನೂ ಪರಿಹಾರ ಸಿಗುತ್ತದೆಂಬ ಒಂದು ಆಶಾ ಭಾವನೆಯನ್ನು ಈ ಭಾಗದ ಜನರು ಇಟ್ಟುಕೊಂಡಿದ್ದಾರೆ. ಕಬ್ಬು ಬೆಳೆಗಾರರ ಬಗ್ಗೆ ಮೊದಲ ದಿವಸ ನಿಲುವಳಿ ಸೂಚನೆಯನ್ನು ಭಾರತೀಯ ಜನತಾ ಪಾರ್ಟಿ ಕೊಟ್ಟಿದೆ. ಮೊದಲ ದಿವಸ ಸ್ಪೆಸಿಫಿಕ್ ಆಗಿ ಕಬ್ಬು ಬೆಳೆಗಾರರ ಸಮಸ್ಯೆಗೆ ಸ್ಪಂದಿಸಿ ಅವರಿಗೆ ನ್ಯಾಯ ಕೊಡಬೇಕು ಹಾಗೆಯೇ ಅವರಿಗೆ ಪರಿಹಾರ ಕೊಡುವ ಬಗ್ಗೆ ಸರ್ಕಾರ ಒಂದು ಸ್ಪಷ್ಟ ನೀತಿ ಏನು ಎಂಬ ಬಗ್ಗೆ ಹೇಳಬೇಕೆಂಬ ಉದ್ದೇಶದಿಂದ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು. ಅವತ್ತು ಪ್ರಶ್ನೋತ್ತರ ಅವಧಿಯನ್ನು ಬದಿಗೊತ್ತಿ ನಿಲುವಳಿ ಸೂಚನೆಗೆ ಸಾಯಾಂಕಾಲದವರೆಗೆ ಚರ್ಚೆ ನಡೆದು ಅದಕ್ಕೆ ಉತ್ತರ ಕೊಟ್ಟಿದ್ದರೆ ಸರಿ ಇರುತ್ತಿತ್ತು ಪಾರ್ಲಿಮೆಂಟ್‌ನಲ್ಲಿ ಈ ರೀತಿಯಾಗಿ ನಡೆಯುತ್ತದೆ. ಯಾವುದಾದರೊಂದು ವಿಷಯದ ಮೇಲೆ ನಿಲುವಳಿ ಸೂಚನೆ ಮೂಲಕ ಮಂಡನೆಯಾಗಿ ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲು ಸ್ಪೀಕರ್‌ರವರು ಒಪ್ಪಿಕೊಂಡರೆ ಅವತ್ತು ಬೆಳಿಗ್ಗೆಯಿಂದ ಸಂಜೆಯವರೆಗೆ ಅಂದರೆ ರಾತ್ರಿ 8–9 ಗಂಟೆಯವರೆಗೂ ಚರ್ಚೆ ನಡೆದು ಅವತ್ತೇ ಸರ್ಕಾರ ಉತ್ತರ ಕೊಡುತ್ತದೆ

ಬಹುಶಃ ಅದೇ ರೀತಿ ಒಂದು ಆದ್ಯತೆ ಮೇಲೆ ಆ ಒಂದು ನಿಲುವಳಿ ಸೂಚನೆ ಬಗ್ಗೆ ಚರ್ಚೆ ಆಗಿದ್ದರೆ ರಾತ್ರಿಯವರೆಗೆ ಅದು ಚರ್ಚೆ ಆಗಿ ಸರ್ಕಾರ ಉತ್ತರ ಕೊಟ್ಟಿದ್ದರೆ ಬಹುಶಃ ನಿನ್ನೆ ರೈತನ ಏನು ಒಂದು ಅನಾಹುತ ಆಯಿತು, ಅದು ಆಗುತ್ತಿರಲಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಅದಕ್ಕಾಗಿ ಎಲ್ಲೋ ಒಂದು ಕಡೆ ಆ ನಿರ್ಲಕ್ಷ್ಯ ಆಯಿತು ಎನ್ನುವ ದೃಷ್ಟಿಯಿಂದ ಇವತ್ತು ರೈತ ಆತ್ಮಹತ್ಯೆ ಮಾಡಿಕೊಂಡನು ಎಂದು ನಾನು ಹೇಳುತ್ತಿದ್ದೇನೆ ನಿನ್ನೆ relief ನ್ನು ಘೋಷಣೆ ಮಾಡಿದರು. ಮುಖ್ಯಮಂತ್ರಿಗಳು ಆತ್ಮಹತ್ಯೆಯ ಪ್ರಕರಣವಾದ ಮೇಲೆ ಘೋಷಣೆ ಮಾಡಿದರು. ಆದರೆ ಮೊದಲನೇ ದಿವಸವೇ ಅಥವಾ ಎರಡನೆಯ ದಿವಸವೇ ಇದರ ಬಗ್ಗೆ ಒಂದು ಸ್ಪಷ್ಟವಾದಂಥ ಉತ್ತರ ಸರ್ಕಾರದಿಂದ ಬಂದಿದ್ದರೆ ಈ ಅನಾಹುತ ನಡೆಯುತ್ತಿರಲಿಲ್ಲ. ಆ ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಭಾರತೀಯ ಜನತಾ ಪಾರ್ಟಿಯವರು ಏಕೆ ಎತ್ತಿಕೊಂಡೆವು ಎಂದರೆ ಇವತ್ತು ಕಬ್ಬು ಬೆಳೆಯುವಂಥ ಪ್ರದೇಶ ಇಡೀ ಕರ್ನಾಟಕದಲ್ಲಿ ಏನು ಕಬ್ಬು ಬೆಳೆಯುವಂಥದ್ದು ಇದೆ, ಏನು ಒಂದು ಉತ್ಪನ್ನ ಇದೆ, ಅದರಲ್ಲಿ ಶೇಕಡ 80-90 ರಷ್ಟು production ಆಗುವಂಥದ್ದು ಉತ್ತರ ಕರ್ನಾಟಕದಲ್ಲಿ, ಅದು ಬೆಳಗಾಂ ಜಿಲ್ಲೆಯಲ್ಲಿರಬಹುದು. ಬಿಜಾಪುರ, ಗುಲ್ಬರ್ಗಾ, ಬೀದರ್, ಬಾಗಲಕೋಟೆ, ಧಾರವಾಡ, ಹಾವೇರಿ ಜಿಲ್ಲೆ ಇರಬಹುದು ಇವತ್ತು ಈ ರೀತಿ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳು ಏನಿವೆ, ಅದರಲ್ಲಿ ಪ್ರಮುಖವಾಗಿ ಶೇಕಡ 90 ರಷ್ಟು ಕಬ್ಬು ಬೆಳೆಗಾರರು ಇರುವಂಥದ್ದು ಇಲ್ಲಿಯೇ ಅದಕ್ಕಾಗಿ ಈ ಸಮಸ್ಯೆಗೆ ಇದಕ್ಕೆ ಒಂದು ಪರಿಹಾರ ಸಿಗಬೇಕು. ಆ ದೃಷ್ಟಿಕೋನದಿಂದ ನಾವು ನಿಲುವಳಿ ಸೂಚನೆಯನ್ನು ತಂದಿದ್ದೆವು, specific ಆಗಿ ಅದೇ ಒಂದು ವಿಷಯವನ್ನು ಇಟ್ಟುಕೊಂಡು ನಿಲುವಳಿ ಸೂಚನೆಯನ್ನು ತಂದಿರುವುದು. ಆದರೆ ಏನೋ ಒಂದು ದುರ್ದೈವ, ಆ ನಿಲುವಳಿ ಸೂಚನೆಗೆ ಆದ್ಯತೆ ಸಿಗಲಿಲ್ಲವೆನ್ನುವ ಆ ಒಂದು ಕೊರಗು ಇದೆ. ಹೀಗಾಗಿ ಆ ದೃಷ್ಟಿಯಿಂದ ಒಂದು ಕಡೆ ನಿರ್ಲಕ್ಷ್ಯ ಆಯಿತು ಎನ್ನುವುದು ಒಂದು ಇನ್ನೊಂದು SAP ಕಾನೂನು, ಕಬ್ಬು ನಿಯಂತ್ರಣ ಮಂಡಳಿ ಏನಿದೆ, ಇದು ಬಹಳ ವರ್ಷಗಳಿಂದ ರೈತರ ಒಂದು ಬೇಡಿಕೆ ಇತ್ತು ಉತ್ತರ ಪ್ರದೇಶದಲ್ಲಿ SAP ಕಾನೂನು ಇದೆ.

ಆದರೆ ನಮ್ಮ ಕರ್ನಾಟಕದಲ್ಲಿ ಅತಿ ಹೆಚ್ಚು ಕಬ್ಬು ಬೆಳೆಯುವುದರಲ್ಲಿ ಇಡೀ ದೇಶದಲ್ಲಿ ನಾವು 3ನೇ ಸ್ಥಾನದಲ್ಲಿದ್ದೇವೆ. ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಮೂರನೆಯದು ಕರ್ನಾಟಕ. ಈ ರೀತಿ ಅತಿ ಹೆಚ್ಚು ಉತ್ಪನ್ನ ಕಬ್ಬು ಬೆಳೆಯುವಂಥ ಪ್ರದೇಶದಲ್ಲಿ ಕರ್ನಾಟಕ ರಾಜ್ಯವು ಇದೆ. ಹೀಗಾಗಿ SAP ಕಾನೂನು ಇಲ್ಲಿ ಇರಲಿಲ್ಲ SAP ಕಾನೂನು ಜಾರಿ ಮಾಡಬೇಕೆಂದು ರೈತರು ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದರು ಕಳೆದ ಬಾರಿ ನಾನು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಅದೇ ರೈತ ಮುಖಂಡರು ಒಂದು ಮನವಿಯನ್ನು ಕೊಟ್ಟರು. ಅದರ ಬಗ್ಗೆ ಚರ್ಚೆ ಮಾಡಿದರು ಇವತ್ತು ಏನಾದರೂ ಮಾಡಿ SAP ಕಾನೂನನ್ನು ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಬಹುಶಃ ಹಿಂದಿನ ಸರ್ಕಾರದಲ್ಲಿ ಯಾವ ರೀತಿ ಒತ್ತಡ ಇತ್ತು ಎನ್ನುವುದು ನನಗೆ ಗೊತ್ತಿಲ್ಲ ನನಗೂ ಕೂಡ ಒತ್ತಡ ಬಂತು. ಈ ಕಾನೂನು ಜಾರಿ ಮಾಡಬಾರದು ಎನ್ನುವ ಒತ್ತಡ ನನ್ನ ಮೇಲೂ ಇತ್ತು. ಆದರೆ ರೈತರ ಹಿತಾಸಕ್ತಿ ರೈತರ ಬಗ್ಗೆ ಇರುವಂಥ ಕಳಕಳಿ ರೈತರಿಗೆ ನ್ಯಾಯ ಸಿಗಬೇಕು ಎನ್ನುವ ದೃಷ್ಟಿಕೋನದಿಂದ ಅವತ್ತು ಕ್ಯಾಬಿನೆಟ್‌ನಲ್ಲಿ ಆ ವಿಷಯವನ್ನು ಪಾಸ್ ಮಾಡಿಕೊಂಡು ಇದೇ ಸುವರ್ಣಸೌಧದಲ್ಲಿ ಆ SAP Bill ನ ಕಾನೂನನ್ನು ಮಂಡನೆ ಮಾಡಿ ಅದಕ್ಕೆ ಸರ್ವಾನುಮತದ ಒಪ್ಪಿಗೆಯನ್ನು ತೆಗೆದುಕೊಂಡು ರಾಜ್ಯಪಾಲರ ಒಪ್ಪಿಗೆಯನ್ನು ತೆಗೆದುಕೊಂಡು ಕಾನೂನು ಇವತ್ತು ಅನುಷ್ಠಾನಕ್ಕೆ ಬಂದಿದೆ ಆ ಕಾನೂನು ತರುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ ಅದು ಕಾನೂನು ಆದ ಮೇಲೆ ಇವತ್ತು ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ ಸರ್ಕಾರಕ್ಕೆ ಇವತ್ತು ಒಂದು ಅಧಿಕಾರ ಬಂದಿದೆ. ನೀವು ಯಾವ ನಿರ್ಧಾರಗಳನ್ನು ಯಾವುದೋ ಒಂದು ನಿಯಂತ್ರಣವನ್ನು ಹೇರುವುದಕ್ಕೆ ಆಗುತ್ತಿರಲಿಲ್ಲ ಆದ್ದರಿಂದ ಇವತ್ತು ಆ ಅಧಿಕಾರವನ್ನು ನಾವು ಕೊಡಿಸಿದ್ದೇವೆ. ಹೀಗಾಗಿ ಆ ಅಧಿಕಾರವನ್ನು ಉಪಯೋಗ ಮಾಡಿಕೊಂಡು ರೈತರ ಹಿತಾಸಕ್ತಿಗೆ ಬರಬೇಕು ಎನ್ನುವುದೇ ನಮ್ಮ ಕಳಕಳಿ. ಉತ್ತರ ಕರ್ನಾಟಕದ ಕಬ್ಬು ಬೆಳೆಗಾರರ ಸಲುವಾಗಿ ಆದ್ಯತೆ ಮೇಲೆ ಮಾಡಬೇಕು. ಮಾನ್ಯ ಕುಮಾರಸ್ವಾಮಿಯವರು ಮಾತನಾಡುತ್ತಾ ಹೇಳಿದರು ಇವತ್ತು ದ್ರಾಕ್ಷಿ, ದಾಳಿಂಬೆ, ತೊಗರಿ, ಭತ್ತ,

ಮೆಕ್ಕೆಜೋಳ ಇರಬಹುದು. ಪ್ರತಿ ಸಲ ನಮ್ಮ ಸರ್ಕಾರ ಇದ್ದಾಗ ಈ ರೀತಿ ಸಮಸ್ಯೆಗಳು ಬಂದಾಗ ಮಾರ್ಕೆಟ್‌ನಲ್ಲಿ ರೇಟ್ ಡೌನ್ ಆದಾಗ ಸರ್ಕಾರ ತಕ್ಷಣವೇ intervene ಆಗುವಂಥದ್ದು ಮತ್ತು ಬೆಂಬಲ ಬೆಲೆಯನ್ನು ಘೋಷಣೆ ಮಾಡುವಂಥದ್ದು ಆಗಿದೆ. ಬೆಂಬಲ ಬೆಲೆ ಘೋಷಣೆ ಮಾಡಿ ಆ purchasing start ಮಾಡಿದಾಗ ಸರಿಯಾದ ಒಂದು ರೇಟ್ ಬಂದಿರುವುದನ್ನು ನಾವು ನೋಡಿರುತ್ತೇವೆ. ಹೀಗಾಗಿ ಸರ್ಕಾರ ಎಚ್ಚೆತ್ತುಕೊಂಡು ಈ ರೀತಿ ಯಾವುದೇ ಬೆಳೆ ಮೆಕ್ಕೆಜೋಳ, ಜೋಳ, ದ್ರಾಕ್ಷಿ, ಭತ್ತ ತೊಗರಿ ಇರಬಹುದು, ಯಾವುದೇ ರೀತಿಯ ಬೆಳೆಗಳಿಗೆ Central Government ನವರು minimum support price fix ಮಾಡುತ್ತಾರೆ. ಆ support price ಗಿಂತ ಕಡಿಮೆ ಆದಾಗ ತಕ್ಷಣ State Government intervene ಆಗಬೇಕು. ಆಮೇಲೆ Central Government ನವರು amount ನ್ನು reimburse ಮಾಡುತ್ತಾರೆ. ಆದರೆ ತಕ್ಷಣ ನಾವು intervene ಆಗಬೇಕಾಗಿದೆ. ಹಲವಾರು ಪ್ರಮುಖವಾದ ಬೆಳೆಗಳು ಇವೆ, ಅವುಗಳ ಬೆಲೆ ಸಹಿತ ಕುಸಿಯುತ್ತಿದೆ. ಬೇರೆ ಬೇರೆ ರಾಜ್ಯದಿಂದಲೂ ರೈತರುಗಳು ಫೋನ್ ಮಾಡುತ್ತಿದ್ದಾರೆ. ಇವತ್ತು ಭತ್ತಕ್ಕೆ ತೊಂದರೆ ಆಗಿದೆ, ತೊಗರಿಗೆ ತೊಂದರೆ ಆಗಿದೆ ಎಂದು ಫೋನ್ ಮಾಡುತ್ತಿರುತ್ತಾರೆ. ಅವರು ಬಂದು ಮನವಿಯನ್ನು ಕೊಡುತ್ತಾರೆ. ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಇವತ್ತು ಏನು ಚರ್ಚೆ ಆಗುತ್ತಿದೆ, ಉಳಿದ ಬೆಳೆಗಳನ್ನು ಬೆಳೆಯತಕ್ಕಂಥ ರೈತರಿಗೂ ನ್ಯಾಯ ಸಿಗಬೇಕೆನ್ನುವ ಬಗ್ಗೆ ಇವತ್ತು ನಾನು ಒತ್ತಾಯವನ್ನು ಮಾಡುತ್ತೇನೆ ಅಂತಹ ಸಂದರ್ಭದಲ್ಲಿ ಅವರು intervene ಆಗಬೇಕು ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನೀವು ಕಳೆದ ಸಲ 2400 ರೂ.ಗಳನ್ನು ಘೋಷಣೆ ಮಾಡಿದಿರಿ ಎಂದು ಹೇಳಿದರು. ಹೌದು, ನಾನು ಮುಖ್ಯಮಂತ್ರಿ ಇದ್ದೆ, ಸಕ್ಕರೆ ಸಚಿವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿ ಆಮೇಲೆ SAP ಕಾನೂನನ್ನು ಮಾಡಿದೆವು. ಆಮೇಲೆ ರೈತರ ಮತ್ತು ಫ್ಯಾಕ್ಟರಿ ಮುಖಂಡರ ಜೊತೆಯಲ್ಲಿ ಸಮಾಲೋಚನೆ ಮಾಡಿಕೊಂಡು 2400 ರೂ.ಗಳನ್ನು ನಾವು ಘೋಷಣೆ ಮಾಡಿದೆವು. ರೈತರು ಇನ್ನೂ ಹೋರಾಟಕ್ಕೆ ಇಳಿದಿರಲಿಲ್ಲ. ಅದಕ್ಕಿಂತ ಮುಂಚೆಯೇ 2400 ರೂ.ಗಳನ್ನು

ನಾವು ಘೋಷಣೆ ಮಾಡಿದೆವು. ಆ ನಂತರ ಎಲ್ಲಿಯೂ ಹೋರಾಟ ನಡೆಯಲಿಲ್ಲ. ಫ್ಯಾಕ್ಟರಿ ಮಾಲೀಕರು 2400 ರೂ ಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರು. ಕೆಲವು ಫ್ಯಾಕ್ಟರಿಯವರು 2500 ರೂ.ಗಳನ್ನು ಕೊಟ್ಟರು, ಕೆಲವರು 2650 ರೂ.ಗಳನ್ನು ಕೊಟ್ಟರು ಆಗ Sugar Price Rate ಜಾಸ್ತಿ ಇತ್ತು. ಆಯಿತು. ನಾವು ಘೋಷಣೆ ಮಾಡಿದಾಗ 2900 ರೂ.ಗಳಿಗೆ ಟನ್‌ಗೆ ಬೆಲೆ ಇತ್ತು. ಆದರೆ ಅದು ಮುಂದೆ ಜಾಸ್ತಿ ಆಯಿತು. ನಾವು ಇಲ್ಲವೆಂದು ಹೇಳುವುದಿಲ್ಲ. ಆದರೆ ಅವತ್ತು sugarcane ಗೆ cost of production ಎಷ್ಟಿತ್ತು, ಅವತ್ತು ಗೊಬ್ಬರದ ಬೆಲೆ ಏನಿತ್ತು, ಇವತ್ತು cost of production ಎಷ್ಟಿದೆ, ಅದನ್ನು ನೀವು compare ಮಾಡಿ. ಆ ರೈತ ಬದುಕಬೇಕಾಗಿದೆ ಅಷ್ಟು cost of production ಮಾಡಿ ಇಷ್ಟು ವ್ಯಯ ಮಾಡಿಕೊಂಡು, ಯಾವ ರೀತಿ ಕಡಿಮೆ ಪ್ರೈಸ್ ತೆಗೆದುಕೊಳ್ಳಬೇಕು ಎನ್ನುವಂಥದ್ದರ ಬಗ್ಗೆ ಸುದೀರ್ಘವಾಗಿ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಅವತ್ತಿನ cost of production ಏನು? ಇವತ್ತಿನ cost of production ಏನು? ಇದನ್ನು ಸಹಿತ ನಾವು ಆಲೋಚನೆಯನ್ನು ಮಾಡಬೇಕಾಗಿದೆ. ಅದಕ್ಕಾಗಿ ನಾವು ಹೇಳುತ್ತಿರುವುದು. ಇವತ್ತು ನೀವು 2500 ರೂ.ಗಳನ್ನು ಘೋಷಣೆ ಮಾಡಿರುತ್ತೀರಿ. Last time 2400 ರೂ ಗಳನ್ನು fix ಮಾಡಿದಾಗ ರೇಟ್ ಜಾಸ್ತಿ ಇತ್ತು. ಒಂದನ್ನು ನಾನು ಹೇಳುತ್ತೇನೆ. ಈಗಾಗಲೇ ನಾವು ಚರ್ಚೆಯನ್ನು ಮಾಡಿರುತ್ತೇವೆ. ಇವತ್ತು ಕೇಂದ್ರ ಸರ್ಕಾರದ ಕೆಲವೊಂದು ತಪ್ಪು ನಿರ್ಧಾರದಿಂದ ಏನು ತೊಂದರೆಗಳು ಆಗಿದ್ದಾವೆ ಎನ್ನುವುದನ್ನು ನಾವು ಈಗಾಗಲೇ ಹೇಳೀದ್ದೇವೆ. Last year ದ್ದು 80 ಲಕ್ಷ ಮೆಟ್ರಿಕ್ ಟನ್ ಶುಗರ್ ನಮ್ಮ ರಾಷ್ಟ್ರದಲ್ಲಿ ಸ್ಟಾಕ್ ಇದೆ ಇಷ್ಟು ಇದ್ದಾಗ ಮತ್ತೆ 20 ಲಕ್ಷ ಮೆಟ್ರಿಕ್ ಟನ್ ನಾವು ಆಮದು ಮಾಡಿಕೊಳ್ಳುತ್ತೇವೆ. ಆಮೇಲೆ raw sugar ಆಮದು ಮಾಡಿಕೊಳ್ಳುವುದಕ್ಕೆ ನಾವು permission ಕೊಟ್ಟಿರುತ್ತೇವೆ ಈ ರೀತಿಯ ಒಂದು ಪರಿಸ್ಥಿತಿ ಇದ್ದಾಗ ಇವತ್ತು sugar price ಕಡಿಮೆ ಆಗುವುದಕ್ಕೆ ಸಾಧ್ಯವಾಯಿತು. ಹೀಗಾಗಿ ಯಾವುದೋ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡು ಈ ರೀತಿಯ ಸರ್ಕಾರದ ಒಂದು ತಪ್ಪು ನಿರ್ಧಾರದಿಂದ ಇವತ್ತು ನಮ್ಮ ರೈತ

ಮತ್ತು ಇವತ್ತು ಇದ್ದಂಥ ಒಂದು ವ್ಯವಸ್ಥೆಯಿಂದ ಒಂದು ತೊಂದರೆ ಆಗಲಿಕ್ಕೆ ಸಾಧ್ಯವಿದೆ. ಅದಕ್ಕೆ ಇದು ಒಂದು ಕಾರಣವಾಯಿತು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತೇನೆ. ಈ ವರ್ಷ total calculation ಮಾಡಿದರೆ ಇಡೀ ದೇಶದಲ್ಲಿರಬಹುದು 250 ಲಕ್ಷ ಮೆಟ್ರಿಕ್ ಟನ್ production ಆಗುತ್ತಿದೆ. ಮೊದಲಿ ನಿಂದಲೂ 100 ಲಕ್ಷ ಮೆಟ್ರಿಕ್ ಟನ್ production ಆಗುತ್ತಿದೆ. 80 ಲಕ್ಷ ನಮ್ಮ stock, 20 ಲಕ್ಷ ಆಮದು ಬಂದಿರುವುದು ಮತ್ತು ಇವತ್ತಿನ production ತೆಗೆದುಕೊಂಡರೆ 250 ಲಕ್ಷ ಮೆಟ್ರಿಕ್ ಟನ್ ನಮ್ಮ consumption ಗಿಂತ ಜಾಸ್ತಿ excess ಇದೆ. ನಾವು ಇದನ್ನು ಹೊರಗೆ ಹಾಕಬೇಕಾಗಿದೆ. ಅದಕ್ಕಾಗಿ ನಾನು ಒಂದನ್ನು ಹೇಳುತ್ತಿದ್ದೇನೆ ಇವತ್ತು ಕರ್ನಾಟಕಕ್ಕೆ ಏಕೆ ಮಹತ್ವ ಇದೆ ಎಂದರೆ ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಕರ್ನಾಟಕ ಮೂರು Important States. ದೆಹಲಿಯಿಂದ ಬಂದಿರುವ ನಮ್ಮ ಮಿತ್ರರು ಪತ್ರಿಕೆಯೊಂದನ್ನು ತೆಗೆದುಕೊಂಡು ಬಂದಿದ್ದರು. ಅಲ್ಲಿ ಸಹಿತ ಪತ್ರಿಕೆಯಲ್ಲಿ ಬಂದಿದೆ. ಕೇಂದ್ರ ಸರ್ಕಾರ intervene ಆಗಬೇಕು. ಅಲ್ಲಿ The Hindu ಪತ್ರಿಕೆ ಇರಬಹುದು, Indian Express ಇರಬಹುದು. ತಮಗೆ ಈ ಪತ್ರಿಕೆಯನ್ನು ಕಳುಹಿಸಿ ಕೊಡುತ್ತೇನೆ. ಇಲ್ಲಿ ಎಲ್ಲಾ ಚರ್ಚೆ ಆಗುತ್ತಿರುವುದು ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ prices ಬಗ್ಗೆ ಮಾತ್ರ. ಅಲ್ಲಿ factory ಪ್ರಾರಂಭ ಮಾಡಿಲ್ಲ. Central Government ಅವರಿಗೆ ಸಹಾಯಕ್ಕೆ ಬರಬೇಕು. Subsidy, incentive ಕೊಡಬೇಕು. Central Sugar fund ಇದೆ Development fund ಅದರಿಂದ ಇವತ್ತು incentives ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆಯಾಗುವಂಥದ್ದು ಇದೆಲ್ಲಾ ಪತ್ರಿಕೆಯಲ್ಲಿ ಬಂದಿದೆ. ಇವತ್ತು ಬೆಳಗ್ಗೆ The Hindu ಪತ್ರಿಕೆಯಲ್ಲಿ ತಾವು ತೆಗೆದು ನೋಡಿದರೆ ಇವತ್ತು ಪ್ರಧಾನ ಮಂತ್ರಿಗಳು ಮಾನ್ಯ ಶರದ್ ಪವಾರ್‌ರವರ ಅಧ್ಯಕ್ಷತೆಯಲ್ಲಿ ಮೂರು ಜನರ ಒಂದು Special Committeeಯನ್ನು ಮಾಡಿದ್ದಾರೆ ಅವರಿಗೆ examine ಮಾಡಿಕೊಂಡು ಈ ಒಂದು Industries ಗಳನ್ನು ಉಳಿಸಬೇಕು. ರೈತರಿಗೂ ನೆರಬಾಗಬೇಕು. ಅದಕ್ಕಾಗಿ ಕೇಂದ್ರ ಸರ್ಕಾರ ಏನು ಒಂದು measures ಅನ್ನು ತೆಗೆದುಕೊಳ್ಳಬೇಕು ಎನ್ನುವಂಥದ್ದನ್ನು ಶರದ್ ಪವಾರ್‌ರವರ ಅಧ್ಯಕ್ಷತೆಯಲ್ಲಿ

ತೆಗೆದುಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಕ್ಕರೆ ಸಚಿವರು ಇಲ್ಲಿಯೇ ಇದ್ದಾರೆ. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ Crisis ನಡದಾಗ ರೈತರು ತೊಂದರೆಯಲ್ಲಿದ್ದಾಗ ಇವತ್ತು U P Chief Minister and Maharashtra Chief Minister ಕೇಂದ್ರ ಸರ್ಕಾರಕ್ಕೆ ಹೋಗಿ Prime Ministerಗೆ ಭೇಟಿ ಮಾಡಿ ನೀವು ನೆರವು ಕೊಡಿ ಎಂದು ಕೇಳುವಂಥ ಒಂದು ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರ ಏಕೆ ಜವಾಬ್ದಾರಿಯನ್ನು ಮಾಡಲಿಲ್ಲ.? ಕೇಂದ್ರ ಸರ್ಕಾರದಿಂದ ಹೆಚ್ಚಿನ ರೀತಿ ಒಂದು incentive ನ್ನು ತರುವಂಥದ್ದು ಅಲ್ಲಿಯ Sugar Development Fund ದಿಂದ ಹೆಚ್ಚಿನ ಒಂದು Fund ತೆಗೆದುಕೊಂಡು ಬಂದು ಇಲ್ಲಿಯ industries ಗಳನ್ನು ಉಳಿಸುವಂಥದ್ದು, ಅದರಿಂದ ನಮ್ಮ ರೈತರಿಗೆ ನೆರವು ಆಗುವಂಥದ್ದು, ಇದಕ್ಕೆ ಏಕೆ measures ತೆಗೆದುಕೊಳ್ಳುವುದಿಲ್ಲ ಎನ್ನುವಂಥದ್ದು. ಇವತ್ತಿನ ಪತ್ರಿಕೆಯಲ್ಲಿರುವ discussion ನೋಡಿದರೆ ಕೇವಲ Maharashtra and U P. ಮಾತ್ರ ಇವತ್ತು ಪತ್ರಿಕೆಯಲ್ಲಿ discussion ಆಗುತ್ತಿದೆ ಕೇಂದ್ರ ಸರ್ಕಾರದಲ್ಲಿ discussion ಆಗುತ್ತಿದೆ ಪ್ರಧಾನ ಮಂತ್ರಿಗಳು ಇವತ್ತು ಏನು ಕಮಿಟಿಯನ್ನು ನೇಮಕ ಮಾಡಿದ್ದಾರೆ, ಅದು ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ್ದು ಮಾತ್ರ ಇರುವಂಥದ್ದು ಅದರ ಬಗ್ಗೆ ಸಮೀಕ್ಷೆ ಮಾಡಬೇಕು. ಅದರ ಬಗ್ಗೆ ಚರ್ಚೆ ಮಾಡಬೇಕು ಎಂದು ಕಮಿಟಿಯನ್ನು ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಕಮಿಟಿ ಮಾಡಿರುವುದು ಕೇವಲ ಉತ್ತರ ಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಕ್ಕೆ ಮಾತ್ರವಲ್ಲ. ಅದು ಇಡೀ ದೇಶಕ್ಕೆ ಮಾಡಿರುವಂಥ ಕಮಿಟಿ ಸಕ್ಕರೆ ಕಾರ್ಖಾನೆಗಳು ದೇಶದಲ್ಲಿ ಏನು ಸಂಕಷ್ಟದಲ್ಲಿವೆ, ಅದಕ್ಕಾಗಿ ಮಾಡಿರುವಂಥದ್ದು ಅದು ಕೇವಲ ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶದ ರಾಜ್ಯಗಳಿಗೆ ಸೀಮಿತವಾಗಿ ಮಾಡಿರುವಂತಹ ಕಮಿಟಿ ಅಲ್ಲ. ಅವರು ಭೇಟಿ ಮಾಡಿರುವುದು ನಿಜ. ನಾವೂ ಭೇಟಿ ಮಾಡುತ್ತೇವೆ ಅಗತ್ಯ ಬಿದ್ದರೆ ಅಧಿವೇಶನ ಮುಗಿದ ತಕ್ಷಣವೇ ನಾವೂ ಕೇಂದ್ರ ಸರ್ಕಾರಕ್ಕೆ All Party

delegation ನ್ನು ಕರೆದುಕೊಂಡು ಹೋಗಿ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡೋಣ

ಶ್ರೀ ವೈ.ಎಸ್.ವಿ. ದತ್ತ: ಆ ಎರಡೂ ರಾಜ್ಯಗಳಲ್ಲಿ rate fix ಮಾಡಿಲ್ಲ ನಮ್ಮ ರಾಜ್ಯದಲ್ಲಿ fix ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ: ಆ ಎರಡೂ ರಾಜ್ಯಗಳಲ್ಲಿ rate fix ಆಗಿಲ್ಲ. ಅವರು ಕೇಂದ್ರ ಸರ್ಕಾರವನ್ನು ಆರ್ಥಿಕ ನೆರವು ಒದಗಿಸುವಂತೆ ಕೇಳಿದ್ದಾರೆ. ಅದು ಇಡೀ ದೇಶಕ್ಕೆ ಅನ್ವಯವಾಗಲಿ ಎಂದು ಕಮಿಟಿ ಮಾಡಿದ್ದಾರೆ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇವತ್ತು ಏನು ಮಾನ್ಯ ಶರದ್ ಪವಾರ್‌ರವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿದ್ದಾರೆ, ಅದು ಇಡೀ ರಾಷ್ಟ್ರಕ್ಕೆ ಅನ್ವಯವಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಯಾವುದಾದರೂ ಕಮಿಟಿ ಮಾಡಿದರೆ ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆ ಆದರೆ ನಮ್ಮ ಕಡೆಯಿಂದ ಏನು ಒಂದು ಒತ್ತಡ ಇರಬೇಕಾಗಿತ್ತು, ಲಾಬಿ ಇರಬೇಕಾಗಿತ್ತು ಅದು ರಾಜ್ಯ ಸರ್ಕಾರದ ಕಡೆಯಿಂದ ಆಗಿಲ್ಲವೆನ್ನುವುದು ನನ್ನ ಆಪಾದನೆ ಏಕೆಂದರೆ ಇವತ್ತು ಪತ್ರಿಕೆಯಲ್ಲಿ ಬರುವ report ಅನ್ನು ನೋಡಿ, ಹಿಂದೂ ಪತ್ರಿಕೆಯಲ್ಲಿ ಉತ್ತರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಏನು crisis ನಡೆದಿದೆ, ಮಹಾರಾಷ್ಟ್ರಕ್ಕೆ ಸಂಬಂಧಿಸಿದಂತೆ ಏನು crisis ನಡೆದಿದೆ, ಆ ಸಂಬಂಧವನ್ನಿಟ್ಟುಕೊಂಡು ಈ ಕಮಿಟಿಯೆಲ್ಲಾ ಮಾಡಿದರು. ಕೇಂದ್ರ ಸರ್ಕಾರದ ನೀತಿ ಬಗ್ಗೆ ಹೇಳಿದೆ. ನಮ್ಮ ರಾಜ್ಯ ಸರ್ಕಾರ ಹೋಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಿ. ಏನೆಂದರೆ ಇವತ್ತು ಏನು import ಮಾಡುತ್ತಾರೆ. excise duty ಅನ್ನು 30% ಜಾಸ್ತಿ ಮಾಡಲಿ ಅಷ್ಟು ನಿಯಂತ್ರಣ ಬರಲು ಸಾಧ್ಯವಿದೆ ನಾವು ಏನು ಬೇರೆ ದೇಶಕ್ಕೆ export ಮಾಡುತ್ತೇವೆ. ಅದಕ್ಕೆ Excise duty ಅನ್ನು exemption ಕೊಡಲಿ ಆಗ ಹೆಚ್ಚಿನ ರೀತಿಯ export ಮಾಡಲು ಸಾಧ್ಯವಿದೆ, ಒಂದು sugar rate ಬರಲು ಸಾಧ್ಯವಿದೆ. ಇದನ್ನೂ ನಾವು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ.

Sugar price ಗೆ stability ಬಂದು ನಮ್ಮ ರೈತರಿಗೆ ನ್ಯಾಯ ಒದಗಿಸಲು ಸಾಧ್ಯವಿದೆ ಇವೆಲ್ಲಾ ನೀತಿಗಳಿವೆ. ಈ ರೀತಿ ಹಂತ ಹಂತವಾಗಿ crisis ಬಂದಾಗ ರಾಜ್ಯ ಸರ್ಕಾರದವರು ಹೆಚ್ಚಿನ ರೀತಿಯ ಪಾತ್ರ ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ ನವೆಂಬರ್ 10ರಂದು 2,500 ರೂ.ಗಳ ದರವನ್ನು ಘೋಷಣೆ ಮಾಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಆದರೆ ಆದೇಶ ಮಾಡಿದ್ದು ನವೆಂಬರ್ 23 ರಂದು. ಅಧಿವೇಶನ 25ನೇ ತಾರೀಖು ಎಂದರೆ ಎರಡು ದಿನಗಳ ಮುಂಚೆ ಆದೇಶ ಮಾಡಿದ್ದಾರೆ. ಅದಕ್ಕೆ ಸಕ್ಕರೆ ಕಾರ್ಖಾನೆಯ ಮಾಲೀಕರು ಕೋರ್ಟ್‌ಗೆ ಹೋಗಿ ಸ್ಟೇ ತರಬಹುದು ಎಂದು ಸಬೂಬು ಹೇಳುತ್ತಾರೆ. ನೀವು 23ನೇ ತಾರೀಖಿನಂದಾದರೂ ಮಾಡಿ, 10ನೇ ತಾರೀಖಿನಂದಾದರೂ ಮಾಡಿ ಕೋರ್ಟಿಗೆ ಹೋಗುವವರು ಹೋಗುತ್ತಾರೆ. ನೀವು ಸರ್ಕಾರದಿಂದ ಕೇವಿಯಟ್ ಹಾಕಬೇಕು. Fight ಮಾಡಬೇಕು. ಕಾನೂನುಬದ್ಧವಾಗಿ ಘೋಷಣೆ ಮಾಡಿದಾಗ ಯಾರಿಗೂ ಹೆದರುವಂತಹ ಪ್ರಶ್ನೆ ಇಲ್ಲ.

ಶ್ರೀ ಸಿದ್ದರಾಮಯ್ಯ: 3 ಕಡೆ ಕೇವಿಯಟ್ ಅನ್ನು ಹಾಕಿದ್ದೇವೆ. ಕರ್ನಾಟಕ ಹೈಕೋರ್ಟ್‌ನಲ್ಲಿ, ಗುಲ್ಬರ್ಗಾ ಹೈಕೋರ್ಟ್ ಪೀಠ ಮತ್ತು ಧಾರವಾಡದಲ್ಲಿಯೂ ಕೇವಿಯಟ್ ಹಾಕಿದ್ದೇವೆ

ಶ್ರೀ ಜಗದೀಶ್ ಶೆಟ್ಟರ್: ಅದಕ್ಕೆ fight ಮಾಡಲೇಬೇಕು. ನವೆಂಬರ್ 10ನೇ ತಾರೀಖಿನಂದು ₹ 2,500 ದರವನ್ನು ನಿಗದಿ ಮಾಡಿ ಕೋರ್ಟ್‌ನಲ್ಲಿ ಸ್ಟೇ ಆಗಬಹುದು ಎನ್ನುವ ಕಾರಣದ ಮೇಲೆ ನವೆಂಬರ್ 23ನೇ ತಾರೀಖು ಅಧಿವೇಶನ ನಡೆಯಲು ಇನ್ನು ಎರಡು ದಿನ ಇದೆ ಎಂದಾಗ ನೋಟಿಫಿಕೇಷನ್ ಅನ್ನು ಹೊರಡಿಸಿದ್ದೀರಿ ಎಂದರೆ ಅದರ ಅರ್ಥವೇನು ಎನ್ನುವುದನ್ನು ಹೇಳಬೇಕಾಗುತ್ತದೆ. ನೀವು ಕೇವಿಯಟ್ ಹಾಕಿದಾಗ, ನಮ್ಮ ಕಾನೂನು ಬಲಯುತವಾಗಿ ನಮ್ಮ ಪರವಾಗಿರುವಾಗ, ಅಲ್ಲಿ ಕೋರ್ಟ್‌ನಲ್ಲಿ fight ಮಾಡಿ 10ನೇ ತಾರೀಖಿಗೆ ಏನು ಬೆಲೆ ನಿಗದಿ ಮಾಡಲಾಗಿತ್ತು, ಅದನ್ನು 11 ಅಥವಾ 12 ತಾರೀಖಿನಂದು ಆಜ್ಞೆ ಹೊರಡಿಸಬೇಕಾಗಿತ್ತು ಆದರೆ ಆಜ್ಞೆಯನ್ನು ಹೊರಡಿಸಲಿಲ್ಲ. ಅಲ್ಲಿಯೂ delay ಆಯಿತು. ಹೀಗಾಗಿ ಇವತ್ತು

ರೈತರಿಗೆ ವಿಶ್ವಾಸ ಬರುತ್ತಿಲ್ಲ ಕೆಲವು ಕಾರ್ಖಾನೆಯ ಮಾಲೀಕರು ಹಾಗೂ association ನವರು ಕೂಡಿಕೊಂಡು 2,500 ರೂ.ಗಳನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು statement ಕೊಟ್ಟರು ಎಲ್ಲಿಯವರೆಗೂ ರೈತರಿಗೆ ಏಕೆ ವಿಶ್ವಾಸ ಹೋಯಿತು ಎಂದರೆ, ಕಾರ್ಖಾನೆಯ ಮಾಲೀಕರು 2,000 ರೂ ಗಳ ಮುಚ್ಚಳಿಕೆ ಬರೆಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು ಕೆಲವರು 1,700 ರೂ.ಗಳು, 1,800 ರೂ.ಗಳ ಮುಚ್ಚಳಿಕೆ ಬಳಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದರು. ಅವೂ ಇಲ್ಲಿ ದಾಖಲೆಯಲ್ಲಿ ಬಂದಿವೆ. ನನ್ನ ಕಡೆ ಕೂಡ ಇದೆ ಮಾನ್ಯ ಸಕ್ಕರೆ ಸಚಿವರಿಗೂ ಗೊತ್ತಿದೆ. ಈಗ SAP ಕಾನೂನನ್ನು ಮಾಡಿದಿರಿ SAP ಕಾನೂನಿನಲ್ಲಿ ಎಲ್ಲಾ ರೀತಿಯ ಕಾನೂನು ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದೀರಿ. 1,800 ರೂ. 2,000 ರೂ, ಈ ರೀತಿ ಮುಚ್ಚಳಿಕೆ ಬರೆಸಿಕೊಂಡ ಕಾರ್ಖಾನೆ ಮಾಲೀಕರಿಗೆ ಇಲ್ಲಿಯವರೆಗೆ ಏನಾದರೂ ನೋಟಿಸ್ ಕೊಟ್ಟಿದ್ದೀರಾ? ಏಕೆ ಈ ರೀತಿ ಬರೆಸಿ ಕೊಳ್ಳುತ್ತಿದ್ದೀರಿ ಎಂದು ಪ್ರಶ್ನೆ ಮಾಡಿದ್ದೀರಾ? ಇಲ್ಲಿಯವರೆಗೂ ನೋಟಿಸ್ ಕೊಟ್ಟಿಲ್ಲ. ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇಲ್ಲ ಚರ್ಚೆ ನಡೆದ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರುಗಳು ನೀವೇ factory ಯನ್ನು ತೆಗೆದುಕೊಳ್ಳಿ. ನೀವೇ ನಡೆಸಿ ಎಂದು ಸಲಹೆಯನ್ನು ಕೊಟ್ಟರು. ಸರ್ಕಾರದಿಂದ ಯಾವುದೇ ರೀತಿಯ action, positive response ತೆಗೆದುಕೊಳ್ಳದಿದ್ದರೆ ಮುಂದೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಪ್ರಶ್ನೆ ಬರುತ್ತದೆ ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಬಹುಶಃ ಈ ಹಿನ್ನೆಲೆಯಲ್ಲಿ ರೈತರಲ್ಲಿ ವಿಶ್ವಾಸ ಹೋಗಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ನಾನು ಹೇಳುತ್ತಿದ್ದೇನೆ 2,500 ರೂ ರೇಟ್ ಸಿಗುತ್ತದೆ, 150 ರೂ.ಗಳ incentive ಘೋಷಣೆ ಮಾಡಿದರು. ಎಲ್ಲಾ ಸೇರಿ 2,650 ರೂ.ಗಳು ಆಗುತ್ತದೆ ಎಂದು ತಿಳಿದುಕೊಂಡಿರುತ್ತಾರೆ ಅದ್ದಕಾಗಿ ನಾವು ಬೇಡಿಕೆಯನ್ನು ಇಟ್ಟಿದ್ದೆವು. Total 2,650 ರೂ.ಗಳ ರೈತನಿಗೆ ಸಿಗುವಂಥದ್ದನ್ನು factory ಮಾಲೀಕರಿಂದ ವಸೂಲಿ ಮಾಡುವಂಥದ್ದು ನೀವು ಕಾನೂನಿನ ಪ್ರಕಾರ ಕ್ರಿಮಿನಲ್ ಕೇಸ್ ಹಾಕುತ್ತೀರಿ, action ತೆಗೆದುಕೊಳ್ಳುತ್ತೀರಿ. ಆದರೆ ರೈತನಿಗೆ ಆ ಬೆಲೆ ಸಿಗದಿದ್ದರೆ ಮುಂದೆ ಆತನ ಜೀವನದ ಪರಿಸ್ಥಿತಿ ಏನು?

ಅದಕ್ಕಾಗಿ ನಾವು ಒತ್ತಾಯ ಮಾಡುತ್ತಿದ್ದೇವೆ. ಸರ್ಕಾರ ಸಂಪೂರ್ಣವಾದ ಜವಾಬ್ದಾರಿ ತೆಗೆದುಕೊಳ್ಳಬೇಕು. 1,000 ರೂಗಳ ಸಬ್ಸಿಡಿ, incentive ಕೊಡಬೇಕೆಂದು ನಮ್ಮ ಬೇಡಿಕೆ. 2,650 ರೂ.ಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಅಲ್ಲಿ ತಮ್ಮ ಜೊತೆ ಮಾತನಾಡುವಾಗಲೂ 2,650 ರೂ.ಗಳು ರೈತನಿಗೆ ಸಿಗಬೇಕು ಎನ್ನುವ ಮಾತನ್ನು ಹೇಳಿದರು At any cost 2,650 ರೂಗಳನ್ನು ಕೊಟ್ಟೇ ಕೊಡುತ್ತೇವೆ ಎನ್ನುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತಿಲ್ಲ ನಾವು action ತೆಗೆದುಕೊಳ್ಳುತ್ತೇವೆ. Factory ಮಾಲೀಕರಿಂದ ಕೊಡಿಸುತ್ತೇವೆ ಎಂದು ಹೇಳುವುದು ಕೇವಲ ಭರವಸೆ ಆಯಿತು. ನಾಳೆ ದಿವಸ ಕೊಡದಿದ್ದರೆ ಇದಕ್ಕೆ ಯಾವುದಕ್ಕೂ ಉತ್ತರ ಇಲ್ಲ ಇವತ್ತು ಏನು ಮಾನ್ಯ ಮುಖ್ಯಮಂತ್ರಿಯವರು ಭರವಸೆಯನ್ನು ಇಲ್ಲಿ ಕೊಟ್ಟರು, ಅದರಲ್ಲಿ ಏನು ಆಗುತ್ತಿಲ್ಲ. ಅದಕ್ಕೆ ಏನೂ base ಇಲ್ಲ ಎನ್ನುವುದನ್ನು ನಾನು ಹೇಳುತ್ತಿದ್ದೇನೆ ಅದು ಕೇವಲ ಸಬೂಬು ಎನ್ನುವ ಮಾತನ್ನು ಹೇಳುತ್ತೇನೆ. ಇವರು ಭರವಸೆ ಕೊಟ್ಟಿರುವುದರಲ್ಲಿ ಅರ್ಥವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ ಆದಕ್ಕಾಗಿ ನಾವು demand ಮಾಡುತ್ತಿದ್ದೇವೆ. ಸರ್ಕಾರ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡಾಗ ನಮ್ಮ ಹೋರಾಟಕ್ಕೆ ಒಂದು ಅಂತ್ಯ ಮಾಡಲು ಸಾಧ್ಯವಿದೆ. ಇವತ್ತು ಸರ್ಕಾರ, ನಾವೂ ನೀವೂ ಚರ್ಚೆ ಮಾಡಿದ್ದೇವೆ, ಆದರೂ ಸರ್ಕಾರದ stand ಅಷ್ಟೇ ಇದೆ. ಮೊದಲಿನಿಂದಲೂ ನಮ್ಮ stand ಇದೆ. 2,650 ರೂಗಳನ್ನು ಮಾಡಲಾಗಿದೆ. ಇನ್ನೂ 1,000 ರೂ.ಗಳನ್ನು ಕೊಡಬೇಕೆಂದು ಇದೆ ನೀವು ಘೋಷಣೆ ಮಾಡಿದ ಪ್ರಕಾರ 2,650 ರೂ.ಗಳು. ಅದನ್ನಾದರೂ ಪ್ರಾಮಾಣಿಕವಾಗಿ implement ಮಾಡುತ್ತೀರಿ ಎನ್ನುವ ವಿಶ್ವಾಸವಿಲ್ಲ. ಆ ಬೇಡಿಕೆ ಈಡೇರಲಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ ಆ ಸಂಬಂಧ ನಾವು ಇವತ್ತು protest ಮಾಡಿದ್ದೇವೆ, agitation ಮಾಡಿದ್ದೇವೆ ನಾನು 1994 ರಿಂದಲೂ ಈ ಸದನದಲ್ಲಿದ್ದೇನೆ. Leader of Opposition ಆಗಿ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಹಿಂದೆ ಕೆಲವೊಂದು ಪ್ರಮುಖವಾದಂತಹ ವಿಚಾರಗಳು ಬಂದಾಗ, 4–5 ದಿವಸ stall ಆಗಿರುವುದು ನಮಗೂ ಗೊತ್ತಿದೆ ಮೊದಲನೆ ದಿವಸವೇ half a day stall ಆಗಿದೆ ನಮ್ಮ

ಮಾನ್ಯ ಮುಖ್ಯಮಂತ್ರಿಯವರಿಗೆ, ಸರ್ಕಾರದವರಿಗೆ ಎಷ್ಟು ತರಾತುರಿ ಎಂದರೆ, ಬಿಲ್‌ಗಳನ್ನು ಮಂಡನೆ ಮಾಡುವುದು, ಉಳಿದ proceedings ತೆಗೆದುಕೊಳ್ಳುವುದನ್ನು ಮಾಡುತ್ತಿದ್ದಾರೆ. ನಾಳೆಯೂ ಅಧಿವೇಶನ ಇದೆ. ಸೋಮವಾರದಿಂದ ಶುಕ್ರವಾರದವರೆಗೂ ಅಧಿವೇಶನ ಇದೆ. ಯಾವ ರೀತಿ ತರಾತುರಿಯಲ್ಲಿ ಮಾಡುತ್ತಿದ್ದಾರೆ ಎಂದರೆ ..

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು): ಅಜೆಂಡಾದಲ್ಲಿ ಬಿಲ್‌ಗಳ ಬಗ್ಗೆ ಇದೆ ಅಜೆಂಡಾದಲ್ಲಿರುವುದನ್ನು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದರಲ್ಲಿ ಯಾರೂ ರಾಜಕಾರಣ ಮಾಡುವುದು ಬೇಡ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ನಾವೂ ಇದರಲ್ಲಿ ರಾಜಕಾರಣ ಮಾಡುವುದಿಲ್ಲ. ನೀವೂ ರಾಜಕಾರಣ ಮಾಡಬೇಡಿ ಇಲ್ಲಿ ಯಾರೂ ರಾಜಕಾರಣ ಮಾಡುವುದೂ ಬೇಡ ಇಲ್ಲಿ ಯಾವುದೂ ರಾಜಕಾರಣ ಮಾಡುವಂತಹ ಪ್ರಶ್ನೆ ಇಲ್ಲ. ನಮ್ಮ ರೈತರಿಗೆ ನ್ಯಾಯ ಸಿಗಬೇಕು ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಯುತ್ತಿದೆ. ಈ ಭಾಗದ ಕಬ್ಬು ಬೆಳೆಗಾರರು ಏನಿದ್ದಾರೆ, ಅವರಿಗೆ relief ಸಿಗಬೇಕು ಪರಿಹಾರ ಸಿಗಬೇಕು, ನ್ಯಾಯ ಸಿಗಬೇಕು ಎನ್ನುವುದೇ ನಮ್ಮ ಒಂದು contention, ಬೇಡಿಕೆ. ಆ ದೃಷ್ಟಿಯಿಂದ ನಾವು ಇವತ್ತು ರಾಜಕಾರಣ ಮಾಡುವ ಪ್ರಶ್ನೆ ಇಲ್ಲವೆಂದು ಹೇಳುತ್ತಿದ್ದೇನೆ ನಿನ್ನೆ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇವತ್ತು ಅಂತ್ಯಕ್ರಿಯೆ ಆಗಿದೆ. ರೈತರಲ್ಲಿ ಇನ್ನೂ ಆಕ್ರೋಶವಿದೆ. ಇನ್ನೂ ಕಬ್ಬು factory ಅನ್ನು ಶುರು ಮಾಡುತ್ತಾರೋ ಇಲ್ಲವೋ? ಕಬ್ಬು ಅರೆಸುತ್ತಾರೋ ಇಲ್ಲವೋ, ಸರಿಯಾದ ರೇಟ್ ಸಿಗಲಿಲ್ಲ ಎನ್ನುವ ಅಂಜಿಕೆ ಇದೆ. ಮುಂದೆ ಈ ರೀತಿ ರೈತ ಆತ್ಮಹತ್ಯೆ ಮಾಡಿಕೊಳ್ಳುವುದು ಸರಣಿ ಆಗಬಾರದು ಎನ್ನುವ ದೃಷ್ಟಿಯಲ್ಲಿ ಹೇಳುತ್ತಿದ್ದೇವೆ

ಇವತ್ತು ಈ ದಿನ ಸದನ ನಡೆಸಬಾರದು ಎನ್ನುವ ಉದ್ದೇಶವಿಲ್ಲ. ಮೊದಲಿನಿಂದಲೂ ನನ್ನ stand ಇದೆ. ನಾನು ಮುಖ್ಯಮಂತ್ರಿಯಾಗಿ, ಸ್ಪೀಕರ್ ಆಗಿ ಕೆಲಸ ಮಾಡಿದ್ದೇನೆ ಇವತ್ತು ಎಲ್ಲಾ ವಿಚಾರಗಳ ಬಗ್ಗೆ ಚರ್ಚೆ ನಡೆಯಬೇಕು, ಅದರ ಪರವಾಗಿರುವ ವ್ಯಕ್ತಿ ನಾನು. ಹೀಗಾಗಿ ಈ ರೀ stall ಮಾಡಬೇಕು, ಸದನದ ಸಮಯವನ್ನು ವ್ಯರ್ಥ ಮಾಡಬೇಕು ಮತ್ತು ಸದನ ನಡೆಯಬಾರದು ಎನ್ನುವ ವ್ಯಕ್ತಿ ನಾನಲ್ಲ. ನಮ್ಮ ಬಿ.ಜೆ.ಪಿ. ಶಾಸಕರಿಗೆ ಆ ರೀತಿ ಮನಸ್ಥಿತಿ ಇಲ್ಲ ನಾವೆಲ್ಲರೂ ಸದನ ನಡೆಯಬೇಕೆನ್ನುವಂಥವರು. ಅದಕ್ಕಾಗಿ ನಾವು ಇವತ್ತು ನಮ್ಮ stand ಅನ್ನು ಹೇಳಿದ್ದೇನೆ. ಸದನ ನಡೆಯಬೇಕು. ಡಿಸೆಂಬರ್ 6 ನೇ ತಾರೀಖಿನವರೆಗೂ ಸದನ ನಡೆಯಬೇಕು. ನೀವು ಯಾವುದೋ ಒಂದು ಸಬೂಬನ್ನು ಹೇಳಿ ಸದನವನ್ನು ಮುಂದಕ್ಕೆ ಹಾಕುವುದಲ್ಲ ಸದನವು 6ನೇ ತಾರೀಖಿನವರೆಗೂ ನಡೆಯಬೇಕೆಂದು ನಮ್ಮ ಒತ್ತಾಯವಿದೆ ಸರ್ಕಾರಕ್ಕೆ ನಾವು ಮತ್ತೊಮ್ಮೆ ಒತ್ತಾಯವನ್ನು ಮಾಡುತ್ತೇವೆ. ಇವತ್ತು ಏನು ನಮ್ಮ stand ಏನಿದೆ, ನಮ್ಮ ಬೇಡಿಕೆ ಏನಿದೆ, ಅದಕ್ಕೆ ನಾವು ಬದ್ಧರಿದ್ದೇವೆ ನಮ್ಮ stand ಏನು ಎಂಬುದನ್ನು ನಾವು ಈಗಾಗಲೇ ಹೇಳಿದ್ದೇವೆ. ಸರ್ಕಾರವು ಈ ಬಗ್ಗೆ ಸ್ಪಷ್ಟವಾದಂತಹ ಭರವಸೆಯನ್ನು ಮತ್ತು ನಿರ್ದಿಷ್ಟವಾದಂತಹ stand ಅನ್ನು 2650 ರೂಪಾಯಿಗಳನ್ನು ನಮ್ಮ ರೈತರಿಗೆ ಕೊಡುತ್ತೇವೆಂದು ತಾವು ಹೇಳಿದ್ದೀರಲ್ಲಾ, ಅದನ್ನು at any cost ನಮ್ಮ ರೈತರಿಗೆ ಕೊಡುತ್ತೇವೆನ್ನುವಂತಹದ್ದು ಸರ್ಕಾರದಿಂದಲಾದರೂ ಜವಾಬ್ದಾರಿಯನ್ನು ತೆಗೆದುಕೊಳ್ಳುವುದರ ಬಗ್ಗೆ ಮಾಡಬೇಕು ಕಾರ್ಖಾನೆಯವರು ಕೊಡದೇ ಇದ್ದರೂ ಸಹಿತ ಇಲ್ಲಿ ನಮ್ಮ ಜವಾಬ್ದಾರಿ ಇದೆ ಎನ್ನುವಂತಹದ್ದನ್ನು ಮಾಡಬೇಕಾಗಿದೆ ಇದರಲ್ಲಿ ಯಾವುದೇ ರಾಜಕಾರಣವನ್ನು ಮಾಡುವುದಲ್ಲ ಇವತ್ತು at any cost ₹ 2650.00 ನೀವು ಕೊಟ್ಟ ಭರವಸೆಯ ರೀತಿಯಲ್ಲಿಯೇ ನಮ್ಮದು ಇನ್ನು 1,000 ರೂಪಾಯಿಗಳನ್ನು incentive ಕೊಡಬೇಕೆಂಬುದು ಇದೆ ನೀವು ಕೊಟ್ಟ ಭರವಸೆಯ ಪ್ರಕಾರ ಅಷ್ಟು ಹಣವನ್ನಾದರೂ ನೀವು ನಮ್ಮ ರೈತರಿಗೆ ಮುಟ್ಟಿಸುವಂತಹ ವ್ಯವಸ್ಥೆಯಾಗಬೇಕು ಎಂದು ಇದೆ. ಈ ಬಗ್ಗೆ ನಿಮ್ಮಿಂದ ನಮಗೆ ಇನ್ನೂ ಸ್ಪಷ್ಟವಾದಂತಹ ಭರವಸೆಯು ಸಿಕ್ಕಿರುವುದಿಲ್ಲ,

ನಮಗೆ ಸಮಾಧಾನವಾಗಿರುವುದಿಲ್ಲ. ನಾನು ಈ ಬಗ್ಗೆ ಮಾತನಾಡಿದ್ದೇನೆ. ಇನ್ನು ಬೇರೆಯವರು ಮಾತನಾಡುವವರು ಇದ್ದಾರೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಮನಸ್ಸು ಬದಲಾವಣೆಯಾಗಿ at any cost ಕೊಡಿಸುತ್ತೇವೆಂದು ಸ್ಪಷ್ಟವಾದಂತಹ ಉತ್ತರ ಬಂದರೆ ಒಳ್ಳೆಯದು ಆಗ ನಮಗೆ ಸಮಾಧಾನವಾಗುತ್ತದೆ ನಾವು ಈಗ ವೆಲ್‌ನಲ್ಲಿ ಇರುವುದಿಲ್ಲ. ಆದರೆ ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದ ಉತ್ತರ ಬಾರದೆ ಇದ್ದರೆ ಮುಂದೆ ನಾವು ಸದನವನ್ನು disturb ಮಾಡುವುದು ಬೇಕಾಗಿಲ್ಲ. ಸದನವು stop ಆಗಬಾರದು. ಸದನದಲ್ಲಿ ಮುಂದಿನ proceedings ನಡೆಯಬೇಕೆನ್ನುವಂತಹ ದೃಷ್ಟಿಯಿಂದ ನಾವು protest ಮಾಡಿ ಸಭಾತ್ಯಾಗ ಮಾಡುತ್ತೇವೆ. ಅದಕ್ಕಾಗಿ ದಯವಿಟ್ಟು ವೆಲ್‌ನಲ್ಲಿರುವಂತಹ ಸದಸ್ಯರುಗಳು ಒಳಗಡೆ ಬನ್ನಿ. ಅವರು ಉತ್ತರ ಕೊಟ್ಟ ಮೇಲೆ ನಮ್ಮ ನಿರ್ಣಯವನ್ನು ನಾನು ಹೇಳುತ್ತೇನೆ.

(ಸದನದ ಬಾವಿಯಲ್ಲಿದ್ದ ಬಿಜೆಪಿ ಪಕ್ಷದ ಸದಸ್ಯರುಗಳು ತಮ್ಮತಮ್ಮ ಸ್ಥಾನಗಳಿಗೆ ತೆರಳಿದರು)

ಶ್ರೀ ಬಿ ಎಸ್ ಯಡಿಯೂರಪ್ಪ (ಶಿಕಾರಿಪುರ): ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ದೊಡ್ಡ ದುರ್ಘಟನೆ ನಡೆದ ಮೇಲೆ ಈ ನಾಡಿಗೆ ಅನ್ನವನ್ನು ಕೊಟ್ಟಂತಹ ಅನ್ನದಾತನ ಬಗ್ಗೆ ಸದನದಲ್ಲಿ ಚರ್ಚೆಯಾಗುತ್ತಿದೆ. ನಾನು ಬೆಳಿಗ್ಗೆ ಮಂಟೂರಿಗೆ ಹೋಗಿದ್ದೆ. ನನ್ನ ದೃಷ್ಟಿಯಿಂದ ವಿಠಲ್ ಅರಬಾವಿ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಅವನ ಬಲಿದಾನವಾಯಿತು. ಈ ನಾಡಿನ ಕಬ್ಬು ಬೆಳೆದ ರೈತರ ಪರವಾಗಿ ಹೋರಾಟ ಮಾಡುತ್ತಿದ್ದಂತಹ ವ್ಯಕ್ತಿ ಬಹಳ ಆಕ್ರೋಶಕ್ಕೆ ಒಳಗಾಗಿ ಈ ಸರ್ಕಾರದಿಂದ ನಮಗೆ ನ್ಯಾಯ ಸಿಗುವುದಿಲ್ಲ, ಈ ಸರ್ಕಾರದಿಂದ ರೈತರಿಗೆ ಪರಿಹಾರ ಸಿಗುವುದಿಲ್ಲವೆಂದು ಅವನದೇ ಆದಂತಹ ಭಾಷೆಯಲ್ಲಿ ಮಾತನಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಒಂದು ಕ್ಷಣ ಈ ಸದನದ ಎಲ್ಲಾ ಸದಸ್ಯರುಗಳು ತಾವು ಯೋಚನೆ ಮಾಡಬೇಕು ನಾನು ಸುಮಾರು 25 ದಿವಸಗಳ ಕಾಲ ಯಾರಿಗೆ ಒಪ್ಪಿಗೆ ಇದೆಯೋ ಅಥವಾ ಇಲ್ಲವೋ ಕೆಲವು ಪ್ರಮುಖ ವಿಷಯಗಳ ಬಗ್ಗೆ ನಾನು ಹಗಲುರಾತ್ರಿ ಧರಣಿ

ಸತ್ಯಾಗ್ರಹವನ್ನು ಮಾಡಿದ್ದೇನೆ. ಆಗ ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಸಂಧಾನಕ್ಕೆ ಕಳುಹಿಸುವಂತಹ ಅಗತ್ಯವಿಲ್ಲ ಎನ್ನುವಂತಹ ಬೇಜವಾಬ್ದಾರದ ಮಾತುಗಳನ್ನು ಆಡಿದರು ಅದಕ್ಕೆ ನಾನು ಉತ್ತರ ಕೊಡಲಿಲ್ಲ. ಅದೇ ಶಾದಿಭಾಗ್ಯ ಯೋಜನೆ ಅದೇ ಎಪಿಎಲ್ ಕಾರ್ಡುದಾರರು 37 ಲಕ್ಷ ಜನ ಅಂದರೆ 1.5 ಕೋಟಿ ಕುಟುಂಬದ ಸಂಖ್ಯೆಯನ್ನು ಲೆಕ್ಕಹಾಕಿದರೆ ಜನಸಂಖ್ಯೆ ಯಾಗುತ್ತದೆ. ಅವರಿಗೆ ಮೊದಲು ಇದ್ದಂತೆಯೇ ಪಡಿತರ ವ್ಯವಸ್ಥೆಯು ಮುಂದುವರಿಯಬೇಕೆಂದು ಹೇಳಿ ಈ ಮನೆಗೆ ಬಂದು ನಾನು ಇಲ್ಲೇ ಸಹ ಹಗಲುರಾತ್ರಿ ಮೂರು ದಿನಗಳ ಕಾಲ ನಾನು ಮತ್ತು ನಮ್ಮ ಶಾಸಕರು ಇಲ್ಲಿ ಮಲಗಿದ್ದೆವು. 71 ವರ್ಷದಲ್ಲಿ ವಿರೋಧಪಕ್ಷದ ನಾಯಕನಾಗಿ, ಉಪಮುಖ್ಯಮಂತ್ರಿಯಾಗಿ. ಮುಖ್ಯಮಂತ್ರಿಯಾಗಿ ಹೋರಾಟ ಮಾಡಿದಂತಹ ನಾನು ಇಲ್ಲಿ ನಾನು ಧರಣಿ ಕುಳಿತಿದ್ದಾಗ ನಮ್ಮ ಎಲ್ಲಾ ಪ್ರಮುಖರು ಈ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದರು ನೀವು ಬಂದು ಕಾರ್ಯಕಲಾಪದಲ್ಲಿ ಭಾಗವಹಿಸಬೇಕೆಂದು ಹೇಳಿದರು. ನಾನು ಸದನದ ಬಾವಿಯಲ್ಲಿ ಕಾಲುಚಾಚಿ ಕುಳಿತಿದ್ದೇನೆ, ನನಗೆ ಕುಳಿತುಕೊಳ್ಳಲು ಒಂದು stool ಬೇಕೆಂದು ಕೇಳಿದಾಗ ಅದನ್ನು ಕೊಡುವಂತಹ ಕನಿಕರ ಇವರು ತೋರಿಸಲಿಲ್ಲ. ಆದರೆ ನಾನು ರಾಜ್ಯದ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ, ಸದನದ ಕಾರ್ಯಕಲಾಪ ನಡೆಯುವುದಕ್ಕಿಂತ ಒಂದು ದಿವಸ ಮುಂಚೆ ಇಲ್ಲಿಗೆ ತಾವು ಬಂದು ಆ ರೈತ ಮುಖಂಡರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ ಇದರ ಜೊತೆಗೆ ಪ್ರತಿಪಕ್ಷದ ನಾಯಕರನ್ನೂ ಸಹ ವಿಶ್ವಾಸಕ್ಕೆ ತೆಗೆದುಕೊಂಡು ಆ ಧರಣಿ ಸತ್ಯಾಗ್ರಹ ನಡೆಯುವಂತಹ ಸ್ಥಳಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಹೋಗಿ ಇಡೀ ಸದನ ನಿಮ್ಮ ಜೊತೆಯಲ್ಲಿದೆ. ಕಬ್ಬು ಬೆಳೆಗಾರರು ನಮ್ಮವರೆ. ನೀವೂ ಸಹ ನಮ್ಮ ಅಣ್ಣತಮ್ಮಂದಿರೆ, ನಿಮಗೆ ನಾವು ನ್ಯಾಯವನ್ನು ಕೊಡಿಸುತ್ತೇವೆ, ನೀವು ಆತಂಕಕ್ಕೆ ಒಳಗಾಗುವಂತಹ ಅಗತ್ಯವಿಲ್ಲ, ನಿಮ್ಮ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುತ್ತೇವೆ, ಅದಕ್ಕೆ ಪರಿಹಾರ ಹುಡುಕುತ್ತೇವೆ ಎನ್ನುವಂತಹ ಮಾತನ್ನು ಹೇಳಿ ಅವರಿಗೆ ವಿಶ್ವಾಸವನ್ನು ತುಂಬಿಸಿದ್ದರೆ ಇವತ್ತು ಇನ್ನು ಆ ಬಲಿದಾನ ಆದ ರೈತನ ಸಂಸ್ಕಾರ ನಡೆಯುತ್ತಿದೆ, ಅದು ಮುಗಿದ

ರೈತನು ವಾಪಸ್ಸು ಕಣ್ಣೀರು ಹಾಕಿ ಬರುತ್ತಿದ್ದಾನೆ, ಅಲ್ಲಿ ಹತ್ತಾರು ಸಾವಿರ ಜನರು ಸೇರಿದ್ದಾರೆ. ಕೊನೆಯ ಪಕ್ಷ ಈ ಬಗ್ಗೆ ನಾನು ನಿರೀಕ್ಷೆ ಮಾಡಿದ್ದೆ ಇವತ್ತಿನ ಸದನದ ಕಾರ್ಯಕಲಾಪವನ್ನು ಮುಂದೂಡಿ ಅಲ್ಲಿಗೆ ಹೋಗುವುದಕ್ಕೆ ಯಾರ್ಯಾರಿಗೆ ಸಾಧ್ಯವಿದೆಯೋ ಹೋಗಿ ಅಲ್ಲಿ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿ ಈ ರಾಜ್ಯದ ರೈತ ಸಮೂಹಕ್ಕೆ ನಾವೆಲ್ಲರೂ ನಿಮ್ಮ ಜೊತೆಯಲ್ಲಿದ್ದೇವೆ, ಅಲ್ಲಿ ಅಂತ್ಯ ಸಂಸ್ಕಾರ ನಡೆಯುವಂತಹ ಕಾಲದಲ್ಲಿಯೂ ನಾವು ಇಲ್ಲಿ ಕಾರ್ಯ ಕಲಾಪವನ್ನು ನಡೆಸುವುದು ದೊಡ್ಡದು ಮಾಡುವುದು ಏನಿಲ್ಲ ಎನ್ನುವಂತಹ ಭರವಸೆಯ ಮಾತು ಸಿಗುತ್ತದೆ ಎಂದು ನಾನು ಭಾವಿಸಿದ್ದೆ ಅದು ಆಗಲಿಲ್ಲ ಇಲ್ಲಿ ಚರ್ಚೆ ನಡೆಯುತ್ತಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನೇರವಾಗಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಸುಮಾರು 6 ತಿಂಗಳುಗಳಾಗಿದೆ. ನೀವು ಎಂದಾದರೂ ಈ ರಾಜ್ಯದ ರೈತ ಸಮೂಹದ ಬಗ್ಗೆ ಅವರು ಸಿಕ್ಕಿರುವಂತಹ ಗೊಂದಲಕ್ಕೆ ಮತ್ತು ಕಷ್ಟ ಕಾರ್ಪಣ್ಯಕ್ಕೆ ಸಿಕ್ಕಿರುವಂತಹ ಸಂದರ್ಭದಲ್ಲಿ ಅವರನ್ನು ಕರೆದು ಮಾತುಕತೆ ಯನ್ನಾಡಿ ಇದಕ್ಕೆ ಪರಿಹಾರವನ್ನು ಹುಡುಕುವಂತಹ ಏನಾದರೂ ಪ್ರಾಮಾಣಿಕ ವಾದಂತಹ ಪ್ರಯತ್ನ ತಾವು ಮಾಡುವುದಕ್ಕೆ ಸಾಧ್ಯವಾಯಿತೇ? ಈ ರಾಜ್ಯದ ಬಜೆಟ್ 1,22,000 ಕೋಟಿ ರೂಪಾಯಿಗಳಾಗಿದೆ. ಇದನ್ನು ಈ ರಾಜ್ಯದ ಜನರು ಕೊಡುವಂತಹ ತೆರಿಗೆ ಹಣವಾಗಿದೆ. **"ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದಂತೆ ಕಾಣಿರೋ"** ಎಂಬ ನಾಣ್ಣುಡಿಯಂತೆ ಈ ದೇಶಕ್ಕೆ ಅನ್ನ ಕೊಡುವಂತಹ ಅನ್ನದಾತನಿಗೆ ಧಾರಾಳವಾಗಿ ಸರ್ಕಾರವು ನಿಮ್ಮ ಜೊತೆಯಲ್ಲಿದೆ. ಸರ್ಕಾರವು ಪರಿಹಾರ ಧನವನ್ನು ಕೊಡುವ ಬಗ್ಗೆ ಘೋಷಣೆ ಮಾಡಿದ್ದೀರಿ. ರೈತನ ಉತ್ಪನ್ನಗಳಿಗೆ ರೈತರು ನಿಗದಿ ಮಾಡುವಂತಹ ಬೆಲೆಯನ್ನು ಕೊಡುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದೀರಿ, ನಾನು ಸ್ವಾಗತ ಮಾಡುತ್ತೇನೆ. ಸ್ವಾತಂತ್ರ್ಯ ಬಂದು 67 ವರ್ಷಗಳ ನಂತರ ಈಗಲಾದರೂ ಸರ್ಕಾರ ರೈತನು ಬೆವರು ಸುರಿಸಿ ಬೆಳೆಯುವಂತಹ ಬೆಳೆಗೆ ಬೆಂಬಲ ಬೆಲೆಯನ್ನು ನೀವು ನಿಗದಿ ಮಾಡಿ ನಾನು ಕೊಡುತ್ತೇನೆಂಬ ತೀರ್ಮಾನ ತೆಗೆದುಕೊಂಡ ನೀವು ಮತ್ತು ನಿಮ್ಮ ಸರ್ಕಾರ, ಈ ಕಬ್ಬು ಬೆಳೆಗಾರರ ನೆರವಿಗೆ

ಬಂದಿದ್ದೀರಾ? ವಿರೋಧ ಪಕ್ಷದ ನಾಯಕರಾದ ಕುಮಾರಸ್ವಾಮಿಯವರಿಗೆ ನನ್ನ ಮೇಲೆ ಏಕೋ ಆಕ್ರೋಶ ಇದೆ, ಅದು ಏಕೋ ನನಗೆ ಗೊತ್ತಿಲ್ಲ. ಅವರು ಮಾಧ್ಯಮದ ಸ್ನೇಹಿತರನ್ನು ಕುರಿತು ಒಂದು ಮಾತನ್ನು ಹೇಳಿದರು. ಇಲ್ಲಿ ಧರಣಿ ಮತ್ತು ಸತ್ಯಾಗ್ರಹಕ್ಕೆ ಮಾತ್ರ ಬೆಲೆ ಸಿಗುತ್ತಿದೆ. ನಾನು ಮಾನ್ಯ ಕುಮಾರಸ್ವಾಮಿಯವರಿಗೆ ಹೇಳುತ್ತೇನೆ. ನಾನೂ ಸಹ ನಿಮ್ಮ ತಂದೆಯವರಂತೆ ಹೋರಾಟಗಾರನಾಗಿದ್ದೇನೆ. ಹೋರಾಟ ಮಾಡುವುದು ಎಂದರೆ ಆ ಕಷ್ಟ ಎಷ್ಟು ಇರುತ್ತದೆ ಎಂದು ನೀವು ದೇವೇಗೌಡರನ್ನು ಕೇಳಿ ನಾನು ಕಳೆದ 25 ದಿವಸಗಳ ಕಾಲ ಧರಣಿ ಕುಳಿತಿರುವುದು, ಚಪಲಕೋಸ್ಕರ ಹಗಲು ರಾತ್ರಿ ನಾನು ಧರಣಿ ಕುಳಿತಿಲ್ಲ ನಾನು 3 ದಿವಸಗಳ ಕಾಲ ಸದನದ ಬಾವಿಯಲ್ಲಿ ಚಪಲ ತೀರಿಸಿಕೊಳ್ಳುವುದಕ್ಕಾಗಿ ಧರಣಿ ಕುಳಿತಿರಲಿಲ್ಲ. ಅದು ಎಲ್ಲೋ ಮಾಧ್ಯಮದಲ್ಲಿ ಕೆಲವು ಸಂಗತಿಗಳು ಪ್ರಚಾರವಾಯಿತು. ಅಥವಾ ನಾನು ಹೇಳಿದ ಸಂಗತಿಗಳಿಗೆ ಪ್ರಾಮುಖ್ಯತೆ ಸಿಕ್ಕಿತು ಎಂದು ನೀವು ಆಕ್ರೋಶ ವ್ಯಕ್ತಪಡಿಸುತ್ತೀರಿ ಅಥವಾ ನಿಮ್ಮ ನೋವನ್ನು ಈ ಸದನದಲ್ಲಿ ವ್ಯಕ್ತಪಡಿಸುತ್ತೀರಿ ಎಂದು ಹೇಳಿದರೆ ಇದು ಎಷ್ಟರ ಮಟ್ಟಿಗೆ ಸರಿ ಇದೆ ಎಂದು ನೀವೇ ಯೋಚನೆ ಮಾಡಿ ಕುಮಾರಸ್ವಾಮಿಯವರೇ ನಾನು ನಿಮಗೆ ಕೇಳುತ್ತೇನೆ.

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಯಡಿಯೂರಪ್ಪನವರಿಗೆ ಮಾಧ್ಯಮದವರು ಪ್ರಚಾರ ಕೊಟ್ಟಿದ್ದಕ್ಕೆ ನನಗೇನೂ ಆಕ್ರೋಶ, ಅಸೂಯೆ ಏನಿಲ್ಲ. ಇಲ್ಲಿ ಪ್ರಶ್ನೆ 3.00 ಕೋಟಿ ರೂಪಾಯಿಗಳ ಶಾದಿ ಭಾಗ್ಯ ಕಾರ್ಯಕ್ರಮವನ್ನು ದೊಡ್ಡದು ಮಾಡಿಕೊಂಡಿರಿ. ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಈಗ ತಾವು ಹೇಳುತ್ತಿದ್ದೀರಿ, ಆ ರೈತರ ಆತ್ಮಹತ್ಯೆ ಮಾಡಿಕೊಳ್ಳುವವರೆಗೆ ನೀವು ಅಲ್ಲಿಯೇ ಕುಳಿತುಕೊಂಡಿದ್ದಿರಿ. ಅಲ್ಲಿಗೆ ಬರಲೇ ಇಲ್ಲ, ಒಂದು ದಿವಸವೂ ಅವರ ಬಗ್ಗೆ ಚರ್ಚೆ ಮಾಡಲಿಲ್ಲ. ಇವತ್ತು ನಾನು ತಮ್ಮನ್ನು ಕೇಳಲಿಕ್ಕೆ ಬಯಸುತ್ತೇನೆ, ಹಲವಾರು ರೀತಿಯಲ್ಲಿ 2008 ರಿಂದ ಹೋರಾಟ ಮಾಡಿಕೊಂಡು ಬಂದಿದ್ದೀರಿ, ಅವೆಲ್ಲವನ್ನು ನಾವು ಮೆಚ್ಚಿಕೊಳ್ಳುತ್ತೇವೆ ಹೋರಾಟದಿಂದ ನೀವು ಬಂದಿದ್ದೀರಿ, ನಿಮ್ಮ ರೀತಿ ನಾವು ಕಷ್ಟಪಡದಿದ್ದರೂ ನಾವು ಆ ಜನರ

ಸಮಸ್ಯೆಗಳೇನು ಎಂದು ನಾವು ಅರಿತುಕೊಂಡಿದ್ದೇವೆ. ನಾವು ಹೋರಾಟ ಮಾಡಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇವೆ. ಇಲ್ಲಿ 2008 ರಿಂದ ಹಲವಾರು ಕಾರ್ಯಕ್ರಮಗಳನ್ನು ರೈತರ ಪರವಾಗಿ ನೀವು ಕೊಟ್ಟಿದ್ದೀರಿ ಸಾವಯವ ಕೃಷಿ ಕಾರ್ಯಕ್ರಮ, ಸುವರ್ಣಭೂಮಿ ಕಾರ್ಯಕ್ರಮ ಇರಬಹುದು, ನಾನು ಸರ್ಕಾರವನ್ನು ಕೇಳಬಯಸುತ್ತೇನೆ. 2008 ರಿಂದ 2012ನೇ ಇಸವಿಯ ವರೆಗೆ 5 ವರ್ಷಗಳ ಕಾಲ ಅಷ್ಟೆಲ್ಲಾ ಕಾರ್ಯಕ್ರಮವನ್ನು ಕೊಟ್ಟರೂ ಆ ಐದು ವರ್ಷಗಳಲ್ಲಿ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಏತಕ್ಕೆ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ? ನನ್ನ ಬಳಿ ಇರುವ ಮಾಹಿತಿ ಪ್ರಕಾರ ಕಳೆದ ಐದು ವರ್ಷಗಳಲ್ಲಿ ನಿಮ್ಮ ಆಡಳಿತದಲ್ಲಿ 700ಕ್ಕೂ ಹೆಚ್ಚು ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಹಾಗಿದ್ದಲ್ಲಿ ಏಕೆ ಆತ್ಮಹತ್ಯೆಯನ್ನು ಮಾಡಿಕೊಂಡರು? ಅದಕ್ಕೋಸ್ಕರವೇ ಈ ಹಿನ್ನೆಲೆಯಲ್ಲಿ ನಾನು ಮುಖ್ಯಮಂತ್ರಿಗಳಿಗೆ ಮನವಿ ಮಾಡಿರುವುದು. ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳದಂತೆ ಅವರಲ್ಲಿ ನಾವು ವಿಶ್ವಾಸ ಮೂಡಿಸಬೇಕಾಗಿದೆ. ಅವರಿಗೆ ಧೈರ್ಯ ತುಂಬಬೇಕಾಗಿದೆ. ನಾನು ಪುಟ್ಟಣ್ಣಯ್ಯನವರು ಮಾತನಾಡಿಕೊಂಡೆವು ಇವತ್ತು ಸದನದಿಂದ ಈ ರಾಜ್ಯದ ಎಲ್ಲಾ ರೈತರಿಗೆ ಒಂದು ನಿಲುವಳಿ ಸೂಚನೆಯನ್ನು ಇಟ್ಟು ರಾಜ್ಯದ ರೈತರಿಗೆ ಒಂದು ಸಂದೇಶವನ್ನು ಕೊಡಬೇಕು. ಯಾವುದೇ ಕಾರಣಕ್ಕೂ ರೈತರು ಯಾವುದೇ ಬೆಳೆಗಾರರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳಬೇಡಿ, ನಿಮ್ಮ ನೆರವಿಗೆ ನಮ್ಮ ಸರ್ಕಾರ ಇದೆ, 224 ಜನ ಶಾಸಕರು ನಿಮ್ಮ ಪರವಾಗಿ ಇದ್ದೇವೆ, ಈ ರಾಜ್ಯದಲ್ಲಿ ಮತ್ತೊಂದೂ ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಡಿ. ಈ ರೀತಿ ನಿಲುವಳಿ ಸೂಚನೆಯನ್ನು ತರಬೇಕೆಂದು ನಾವು ಪುಟ್ಟಣ್ಣಯ್ಯನವರು ಚರ್ಚೆ ಮಾಡುತ್ತಿದ್ದೇವೆ. ಆದ್ದರಿಂದ ಯಡಿಯೂರಪ್ಪನವರೆ, ನಾನು ಇವತ್ತು ನಿಮ್ಮ ಪ್ರಚಾರದ ಬಗ್ಗೆ, ನಿಮ್ಮ ಹೋರಾಟದ ಬಗ್ಗೆ ಸಣ್ಣತನದಲ್ಲಿ ಮಾತನಾಡುವುದಿಲ್ಲ. ಹೋರಾಟದಲ್ಲಿಯೇ ಬಂದಿದ್ದೀರಿ, ಆದರೆ ನಾವು ಏಕೆ ಆ ವಿಷಯವನ್ನು ಹೇಳಿದೆವು ಎಂದು ನಾನು ಹಲವಾರು ಬಾರಿ ತಮಗೆ ಹೇಳಿದ್ದೇನೆ. ಕೇವಲ ಇದೊಂದು ವಿಷಯಕ್ಕೆ 24 ದಿವಸಗಳ ಕಾಲ ಧರಣಿ ಏಕೆ ಕುಳಿತುಕೊಂಡಿಟ್ಟೀರಿ, ಜನ ಇನ್ನೂ

ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಅದನ್ನು ತೆಗೆದುಕೊಂಡು ನೀವು ಧರಣಿ ಮಾಡಿ ಎಂದು ನಾನೇ ತಮ್ಮಲ್ಲಿ ಮನವಿ ಮಾಡಿದ್ದೇನೆ. ಅದನ್ನು ಬಿಟ್ಟು ತಮಗೆ ಪ್ರಚಾರ ಕೊಟ್ಟರು ಎಂದು ಹೇಳಿ ನನಗೆ ಅಸೂಯೆಯಾಗಲಿ, ಆಕ್ರೋಶವಾಗಲಿ ಇಲ್ಲ, ದಯವಿಟ್ಟು ನಿಮ್ಮಲ್ಲಿ ಆ ರೀತಿ ಭಾವನೆ ಇದ್ದರೆ ತಾವು ಆ ಭಾವನೆಯನ್ನು ತೆಗೆದುಹಾಕಿಬಿಡಿ ಎಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಕುಮಾರಸ್ವಾಮಿಯವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು ಒಬ್ಬ ಮಾಜಿ ಪ್ರಧಾನಿಯವರ ಸುಪುತ್ರರು. ಆದುದರಿಂದ ನಾನು ನಿವ' ಬಗ್ಗೆ ಹಗುರವಾಗಿ ಮಾತನಾಡುವುದಾಗಲಿ, ನಿಮ್ಮ ಕೆಲಸ ಕಾರ್ಯಗಳ ಬಗ್ಗೆ ಟೀಕೆ ಟಿಪ್ಪಣಿಯನ್ನು ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ಇಷ್ಟಂತೂ ಈ ಮನೆಯ ಮೂಲಕ ಈ ರಾಜ್ಯದ ಜನರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಈ ಭಾಗದ ಶಾಸಕರು, ಎಷ್ಟು ಒಳ್ಳೆಯತನದಲ್ಲಿ ಈ ಸರ್ಕಾರದೊಂದಿಗೆ ನಡೆದುಕೊಳ್ಳುತ್ತಿದ್ದೇವೆಂದು ಹೇಳಿದರೆ ನಾವ್ಯಾರಾದರೂ ಸಿದ್ಧರಾಮಯ್ಯನವರೆ, ನಿಮ್ಮ ಜಾಗದಲ್ಲಿದ್ದಾಗ ನಿನ್ನೆ ನಡೆದಂಥ ಘಟನೆ ನಡೆದಿದ್ದರೆ ಇಡೀ ರಾಜ್ಯದ ಉದ್ದಗಲಕ್ಕೆ ಅದೆಷ್ಟು ಗೊಂದಲವನ್ನು ಉಂಟು ಮಾಡುತ್ತಿದ್ದರೋ, ಅದೆಷ್ಟು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರಿಸುವಂಥ ಕೆಲಸವನ್ನು ಮಾಡಿಸುತ್ತಿದ್ದರೋ, ಆ ಭಗವಂತನಿಗೆ ಗೊತ್ತು ಆದರೆ ನಾವು ಸಂಯಮದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇವೆ ಏಕೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮದೇ ಸರ್ಕಾರ ಇದು. ನಾವು ಇಲ್ಲಿ ಕುಳಿತಿರಬಹುದು, ನೀವು ಅಲ್ಲಿ ಕುಳಿತಿರಬಹುದು, ಈ ಸಮಸ್ಯೆಗೆ ಪರಿಹಾರ ಹುಡುಕಬೇಕೆಂಬ ಕಳಕಳಿ ನಮಗೂ ನಿಮ್ಮಂತೆ ಇದೆ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ, ಈ ರಾಜ್ಯದ ಉದ್ದಗಲಕ್ಕೆ ಇಂಥ ಅನೇಕ ಅನಾಹುತಗಳು ನಡೆಯುತ್ತಿವೆ, ರೈತ ಸಂಕಷ್ಟದಲ್ಲಿ ಸಿಲುಕಿ ನರಳುತ್ತಿದ್ದಾನೆ ನೀವು ಯಾವ ನೆರವನ್ನು ಅವರಿಗೆ ಕೊಟ್ಟಿರಿ? ನಾನು ಮುಖ್ಯಮಂತ್ರಿಯಾಗಿದ್ದೆ ಕರ್ನಾಟಕ ರಾಜ್ಯದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಾವೂ ಸಹ ಗಮನವನ್ನು ಕೊಟ್ಟಿದ್ದೇವೆ ರೈತರ ಸಂಕಷ್ಟಕ್ಕೆ ಸ್ಪಂದಿಸಿದ್ದೇವೆ. ರೈತರ ಸಾಲ ಮನ್ನಾ ಮಾಡಿದ್ದೇವೆ, ಕಡಿಮೆ ಬಡ್ಡಿಗೆ ರೈತರಿಗೆ ಸಾಲವನ್ನು ದೊರೆಯುವಂತೆ

ಮಾಡಿದ್ದೇವೆ. ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾಗ ಪರಿಹಾರ ಧನವನ್ನು ಕೊಡುವಂಥ ಪ್ರಯತ್ನವನ್ನು ಮಾಡಿದ್ದೇವೆ ನಾವು ಅಲ್ಲಿದ್ದಾಗ ನೀವು ಇಲ್ಲಿದ್ದಾಗ ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ ಆದರೆ ನೀವು ರೈತರನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದಿರಿ. ನಾನು ಪ್ರಾರಂಭದಲ್ಲಿ ಹೇಳಿದ್ದೇನೆ, ಆ ಕಬ್ಬು ಬೆಳೆಗಾರರ ಜೊತೆ ಕುಳಿತು ಅವರೊಂದಿಗೆ ಮಾತನಾಡಿ ಅವರ ಸಮಸ್ಯೆಯನ್ನು ಬಗೆಹರಿಸುವಂಥ ಪ್ರಾಮಾಣಿಕವಾಗಿ ಪ್ರಯತ್ನ ನೀವು ಮಾಡಿದ್ದಿದ್ದರೆ, ಇವತ್ತು ಚರ್ಚೆ ಮಾಡುವುದನ್ನು ನಿನ್ನೆ ಮೊನ್ನೆಯೇ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಬಹುಶ. ಕುಮಾರಸ್ವಾಮಿಯವರು ನಾಲ್ಕೂವರೆ ಐದು ಗಂಟೆಗಳ ಕಾಲ ಈ ರಾಜ್ಯದ ರೈತರ ಉತ್ಪನ್ನಗಳ ಪರಿಸ್ಥಿತಿಗಳು ಏನಾಗಿವೆ, ಸಂಕಷ್ಟದಲ್ಲಿ ಹೇಗಿದ್ದಾನೆಂಬ ಬಗ್ಗೆ ವಿವರವನ್ನು ಕೊಟ್ಟರು ಎಷ್ಟು ಗಂಟೆಗಳ ಮಾತನಾಡಿದ್ದೀರಿ ಎಂಬುದು ಮುಖ್ಯವಲ್ಲ, ಸ್ವಾಮಿ. ಈ ಸಮಸ್ಯೆಗೆ ನಾವು ಪರಿಹಾರ ಹುಡುಕಬೇಕಾಗಿದೆ, ಆದರೆ ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ ನೀವು ಮನಸ್ಸು ಮಾಡಿದರೆ ಕಬ್ಬು ಬೆಳೆಗಾರರ ಸಮಸ್ಯೆಯನ್ನು ಬಗೆ ಹರಿಸುವುದಕ್ಕಾಗುವುದಿಲ್ಲವೇನು? ನಾನು ನಿಮ್ಮ ಜಾಗದಲ್ಲಿ ಕುಳಿತಿದ್ದರೆ 1,22,000 ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ 10,000-00 ಕೋಟಿ ರೂಪಾಯಿಗಳನ್ನು ರೈತರಿಗೋಸ್ಕರ ನಾವು ತೆಗೆದಿಡುತ್ತೇವೆ, ಬೆಂಬಲ ಬೆಲೆಯನ್ನು ಕೊಡುತ್ತೇವೆ, ಅದು ಭತ್ತ ಇರಲಿ, ತೊಗರಿ ಇರಲಿ, ಕಬ್ಬು ಇರಲಿ ಅಥವಾ ದ್ರಾಕ್ಷಿ ಇರಲಿ, ರೈತ ಕೊಟ್ಟಂಥ ತೆರಿಗೆ ಹಣವಲ್ಲವೆ ಇದು? ತಾವು ಇವತ್ತು ಮನಸ್ಸು ಮಾಡಿದ್ದಿದ್ದರೆ, ಯಾವ ಕಬ್ಬು ಬೆಳೆಗಾರರು ಸಂಕಷ್ಟದಲ್ಲಿ ನರಳುತ್ತಿದ್ದಾರೆ ಅವರಿಗೆ ಸಹಾಯ ಮಾಡಬಹುದಿತ್ತು ನಾನು ಮಾತನಾಡುವಾಗ ಹೇಳಿದೆ, ಒಂದು ಟನ್ ಕಬ್ಬಿಗೆ ಇಲ್ಲಿ ಚರ್ಚೆಯಾದಂತೆ 3,250-00 ರೂಪಾಯಿಗಳು ಅಬಕಾರಿ ಇಲಾಖೆಯಲ್ಲಿ ಒಂದಲ್ಲ ಒಂದು ರೀತಿ ತೆರಿಗೆ ಬರುತ್ತದೆ. ಆಮೇಲೆ 1000-00 ರೂಪಾಯಿಗಳನ್ನು ರೈತರಿಗೆ ವಾಪಸ್ಸು ಕೊಡುತ್ತೇವೆಂದು ನೀವು ಸಹ ನಿರ್ಧಾರವನ್ನು ಮಾಡಿದ್ದೀರಿ. ಇವತ್ತೇನು 2,650-00 ರೂಪಾಯಿಗಳನ್ನು ನಿಗದಿ ಮಾಡಿದ್ದೀರಿ, ಅದನ್ನು ಕಬ್ಬಿಗೆ ಬೆಲೆ ಕೊಡಲಿಕ್ಕೆ ಸಾಧ್ಯವಿದೆ. ಆದರೆ ಇವತ್ತು ಆ ರೀತಿ ನೀವು ಮಾಡಬಹುದು

ಎಂಬ ವಿಶ್ವಾಸ ನನಗೆ ಇಲ್ಲ ಹೋದ ಸಾರಿ ಇದೇ ಸಮಯದಲ್ಲಿ 80 ಲಕ್ಷ ಟನ್ ಅರೆದಾಗಿತ್ತು. ಆದರೆ ಇವತ್ತು ನೀವು ಕೊಟ್ಟಂಥ ಅಂಕಿಅಂಶದ ಪ್ರಕಾರ ಇವತ್ತಿನವರೆಗೆ 37 ಲಕ್ಷ ಟನ್ ಕಬ್ಬು ಮಾತ್ರ ಅರೆಯಲಾಗಿದೆ. ಇನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಕಬ್ಬನ್ನು ಅರೆಯುವುದಿಲ್ಲ. ನಾನು ಆ ರೈತನ ಶವಸಂಸ್ಕಾರಕ್ಕೆ ಹೋಗಿ ವಾಪಸ್ಸು ಬರುವಾಗ ದಾರಿಯಲ್ಲಿ ಟ್ರ್ಯಾಕ್ಟ ಗಳಲ್ಲಿ ತಂದಿರುವಂಥ ಕಬ್ಬು ಹಾಗೆಯೇ ನಿಂತಿವೆ. ನೀವು ಅಂಕಿಅಂಶಗಳನ್ನು ತರಿಸಿಕೊಳ್ಳಿ. ಕಾರ್ಖಾನೆ ಮಾಲೀಕರು ಈಗಾಗಲೇ ಕಬ್ಬು ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದಾರೆ ಮುಂದೇನೇನು ಅನಾಹುತಗಳು ಆಗಬಹುದು ಎಂಬ ಕಲ್ಪನೆ ಇದೆಯೇ ನಿಮಗೆ? ಈಗಾಗಲೇ ಒಂದು ತಿಂಗಳು ತಡವಾಗಿದೆ, ಬರುವಂಥ ದಿವಸಗಳಲ್ಲಿ ಈ ಕಬ್ಬು ಪೂರ್ಣ ಅರೆಯದಿದ್ದರೆ ರೈತ ಪೂರ್ಣ ಬೀದಿಪಾಲಾಗುತ್ತಾನೆ, ಈ ರೀತಿಯ ಆತ್ಮಹತ್ಯೆಗಳಿಗೆ ನೀವೇ ಕಾರಣರಾಗುತ್ತೀರಿ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಲ್ಲಿ ಸುತ್ತಿ ಬಳಸಿ ಹೇಳದೆ ನೇರವಾಗಿ ಹೇಳುವಂಥದ್ದು, 2650-00 ರೂಪಾಯಿಗಳಷ್ಟು ಒಂದು ಟನ್ ಕಬ್ಬಿಗೆ ಬೆಲೆ ಸಿಗುವಂತೆ ನಾವು ಮಾಡುತ್ತೇವೆಂದು ಏನು ಹೇಳಿದ್ದೀರಿ. ಕಾರ್ಖಾನೆ ಮಾಲೀಕರ ಮೇಲೆ ನೀವು ಏನು ಬೇಕಾದರೂ ಕ್ರಮ ತೆಗೆದುಕೊಳ್ಳಿ, ಅದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ ನಮಗೆ ಚಿಂತನೆ ಇರುವುದು ನಮ್ಮ ರಾಜ್ಯದ ರೈತರ ಬಗ್ಗೆ ಈಗಾಗಲೇ ಸರ್ಕಾರ ಬದುಕಿದೆಯೇ ಎಂದು ನಾನು ಕೇಳುತ್ತೇನೆ. 2650-00 ರೂಪಾಯಿಗಳನ್ನು ಒಂದು ಟನ್ ಕಬ್ಬಿಗೆ ಬೆಲೆ ನಿಗದಿ ಮಾಡಿದ ಮೇಲೆಯೂ ಸಹ 1800-00 ರೂಪಾಯಿಗಳಿಗೆ, 2,000-00 ರೂಪಾಯಿಗಳಿಗೆ ಅಗ್ರಿಮೆಂಟ್ ಮಾಡಿಸಿಕೊಂಡು ಒತ್ತಾಯ ಮಾಡುತ್ತಿರುವಂಥ ಈ ಸಂದರ್ಭದಲ್ಲಿ ಅದನ್ನು ಹತೋಟಿಗೆ ತರುವುದಕ್ಕೆ ಸಾಧ್ಯವಿಲ್ಲವೆಂದು ಸುಮ್ಮನಾದರೆ ದಯವಿಟ್ಟು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ

ಶ್ರೀ ಬಸವರಾಜ ರಾಯರೆಡ್ಡಿ: ಈ ರಾಜ್ಯಕ್ಕೆ ಸದನದಿಂದ ತಪ್ಪು ಮಾಹಿತಿ ಹೋಗಬಾರದು.

ಶ್ರೀ ಬಿ.ಎಸ್ ಯಡಿಯೂರಪ್ಪ: ನಾನು ಈಲ್ಡ್ ಆಗಿಲ್ಲ

ಅಧ್ಯಕ್ಷರು: ಅವರು ಈಲ್ಡ್ ಆಗಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಹೇಗೆ ತೆಗೆದುಕೊಳ್ಳಬೇಕು?

ಅಧ್ಯಕ್ಷರು: ರಾಯರೆಡ್ಡಿ ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಉಮೇಶ್ ಕತ್ತಿ: ನೀವು ಮಂತ್ರಿಗಳಾಗುವುದಿಲ್ಲ, ಸುಮ್ಮನೆ ಏಕೆ ಮಾತನಾಡುತ್ತೀರಿ?

ಅಧ್ಯಕ್ಷರು: ಬಸವರಾಜ ರಾಯರೆಡ್ಡಿಯವರೆ, ತಾವು ನಂತರ ಮಾತನಾಡಿ ಈಗ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು

(ಗೊಂದಲ)

ಶ್ರೀ ವಿಶ್ವನಾಥ ಸಿ. ಮಾಮನಿ: ಹೊಸ ಸರ್ಕಾರ ಬಂದ ನಂತರ ಪೂರಕ ಬಜೆಟ್ ಮಾಡಿ ಇದನ್ನೆಲ್ಲಾ include ಮಾಡಲಿಲ್ಲವೇ? ಸದನವನ್ನು ದಿಕ್ಕು ತಪ್ಪಿಸುವ ಕೆಲಸವನ್ನು ಮಾಡಬೇಡಿ ಬಿಡಿ.

(ಗೊಂದಲ)

.**ಅಧ್ಯಕ್ಷರು:** ಅವರು yield ಆಗಿಲ್ಲ. ದಯವಿಟ್ಟು ತಾವು ನಂತರ ಮಾತನಾಡಿ. ಈಗ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್ ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಅವರು ಸ್ವತಂತ್ರವಾಗಿ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ಇವರನ್ನೆಲ್ಲಾ ಕುಳಿತು

ಕೊಳ್ಳುವುದಕ್ಕೆ ಹೇಳಿ ಮಾಜಿ ಮುಖ್ಯಮಂತ್ರಿಗಳು ಮಾತನಾಡು ವಾಗ ಸಮಾಧಾನವಾಗಿ ಇರುವುದನ್ನು ಆಡಳಿತ ಪಕ್ಷದ ಶಾಸಕರು ಕಲಿತುಕೊಳ್ಳ ೇಕು.

(ಗೊಂದಲ)

ಅಧ್ಯಕ್ಷರು: ನಂತರ ನಿಮಗೆ (ಬಸವರಾಜ ರಾಯರೆಡ್ಡಿ) ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ತಾವು ಲೋಕಸಭೆ ಮತ್ತು ಾಸನ ಸಭೆಯನ್ನು ನೋಡಿ ಬಂದವರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಮಾನ್ಯ ಮುಖ್ಯಮಂ ್ರಿಗಳಿಗೆ ಸ್ಪಷ್ಟವಾಗಿ ಹೇಳುವುದೇನೆಂದರೆ, ನೀವು ಈ ಮನೆಯಲ್ಲಿ ನಿಂತು ನಮಗೂ ಕಾರ್ಖಾನೆಗಳಿಗೂ ಸಂಬಂಧವಿಲ್ಲ, ಅವರ ಮೇಲೆ ಏನೇ ಕ್ರಮ ತೆಗೆದುಕೊಳ್ಳುವುದಕ್ಕೂ ನಮ್ಮ ಅಭ್ಯಂತರವಿಲ್ಲ. ಒಂದು ಟನ್ ಕಬ್ಬಿಗೆ 2,650 ರೂಪಾಯಿಗಳನ್ನು ಕೊಡುತ್ತೇವೆಂದು ಇವತ್ತು ನೀವೇನು ಘೋಷಣೆ ಮಾಡಿದ್ದೀರಿ, ಇದು ಸರ್ಕಾರದ ಜವಾಬ್ದಾರಿ, ನಾವು ರೈತರ ಪ ವಾಗಿ ನಿಲ್ಲುತ್ತೇವೆ. ಯಾವುದೇ ಕಾರ್ಖಾನೆ ಮಾಲೀಕ ಈ ಕಾರಣಕ್ಕಾಗಿ ಬ್ಬನ್ನು ಅರೆಯುವುದಕ್ಕೆ ತಡ ಮಾಡಿದರೆ, ಒಂದು ಟನ್ ಕಬ್ಬನ್ನು 1800-2000 ರೂಪಾಯಿಗಳಿಗೆ ಕೊಡುವುದಕ್ಕೆ ರೈತರ ಒಪ್ಪಿಗೆ ಇದ್ದರೆ ಮಾತ್ರ ಕಬ್ಬನ್ನು ಅರೆಯುತ್ತೇವೆಂದು ರೈತರಿಗೆ ಷರತ್ತನ್ನು ಹಾಕಿ ಬಾಂಡ್ ಬರೆಸಿಕೊಳ್ಳುತ್ತಿದ್ದಾನೆ. ಈ ರೀತಿ ಕಾನೂನುಬಾಹಿರವಾದ ಕೆಲಸವನ್ನು ನಿಲ್ಲಿಸದಿದ್ದರೆ ಕಬ್ಬು ಬೆಳೆಗಾರರ ಪಾಲಿಗೆ ಈ ಸರ್ಕಾರ ಬದುಕಿಲ್ಲ, ಸತ್ತಿದೆಯೆಂಬ ಭಾವನೆ ಮೂ ುತ್ತದೆ. ಯಾವುದೇ ಕಾರ್ಖಾನೆ ಮಾಲೀಕರು ಈ ರೀತಿ ಒಪ್ಪಂದ ಮಾಡಿಕೊಳ್ಳುವ ಪ್ರಯತ್ನ ಮಾಡಿದರೆ ಅಂತಹವರ ಲೈಸೆನ್ಸನ್ನು ರದ್ದು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ಕೊಡಬೇಕು. ಸರ್ಕಾರ ತಮ್ಮ ವಶಕ್ಕೆ ಕಾರ್ಖಾನೆಯನ್ನು ಪಡೆಯಲಿ, ಇದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಒಂದು ಟನ್ ಕಬ್ಬಿಗೆ 2,650 ರೂಪಾಯಿಗಳನ್ನು ಕೊಡಿಸುವ ಜವಾಬ್ದಾರಿ ತಮ್ಮದೆಂಬ ಮಾತನ್ನು ತಾವು ಇಲ್ಲಿ ನಿಂತು ಒಪ್ಪಿಕೊಳ್ಳಬೇಕು. ಎರಡನೆಯದಾಗಿ, ಭತ್ತದ

ಬೆಳೆಗಾರರು ಕೂಡ ಇಂದು ಬೀದಿ ಪಾಲಾಗಿದ್ದಾರೆ. ಒಂದು ಕ್ವಿಂಟಾಲ್‌ಗೆ 2,200 ರೂಪಾಯಿಗಳಿದ್ದ ಭತ್ತದ ಬೆಲೆ ಇವತ್ತು 1200–1300 ರೂಪಾಯಿಗಳಾಗಿದ್ದು, ಇದನ್ನು ಕೇಳುವವರಿಲ್ಲ. ಒಂದು ಕ್ವಿಂಟಾಲ್‌ಗೆ 500 ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಡುವ ಸಂಬಂಧ ಕೇಂದ್ರ ಸರ್ಕಾರದ ಸಹಾಯವನ್ನು ಪಡೆದು ಒಂದು ಕ್ವಿಂಟಾಲ್ ಭತ್ತಕ್ಕೆ 2,000 ರೂಪಾಯಿಗಳಾದರೂ ಸಿಗುವ ವ್ಯವಸ್ಥೆ ಮಾಡದಿದ್ದರೆ ಭತ್ತದ ಬೆಳೆಗಾರರು ಬೀದಿಗೆ ಇಳಿಯುವ ಸಂದರ್ಭ ಎದುರಾಗುತ್ತದೆ. ಇದೇ ರೀತಿ ತೊಗರಿ ಬೆಳೆಗಾರರ ವಿಷಯ ಕೂಡ ಈಗಾಗಲೇ ಪ್ರಸ್ತಾಪವಾಗಿದೆ ಅವರು ಕೂಡ ಇವತ್ತು ಬೀದಿ ಪಾಲಾಗಿದ್ದಾರೆ. ಅಡಿಕೆ ಬೆಳೆಗಾರರಿಗೆ ಪರಿಹಾರ ಕೊಡುತ್ತೇವೆಂದು ಹೇಳಿ ಅಲ್ಲೊಬ್ಬರಿಗೆ ಇಲ್ಲೊಬ್ಬರಿಗೆ ಪರಿಹಾರ ಕೊಟ್ಟು ನಿಲ್ಲಿಸಿದ್ದೀರಿ.ಹಿಂದಿನ ಸರ್ಕಾರ 25,000 ರೂಪಾಯಿಗಳ ಸಾಲ ಮನ್ನಾ ಮಾಡಿರುವ ಬಾಕಿ 810 ಕೋಟಿ ರೂಪಾಯಿಗಳನ್ನು ಈ ನಿಮಿಷದವರೆಗೆ ನೀವು ಬಿಡುಗಡೆ ಮಾಡಿಲ್ಲ. ಈ 25,000 ರೂಪಾಯಿಗಳ ಸಾಲ ಅವನಿಗೆ ಸಿಕ್ಕಿಲ್ಲ. ಈ concession ರೈತರಿಗೆ ಸಿಕ್ಕಿಲ್ಲ. ನೀವು ರೈತರಿಗೋಸ್ಕರ ಏನು ಮಾಡುತ್ತಿದ್ದೀರಿ? ಈಗಾಗಲೇ ನವೆಂಬರ್ ತಿಂಗಳು ಮುಗಿಯುತ್ತಿದ್ದು, ಡಿಸೆಂಬರ್ ತಿಂಗಳು ಬರುತ್ತಿದೆ. ಅಭಿವೃದ್ಧಿ ಕಾರ್ಯಗಳು ನಿಂತುಹೋಗಿದೆ ರೈತರ ಸಂಕಷ್ಟಗಳಿಗೆ ತಾವು ಸ್ಪಂದಿಸುತ್ತಿಲ್ಲ ಶಾಸಕರು ಅವರ ಕ್ಷೇತ್ರಗಳಲ್ಲಿ ಗೌರವದಿಂದ ಓಡಾಡುವುದಕ್ಕೆ ಆಗದ ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದಿದ್ದಾರೆ. ಯಾವ ಅಧಿಕಾರಿಗಳು ಕೂಡ ಈ ಬಗ್ಗೆ ಯೋಚನೆ ಮಾಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತೇನೆ. ಈ ರೀತಿ ರೈತರ ಆತ್ಮಹತ್ಯೆಗಳು ಪುನರಾವರ್ತನೆಯಾಗಬಾರದೆಂದು ಇದ್ದರೆ, ನೀವೇನು ನಮ್ಮ ಜೊತೆ ಸಮಾಲೋಚನೆ ಮಾಡಿ ಒಂದು ಟನ್ ಕಬ್ಬಿಗೆ 2,650 ರೂಪಾಯಿಗಳನ್ನು ಕೊಡುತ್ತೇವೆಂದು ಒಂದು ನಿರ್ಧಾರಕ್ಕೆ ಬಂದಿದ್ದೀರಿ. ಇದು ಸರ್ಕಾರದ ಜವಾಬ್ದಾರಿಯಾಗಿದೆ. ಯಾವುದೋ ಒಂದು ಕಾರ್ಖಾನೆ ಮಾಲೀಕರು 250–300 ರೂಪಾಯಿಗಳ ಕಡಿಮೆ ಬೆಲಯನ್ನು ಕೊಟ್ಟರೆ ಈ ವ್ಯತ್ಯಾಸದ ಹಣವನ್ನು ಸರ್ಕಾರ ಭರಿಸುತ್ತೇವೆಂಬ ಮಾತನ್ನು

ಹೇಳಬೇಕಾಗುತ್ತದೆ ನನ್ನ ಮತ್ತೊಂದು ಸಲಹೆ ಏನೆಂದರೆ ಯಾವುದೇ ಕಬ್ಬು ಬೆಳೆಗಾರರು ಕಾರ್ಖಾನೆಗೆ ಹೋಗಿ ಕಬ್ಬನ್ನು ಕೊಟ್ಟರೆ ಕಾರ್ಖಾನೆ ಮಾಲೀಕ receipt ಅನ್ನು ಕೊಡುತ್ತಾನೆ ವಿಧಾನಸೌಧದಲ್ಲಿ ಒಂದು ಕೌಂಟರ್‌ನ್ನು ತೆರೆದು ಕಾರ್ಖಾನೆ ಮಾಲೀಕ ಕೊಡಲೇಬೇಕಾದ ಹಣವನ್ನು ನಿಮಗೆ ಪಾವತಿ ಮಾಡಲಿ ಅದನ್ನು ನೀವು ಕೊಡುವ ವ್ಯವಸ್ಥೆಯನ್ನು ಮಾಡಿ. ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಮಾಡಿ. ಅಥವಾ ವ್ಯತ್ಯಾಸದ ಮೊತ್ತವನ್ನು ತಾವು ಕೊಡುತ್ತೇವೆಂಬ ಭರವಸೆಯನ್ನು ರಾಜ್ಯದ ರೈತರಿಗೆ ಕೊಡಿ. ಹೊಸ ರೀತಿಯಲ್ಲಿ ಆಡಳಿತವನ್ನು ನಡೆಸುವುದಕ್ಕೆ ಪ್ರಾರಂಭ ಮಾಡಿ. ಆದರೆ ಅಲ್ಲಿ ಖರೀದಿಯೇ ಪ್ರಾರಂಭವಾಗಿಲ್ಲ. ಬೆಂಬಲ ಬೆಲೆ ಘೋಷಣೆ ಮಾಡುವುದು, ಅಲ್ಲಿ ಕಾರ್ಖಾನೆ ಮಾಲೀಕ ಖುಷಿ ಬಂದಂತೆ ರೈತರನ್ನು, ಶೋಷಣೆ ಮಾಡುವುದು ಮುಂದುವರೆಯುತ್ತಿದೆ ಇಂತಹ ಸಂದರ್ಭದಲ್ಲಿ ಯಾವುದಾದರೊಂದು ಸ್ಪಷ್ಟವಾದ ನಿರ್ಧಾರಕ್ಕೆ ಸರ್ಕಾರ ಬರಬೇಕಾಗುತ್ತದೆ. ರೈತರ ಪರವಾಗಿ ತಾವು ನಿಲ್ಲಬೇಕಾಗುತ್ತದೆ. ಇಲ್ಲವಾದರೆ ನಿಶ್ಚಿತವಾಗಿ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ನಾನು ಬಹಳ ಉದ್ದವಾದ ಭಾಷಣವನ್ನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಹಿಂದೆ ಇರುವುದು ಕೇವಲ ಆರು ಜನ ಶಾಸಕರು ಎಂಬುದು ನನಗೆ ತಿಳಿದಿದೆ. ಬಹುಶಃ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನನ್ನ ಹಿಂದೆ ಎಷ್ಟು ಜನ ಶಾಸಕರು ಇದ್ದಾರೆಂಬುದರ ಮೇಲೆ ಅಳತೆ ಮಾಡುವಂತಹುದು ನನಗೆ ಗೊತ್ತಿದೆ ದೊಡ್ಡ ಅಪರಾಧವನ್ನು ನೀವು ಮಾಡಿದ್ದೀರೆಂದು ನಾನು ಇಂದು ಹೇಳುತ್ತಿದ್ದೇನೆ. ರೈತರ ಕೆಂಗಣ್ಣಿಗೆ ನೀವು ಗುರಿಯಾಗಿದ್ದೀರಿ. ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಈ ಪದಗಳು un-parliamentary, ದಯವಿಟ್ಟು ಈ ಪದಗಳನ್ನು ರೆಕಾರ್ಡ್‌ನಿಂದ ತೆಗೆದು ಹಾಕಬೇಕು

(ಗೊಂದಲ)

(ಈ ಹಂತದಲ್ಲಿ ಆಡಳಿತ ಪಕ್ಷದ (ಕಾಂಗ್ರೆಸ್) ಹಲವಾರು ಶಾಸಕರು ಈ ಪದವನ್ನು ಕಡತದಿಂದ ತೆಗೆದುಹಾಕಬೇಕೆಂದು ಹೇಳಿದರು)

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲಾ ಶಾಸಕರು ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು: ಅವರು ಅವರ ಧಾಟಿಯಲ್ಲಿ, ಅವರ ಭಾಷೆಯಲ್ಲಿ ಹೇಳಿದ್ದಾರೆ ನೀವು ನಿಮ್ಮದೇ ಆದ ಭಾಷೆಯಲ್ಲಿ ತಕ್ಕ ರೀತಿಯಲ್ಲಿ ಉತ್ತರವನ್ನು ಕೊಡುವ ಪ್ರಯತ್ನವನ್ನು ಮಾಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ನೀವು ಒಬ್ಬ ಮಾಜಿ ಮುಖ್ಯಮಂತ್ರಿಯಾಗಿದ್ದವರು ಈ ರೀತಿಯೆಲ್ಲಾ ಮಾತನಾಡಬಾರದು.

(ಗೊಂದಲ)

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ನಾವು ಈ ಹಿಂದೆ ಸರ್ಕಾರವನ್ನು ನಡೆಸುವ ಸಂದರ್ಭದಲ್ಲಿ ಇವರು ವಿರೋಧ ಪಕ್ಷದಲ್ಲಿದ್ದಾಗ ಇದಕ್ಕಿಂತ ದೊಡ್ಡ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ನಿಮ್ಮ ಸರ್ಕಾರವಿದ್ದಾಗ ಹಾವೇರಿಯಲ್ಲಿ ನಡೆದ ಗೋಲಿಬಾರ್‌ಗೆ ತಾವೇ ಜವಾಬ್ದಾರರಾಗಬೇಕು ಆ ಸಮಯದಲ್ಲಿ ಅವರೇ ಮುಖ್ಯಮಂತ್ರಿಯಾಗಿದ್ದರು, ಅದನ್ನು ಅವರೇ ಒಪ್ಪಿಕೊಳ್ಳಬೇಕು

(ಗೊಂದಲ)

ಅಧ್ಯಕ್ಷರು: ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಎಂಬ ಮಾತನ್ನು ಕಡತದಿಂದ ತೆಗೆದು ಹಾಕಲಾಗಿದೆ

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಮೂಲಕ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳಿಗೆ ಏನು ಕೇಳುವುದಕ್ಕೆ ಇಚ್ಛೆಪಡುತ್ತೇನೆಂದರೆ ನಿನ್ನೆಯ ಆತ್ಮಹತ್ಯೆಗೆ ಯಾರು ಕಾರಣ?

(ಗೊಂದಲ)

ಶ್ರೀ ವಿನಯ್‌ಕುಮಾರ್ ಸೊರಕೆ: ನೀವೇ ಕಾರಣ.

ಶ್ರೀ ಕೆ.ಜೆ ಜಾರ್ಜ್: ನೀವೇ ಕಾರಣ.

(ಗೊಂದಲ)

ಶ್ರೀ ಎನ್ ಎ. ಹ್ಯಾರಿಸ್ ಶಾದಿ ಮುಖ್ಯ ಎಂದು ಹೋದರಲ್ಲಾ ಸ್ವಾಮಿ?

(ಗೊಂದಲ)

ಅಧ್ಯಕ್ಷರು: ಸ್ವಲ್ಪ ತಾಳಿ. Please resume

(ಗೊಂದಲ)

ಅಧ್ಯಕ್ಷರು: ಸ್ವಲ್ಪ ಕೇಳಿ. ಚರ್ಚೆ ಕಾಲದಲ್ಲಿ ಗಂಭೀರವಾಗಿ ಗಮನಿಸಿ ಅದಕ್ಕೆ ತಕ್ಕ ಉತ್ತರವನ್ನು ಕೊಡುವಂತಹ ಪ್ರಯತ್ನವನ್ನು ಮಾಡಿ. ಅವರು ಹೇಳುವುದನ್ನು ಕೇಳಬೇಕು. ನಂತರ ನಾವು ಹೇಳಬೇಕು. ಇದು ಚರ್ಚೆಯ ಒಂದು ತಾತ್ಪರ್ಯ, ಸಂಸ್ಕೃತಿ.

SRI BASAVARAJA RAYAREDDY: He can't misguide the House

(ಗೊಂದಲ)

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್: ಯಡಿಯೂರಪ್ಪನವರು ಶಾದಿ ಶಾದಿ ಎಂದು 5 ಕೋಟಿ ಬಜೆಟ್ ಬಗ್ಗೆ ಮಾತನಾಡಿದರು

(ಗೊಂದಲ)

ಅಧ್ಯಕ್ಷರು: ಸಾಕು ಬಿಡಿ . . ಪ್ಲೀಸ್

ಶ್ರೀ ಬಿ.ಎಸ್ ಯಡಿಯೂರಪ್ಪ: ವಿಠ್ಠಲ್ ಅರಬಾವಿ ನೀವು ದಾಖಲೆಗಳನ್ನು ತರಿಸಿ ಪತ್ರಿಕೆಗಳಲ್ಲಿ ಬಂದಿರುವ ದಾಖಲೆಗಳನ್ನು ತರಿಸಿ. ಸತ್ತಂತಹ ರೈತ ನಿನ್ನೆಯ ದಿವಸ ರೈತರನ್ನು ಕುರಿತು ಕೊನೆಯಲ್ಲಿ ಮಾಡಿದ ಭಾಷಣದ ಪ್ರತಿಯನ್ನು ತರಿಸಿ. ನಾನು ಕುರುಬ, ಮಾನ್ಯ ಮುಖ್ಯಮಂತ್ರಿಯವರೂ ಕೂಡ ಕುರುಬ ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದಾನೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ಪತ್ರಿಕೆಯಲ್ಲಿರುವುದನ್ನು ಏಕೆ ಹೇಳಬಾರದು?

(ಗೊಂದಲ)

ಶ್ರೀ ಆರ್. ಅಶೋಕ್: ಅವರು ಹೇಳಿರುವ ವಿಷಯ ಪತ್ರಿಕೆಯಲ್ಲಿ ಬಂದಿದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಶಾದಿ ಬಗ್ಗೆ ಹೇಳುತ್ತಿದ್ದರು .

(ಗೊಂದಲ)

ಅಧ್ಯಕ್ಷರು: ದಯವಿಟ್ಟು ತಮ್ಮ ತಮ್ಮ ಸೀಟಿನಲ್ಲಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಅವರು ಹೇಳಿದ ಮಾತಿಗೆ ಕ್ರಿಯಾಲೋಪ ಎತ್ತುವುದಾದರೆ ನಿಮಗೆ ಅವಕಾಶ ಕೊಡುತ್ತೀನಿ. ಅವರು ಹೇಳಿದ ಮಾತಿನಲ್ಲಿ ಆಪಾದನೆ ಇದ್ದರೆ ಅಥವಾ ಪಾರ್ಲಿಮೆಂಟರಿ ವ್ಯವಸ್ಥೆಗೆ ದೂರವಾಗಿದ್ದರೆ ಕ್ರಿಯಾಲೋಪ ಎತ್ತಿ, ಅದನ್ನು ಚರ್ಚೆ ಮಾಡಿ ತೆಗೆದುಹಾಕುತ್ತೇನೆ. ನೀವೇ ಏಕೆ ಅದನ್ನು ಮಾಡುತ್ತೀರಿ?

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಜಾತಿಯ ಬಗ್ಗೆ ಎಲ್ಲಿಯೂ ಮಾತನಾಡಬಾರದು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಒಬ್ಬ ಮಾಜಿ ಮುಖ್ಯಮಂತ್ರಿ ಆ ರೀತಿಯಾಗಿ ಮಾತನಾಡಬಾರದು,

(ಗೊಂದಲ)

ಅಧ್ಯಕ್ಷರು: ದೇಶಪಾಂಡೆಯವರೇ, ಅದು ಹಾಗಲ್ಲ, If it is un-parliamentary, unbecoming, we can delete it

(ಗೊಂದಲ)

ಶ್ರೀ ಕೆ. ಅಭಯಚಂದ್ರ, ಮಾನ್ಯ ಅಧ್ಯಕ್ಷರೆ, ಅವರಿಗೆ ಏಕೆ ಈ ರೀತಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ?

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ದಯವಿಟ್ಟು ಭಾಷೆಯನ್ನು ಬಳಸುವಾಗ ಇನ್ನೊಬ್ಬರಿಗೆ ನೋವಾಗದ ರೀತಿಯಲ್ಲಿ ಬಳಸಿ ಎಂದು ನಾನು ವಿನಂತಿಸುತ್ತೇನೆ ದಯವಿಟ್ಟು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಚರ್ಚೆ ಉತ್ತಮವಾಗಿ ನಡೆಯುತ್ತಿದೆ. ಆದ್ದರಿಂದ ಅದಕ್ಕೆ ಪೂರಕವಾಗಿ ಉತ್ತಮ ಭಾಷೆಯನ್ನು ಬಳಸಿಕೊಳ್ಳಿ

(ಗೊಂದಲ)

ಶ್ರೀ ಪ್ರಕಾಶ್ ಬಿ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಚರ್ಚೆಯಾಗಿದ್ದು ಕಬ್ಬಿನ ಬೆಲೆ ಬಗ್ಗೆ. ಈ ಕಡೆ ಗಮನ ಕೊಡಿ ಅಧ್ಯಕ್ಷರೆ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: I am on a point of order. ಪತ್ರಿಕೆಯಲ್ಲಿ ಬಂದಿರುವುದನ್ನು how can he read ನೋಟೀಸ್ ಕೊಟ್ಟಿದ್ದಾರಾ?

(ಗೊಂದಲ)

ಅಧ್ಯಕ್ಷರು: ಚರ್ಚೆ ಆಗಬೇಕಾ ಅಥವಾ ಬೇಡವೆ?

(ಗೊಂದಲ)

ಅಧ್ಯಕ್ಷರು: ಆಯಿತು, ರಾಯರೆಡ್ಡಿ ಅವರೇ, ಪ್ಲೀಸ್ . . .

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇನೆ

(ಗೊಂದಲ)

ಅಧ್ಯಕ್ಷರು: ದಯಮಾಡಿ ಈಗ ಕುಳಿತುಕೊಳ್ಳಿ, ನಾನು ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ ತಾವು ಮಾತನಾಡುತ್ತಿದ್ದೀರಿ ಯಾವಾಗಲೂ ಶಾಸನ ಸಭೆಯಲ್ಲಿ ಮಾತನಾಡುವಾಗ ಮಾತುಗಳನ್ನು ಅರ್ಥಪೂರ್ಣವಾದ ರೀತಿಯಲ್ಲಿ ಕೇಳುವಂತಿರಬೇಕು. ಆಗ ಈ ಶಾಸನಸಭೆಗೆ ಗಾಂಭೀರ್ಯತೆ ಬರುತ್ತದೆ

ಆದ್ದರಿಂದ ನಾನು ಕೈ ಜೋಡಿಸಿ ಕೇಳುವುದೇನೆಂದರೆ, ತಾವು ಹಿರಿಯರು, ಅನುಭವಿಗಳಾದ ನೀವು ಮಾತನಾಡಬೇಕಾದರೆ ನಿಮ್ಮ ಮಾತಿನಿಂದ ಸದನವೇ ಮಿಡಿಯುವಂತಿರಬೇಕು ಆ ರೀತಿ ಮಾತನಾಡಿ, ಅದು ಬಿಟ್ಟು ಶಾಸಕರ ಮನಸ್ಸಿನಲ್ಲಿ ಕ್ರೋಧ ಬೆಳೆಯುವ ರೀತಿಯಲ್ಲಿ ಮಾತನಾಡಿದರೆ ಚರ್ಚೆ ಮಾಡುವುದಕ್ಕೆ ಮತ್ತಷ್ಟು ಆತಂಕ ಬರುವುದಿಲ್ಲವೇ?

(ಗೊಂದಲ)

ಶ್ರೀ ಕೆ ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ಆ ಮಾತನ್ನು ಕಡತದಿಂದ ತೆಗೆದುಹಾಕಬೇಕು.

(ಗೊಂದಲ)

ಅಧ್ಯಕ್ಷರು: ಸಾಕು ಬಿಡಿ, ನಿಮಗೂ ಅವಕಾಶ ಕೊಡುತ್ತೇನೆ ಅದೇ ರೀತಿಯಲ್ಲಿ ಉತ್ತರ ಹೇಳಿ.

(ಗೊಂದಲ)

ಶ್ರೀ ಬಿ ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಸ್ವಂತವಾಗಿ ಏನನ್ನೂ ಓದುತ್ತಿಲ್ಲ. ಪ್ರಜಾವಾಣಿ, ಕನ್ನಡಪ್ರಭ, ಪತ್ರಿಕೆಯಲ್ಲಿ ಬಂದಿರುವುದನ್ನು ಓದುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, I am on a point of order

ಅಧ್ಯಕ್ಷರು: ಅವರು point of order ಎತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಕನ್ನಡ ಪ್ರಭ, ಪ್ರಜಾವಾಣಿ, ಪತ್ರಿಕೆಯಲ್ಲಿ...

ಅಧ್ಯಕ್ಷರು: ಅವರು point of order ಎತ್ತಿದ್ದಾರೆ. ಯಡಿಯೂರಪ್ಪನವರೇ, point of order ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ: ಮೊದಲು ನಾನು point of order ಎತ್ತಿದ್ದೇನೆ.

ಅಧ್ಯಕ್ಷರು: ಅವರು (ಶ್ರೀ. ರಮೇಶ್ ಕುಮಾರ್) ಮೊದಲು ಕೇಳಿದ್ದು. ನೀವು ಕೇಳಲಿಲ್ಲ. ಯಾವಾಗ ಕೇಳಿದಿರಿ ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ: ಮೊದಲು ನಾನು ಕೇಳಿದ್ದು.

ಅಧ್ಯಕ್ಷರು: ನೀವು ಕುಳಿತುಕೊಳ್ಳಿ, ರಮೇಶ್ ಕುಮಾರ್‌ರವರೇ, ನೀವು ಹೇಳಿ

ಶ್ರೀ ಕೆ.ಆರ್ ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಈ ..ವನದ ಅತ್ಯಂತ ಹಿರಿಯ ಹಾಗೂ ಗೌರವಾನ್ವಿತ ಸದಸ್ಯರು, ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಮಾತನಾಡುವಾಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅಷ್ಟೊತ್ತಿಗೆ ಗದ್ದಲ ಆಯಿತು. ಸತ್ತಂತಹ ವ್ಯಕ್ತಿ ತಾನು ಸಾಯುವುದಕ್ಕೆ ಮುಂಚೆ ಭಾಷಣ ಮಾಡಿದ ಕೆಲವು ವಿಚಾರಗಳನ್ನು ಹೇಳಿದ್ದಾರೆಂದು ಹೇಳಿದರು. ನಮಗೆ ಮಾ..ಮಗಳ ಮುಖಾಂತರ ಇದುವರೆವಿಗೂ ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. . ವ್ಯಕ್ತಿ ಅರಭಾವಿಯವರು ನಿನ್ನೆ ಭಾಷಣ ಮಾಡಿದ್ದಾರೆ. ಭಾಷಣ ಮಾಡಿ. ಸ್ವಲ್ಪ ಸಮಯದ ನಂತರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪಿ.ಎಂ. ರಿಪೋರ್ಟ್‌ನಲ್ಲಿ ಏನಿದೆಯೆಂದು ನಮಗೆ ಗೊತ್ತಿಲ್ಲ ಆ ವ್ಯಕ್ತಿಯ ಸಾವಿನ ಬಗ್ಗೆ ಆ ಕುಟುಂಬದವರು ಏನಾದರೂ ಸಂಶಯ ವ್ಯಕ್ತಪಡಿಸಿದ್ದಾರಾ ..ಥವಾ ಇಲ್ಲವಾ ಎನ್ನುವುದು ಗೊತ್ತಿಲ್ಲ ಈಗ ಇವರು ಹೇಳುವಂತಹ ಮಾತ..ಗಳನ್ನು ನೋಡಿದರೆ ಬಹುಶಃ ಅವರ ಸಾವಿನ ಬಗ್ಗೆ ಇವರಿಗೆ ಹೆಚ್ಚಿನ ..ುಳಿವು ಇರಬಹುದೇನೋ .

ಶ್ರೀ ಕೆ.ಜಿ ಬೋಪಯ್ಯ: ಇದು ಕ್ರಿಯಾಲೋಪವಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು: ಒಂದು ಮಾತು, ನೀವು ಕ್ರಿಯಾಲೋಪ ಎ..ದ್ದೀರಿ, ಬೋಪಯ್ಯನವರೇ, ದಯಮಾಡಿ ಸ್ವಲ್ಪ ತಾಳಿ.

(ಗೊಂದಲ)

ಶ್ರೀ ಕೆ ಆರ್ ರಮೇಶ್‌ಕುಮಾರ್: ಬೋಪಯ್ಯನವರೇ, whether there is a point of order or not, you cannot take a decision It is for him to decide Let him decide, ನಾನು ಈ ಸದನದ ಸದಸ್ಯ .

ಅಧ್ಯಕ್ಷರು: ಮೊದಲು ನಾನು ಹೇಳುತ್ತೇನೆ, ನಂತರ ಮುಂದುವರೆಸಿ,

ಶ್ರೀ ಬಸವರಾಜ ರಾಯರೆಡ್ಡಿ: I am on a point of order ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ

ಅಧ್ಯಕ್ಷರು: ನನ್ನನ್ನು ನೀವು ಪ್ರಶ್ನೆ ಮಾಡುವುದಾದರೆ

ಶ್ರೀ ಬಸವರಾಜ ರಾಯರೆಡ್ಡಿ: ನನಗೆ ಅನುಮತಿ ಕೊಡಿ ಅವರ ಮಾತು ಮುಗಿದ ನಂತರ ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಅವರು ಕ್ರಿಯಾಲೋಪ ಎತ್ತಿರುವುದರಿಂದ ಅವರಿಗೆ ಅವಕಾಶ ಕೊಟ್ಟಿದ್ದೇನೆ. ನೀವು ಕ್ರಿಯಾಲೋಪ ಎಂದು ಹೇಳಿಲ್ಲ ನಾನು ಒಂದೇ ಮಾತು ಹೇಳುತ್ತೇನೆ, ನೀವು ಅನುಭವಸ್ಥರು, ಅವರು ಆಡಿದ ಮಾತಿನ ಪ್ರಶ್ನೆಯ ಕ್ರಿಯಾಲೋಪವೇನೆಂದರೆ ಅದು ಬೇಕೇ ಅಥವಾ ಬೇಡವೆ, ತೆಗೆಯಬೇಕೇ ಅಥವಾ ಇರಬೇಕೇ? ಇಷ್ಟೇ ಕ್ರಿಯಾಲೋಪ. ಏಕೆಂದರೆ unparliamentary ಆಗುತ್ತದೆಯೋ ಏನೋ ಎಂದು ಹೇಳಿ. ನೀವು ನಿಮ್ಮ ಅಭಿಪ್ರಾಯವನ್ನು ಮಾತನಾಡುವಾಗ ಅವಕಾಶ ಕೊಡುತ್ತೇನೆ. ಆಗ ಇದನ್ನೆಲ್ಲಾ ಹೇಳಿ.

ಶ್ರೀ. ಕೆ.ಆರ್. ರಮೇಶ್ ಕುಮಾರ್: ಸಭಾಧ್ಯಕ್ಷರ ಆದೇಶವನ್ನು ನಾನು ಉಲ್ಲಂಘನೆ ಮಾಡುವ ಸಂಸ್ಕಾರವನ್ನು ನಾನು ಹೊಂದಿಲ್ಲ. ಏಕೆಂದರೆ ನಾನು ಆ ಸ್ಥಾನದಲ್ಲಿದ್ದು ಕೆಲಸ ಮಾಡಿದವನು, ಹಾಗೆ ಮಾಡುವುದಕ್ಕಾಗುವುದಿಲ್ಲ Strictly I am here ಆದರೆ ಒಂದು ವಿನಂತಿಯನ್ನು ತಮ್ಮಲ್ಲಿ ಮಾಡಿಕೊಳ್ಳುವುದೇನೆಂದರೆ, ಅವರು ಹೇಳಿರುವ ಮಾತುಗಳು ಈ ಸದನದ ವಸ್ತು ಆಗಿದೆ. ಅದು ಚರ್ಚೆಗೆ ಅನುಮಾನಗಳಿಗೆ ಆಸ್ಪದ ಕೊಡುತ್ತದೆ. ಆದ್ದರಿಂದ point of order ಅನ್ನು ನಾನು ಅಲ್ಲಿಗೆ ನಿಲ್ಲಿಸುತ್ತೇನೆ. ಅವರು ಮುಂದುವರಿಸಬಹುದಾ? ಮುಂದುವರಿಸಬಾರದಾ? ಅದನ್ನು ತಾವು ನಿರ್ಣಯ ಮಾಡಿ ತಾವೇನೇ ನಿರ್ಣಯ ಕೊಟ್ಟರೂ ಅದಕ್ಕೆ ನಾನು ತಲೆಬಾಗುತ್ತೇನೆ. ಆದರೆ ಮುಂದುವರೆದು ಮತ್ತೆ ಸದನದಲ್ಲಿ ನನ್ನ ಅಭಿಪ್ರಾಯವನ್ನು

ಹೇಳಲು ನನಗೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ತಾವು ಕೆಲವು ವಿಚಾರಗಳಲ್ಲಿ ಪ್ರಶ್ನೆ ಮಾಡಿದ್ದೀರಲ್ಲಾ, ನಾನು ಹೇಳುವವರೆಗೆ ದಯಮಾಡಿ ಕೇಳಿ.

(ಗೊಂದಲ)

ಶ್ರೀ. ಬಿ.ಎಸ್ ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ. ನಾನು ಯಾವುದೇ ದಾಖಲೆ ಸೃಷ್ಟಿ ಮಾ ಮಾತನಾಡುತ್ತಿಲ್ಲ. ಮಾನ್ಯ ರಮೇಶ್‌ಕುಮಾರ್ ರವರು ಹಿರಿಯರಿದ್ದಾರೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಆ ಮೃತ ವ್ಯಕ್ತಿ ಈ ಸರ್ಕಾರದ ಮೇಲೆ, ಮಾನ್ಯ ಮುಖ್ಯಮಂತ್ರಿ ಮೇಲೆ ನಮಗೆ ವಿಶ್ವಾಸವಿಲ್ಲವೆಂದು ಹೇಳಿ ಸಭೆಯಲ್ಲಿ ಬಹಿರಂಗವಾಗಿ ಮಾತನಾಡಿ ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಬಹಳ ಮುಂದೆ ಮಾತನಾಡಲು ಹೋದಾಗ ಅಲ್ಲಿದ್ದವರೆಲ್ಲಾ ಅವನನ್ನು ತಡೆದು ಅವನ ಭಾಷಣವನ್ನು ಅಲ್ಲಿಗೇ ನಿಲ್ಲಿಸಿದ್ದಾರೆ. ಅದು ಆದಮೇಲೆ ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. . .

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ತಾವು ಏನು ಓದುವುದಕ್ಕೆ ಹೋಗಿದ್ದೀರಿ, ಅದನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗಬೇಡಿ. ಏಕೆಂದರೆ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೇನೆ.

ಶ್ರೀ ಬಿ ಎಸ್ ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ. ಅಲ್ಲಿ ನಡೆದಿರುವುದು record ಆಗಿದೆ. ಮಾನ್ಯ ರಮೇಶ್ ಕುಮಾರ್‌ರವರು ಏನು ಊಹೆ ಮಾಡಿಕೊಂಡು ಮಾತನಾಡಿದ್ದಾರೆ, ಅವರು ಹಿರಿಯರಿದ್ದಾರೆ ಅವರಿಗೆ ಬಿಟ್ಟಿದ್ದು. ನಾನು ಏನು ಮಾತನಾಡಲು ಹೊರಟಿದ್ದೇನೆಂದರೆ, ನಿನ್ನೆ ನಡೆದಂತಹ ಆತ್ಮಹತ್ಯೆಯ ಸಂಪೂರ್ಣ ಜವಾಬ್ದಾರಿಯ ಹೊಣೆ ಈ ರಾಜ್ಯ ಸರ್ಕಾರದ್ದು, ಹಾಗೂ ಮಾನ್ಯ ಮುಖ್ಯಮಂತ್ರಿಯವರದಾಗಿದೆ. ಅವರೇ ನೂರಕ್ಕೆ ನೂರು

ಜವಾಬ್ದಾರಿಯಾಗಿರುತ್ತಾರೆ. ಅವರು ಒಂದು ಕ್ಷಣ ಅಧಿಕಾರದಲ್ಲಿ ಉಳಿಯಲು ಅಧಿಕಾರವಿಲ್ಲ. ರಾಜೀನಾಮೆ ಕೊಡಬೇಕು ಅದಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೇನೆ ಮಾನ್ಯ ಮುಖ್ಯಮಂತ್ರಿಗಳೇ ಇದಕ್ಕೆ ಸಂಪೂರ್ಣ ಜವಾಬ್ದಾರಿಯಾಗಿರುತ್ತಾರೆ ಎನ್ನುವ ಮಾತನ್ನು ಹೇಳುತ್ತಾ ಅವರು ಈ ಜವಾಬ್ದಾರಿಯನ್ನು ಹೊರಬೇಕೆಂದು ನಾನು ಹೇಳುತ್ತೇನೆ. ಇವತ್ತು ಕಬ್ಬಿನ ಬೆಲೆಯನ್ನು ₹ 2,650/- ಗಳೆಂದು ಘೋಷಣೆ ಮಾಡಿದ್ದಾರೆ, ಆ ಹಣ ಸಂಪೂರ್ಣವಾಗಿ ದೊರಕುವಂತೆ ವ್ಯವಸ್ಥೆ ಮಾಡಬೇಕು. ಹಳೆ ಸಕ್ಕರೆ ಕಾರ್ಖಾನೆ ಕಂಪನಿಯವರು ಬಹುತೇಕ ಆಡಳಿತ ಪಕ್ಷಕ್ಕೆ ಸೇರಿದಂಥವರು ಒಂದು ನೂರು ಕೋಟಿ ರೂಪಾಯಿಗಳ ಮೊತ್ತವನ್ನು ಬಾಕಿ ಇಟ್ಟುಕೊಂಡಿದ್ದಾರೆ. ರೈತರಿಗೆ Payment ಆಗಿಲ್ಲ ಈ ರೀತಿಯ ಅನಾಹುತವಾಗಬಾರದು ಸರ್ಕಾರ ಒಂದು ನೂರು ಕೋಟಿ ರೂಪಾಯಿಗಳ ಬಾಕಿಯನ್ನು ತಕ್ಷಣ ಬಿಡುಗಡೆ ಮಾಡಬೇಕು. ಕಬ್ಬಿಗೆ ಪ್ರತಿ ಟನ್‌ಗೆ ಈ ಸರ್ಕಾರ ₹ 2,650/- ಕೊಡಿಸಬೇಕು. ಇದರಲ್ಲಿ ಏನಾದರೂ ವ್ಯತ್ಯಾಸವಾದರೆ ನಾವು ಸರ್ಕಾರದ ಮೇಲೆ ಹೊಣೆಯನ್ನು ಹೊರಿಸುತ್ತೇವೆ ಬಾಕಿ ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡುತ್ತೇವೆಂದು ಈ ಸದನದಲ್ಲಿ ಅವರು ಭರವಸೆಯನ್ನು ಕೊಡಬೇಕು. ಇಲ್ಲವಾದರೆ ನಾವು ನಿಶ್ಚಿತವಾಗಿ ಸ್ಪಷ್ಟ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡದೇ ಇದ್ದರೆ, ಆ ಜವಾಬ್ದಾರಿಯನ್ನು ಹೊರದಿದ್ದರೆ ನಾವು ಯಾವುದೇ ಕಾರಣಕ್ಕೂ ಇದಕ್ಕೆ ಒಪ್ಪಿಗೆ ಕೊಡಲು ಸಾಧ್ಯವಿಲ್ಲ. ನಾವು ರೈತರ ಪರವಾಗಿ ಹೋರಾಟವನ್ನು ಮಾಡಬೇಕಾಗುತ್ತದೆ. ಆ ಸಂಪೂರ್ಣ ಜವಾಬ್ದಾರಿಯನ್ನು ಮಾನ್ಯ ಮುಖ್ಯಮಂತ್ರಿಗಳು ವಹಿಸಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಒಂದು ಸಣ್ಣ ವಿನಂತಿ ಇದೆ

ಅಧ್ಯಕ್ಷರು: ಅತಿ ಜರೂರಾದ ವಿಷಯವೆಂದು ಕಾಣಿಸುತ್ತದೆ

ಶ್ರೀ. ಗೋವಿಂದ ಎಂ. ಕಾಜೋಳ: ಅಧ್ಯಕ್ಷರೆ, ಒಂದು ಸಣ್ಣ ವಿನಂತಿಯಿದೆ, ಒಂದೇ ಒಂದು ನಿಮಿಷದಲ್ಲಿ ಮುಗಿಸುತ್ತೇನೆ ನಮ್ಮ ರೈತರು

2010–11, 2011–12ರಲ್ಲಿ ವೈಜ್ಞಾನಿಕ ಬೆಲೆಯಾಗಬೇಕು. ಕಾರ್ಖಾನೆಯವರು ವಿಳಂಬವಾಗಿ ಅವರು ಕಬ್ಬಿನ bill ಅನ್ನು ಪಾವತಿ ಮಾಡುತ್ತಾರೆಂದು ಹೋರಾಟ ಮಾಡಿದರು ಆ ಸಂದರ್ಭದಲ್ಲಿ ನಮ್ಮದೇ ಸರ್ಕಾರ ಇತ್ತು 252 ಜನ ರೈತರ ಮೇಲೆ ಕೇಸನ್ನು ಹಾಕಿದ್ದಾರೆ. ಆ ಕೇಸನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕ್ಯಾಬಿನೆಟ್‌ನಲ್ಲಿ ತಂದು ನಿರ್ಣಯ ಮಾಡಿದ್ದೇವು. ಆದರೆ ಯಾರೋ ಕೋರ್ಟಿಗೆ ಹೋಗಿದ್ದಾರೆಂದು ಅದನ್ನು ತಡೆ ಹಿಡಿದಿದ್ದಾರೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಆದೇಶ ಮಾಡಬೇಕೆಂದು ವಿನಂತಿ ಮಾಡುತ್ತೇನೆ

ಅಧ್ಯಕ್ಷರು: ಮಾನ್ಯ ಪುಟ್ಟಣ್ಣಯ್ಯ, ತಾವು ಮಾತನಾಡಿ,

ಶ್ರೀ ಎಸ್ ವೈ ವಿ. ದತ್ತ: ಅಧ್ಯಕ್ಷರೇ, ಈ ಭಾಗದಲ್ಲಿ ಕಬ್ಬು ಬೆಳೆಗಾರರು ಇನ್ನೊಂದು ಆತಂಕದಲ್ಲಿದ್ದಾರೆ

ಅಧ್ಯಕ್ಷರು: ಮಾನ್ಯ ದತ್ತರವರೆ, ತಾವು ಈಗಾಗಲೇ ಮಾತನಾಡಿದ್ದೀರಿ, ಇದು ಚರ್ಚೆಯಲ್ಲ

ಶ್ರೀ ಎಸ್ ವೈ ವಿ ದತ್ತ: ಅಧ್ಯಕ್ಷರೆ, ನಾನು ಮಾತನಾಡಿದ್ದೇನೆ. ಆದರೆ ನಮ್ಮ ನಾಯಕರು ಮಾತನಾಡಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕೆಂಬುದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕೆಂದು ವಿನಂತಿ. ನಿಮ್ಮ ಸಚಿವ ಸಂಪುಟದಲ್ಲಿ ಸಹೋದ್ಯೋಗಿಗಳಾದ ಮಾನ್ಯ ಸತೀಶ್ ಜಾರಕಿಹೊಳಿಯವರು 2011 ರಲ್ಲಿ ಒಂದು ಕರಪತ್ರವನ್ನು ಹೊರಡಿಸಿ, ಈ ಭಾಗದಲ್ಲಿ ಕಬ್ಬು ಬೆಳೆಯುವ ರೈತರಿಗೆ ತೂಕದಲ್ಲಿ ಕಾರ್ಖಾನೆಗಳವರು ಮೋಸ ಮಾಡುತ್ತಿದ್ದಾರೆ ಹಾಗಾಗಿ ಸರ್ಕಾರ ಕಾನೂನಿನ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ, ಆ ಕಾರ್ಖಾನೆಗಳ ಮೇಲೆ ಹಿಡಿತವನ್ನು ಸಾಧಿಸ ಬೇಕಾದರೆ, ರೈತರಿಗೆ ತೂಕದಲ್ಲಿ ಆಗುತ್ತಿರುವ ಮೋಸದ ಬಗ್ಗೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾದರೆ ಗಮನದಲ್ಲಿಟ್ಟುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ದತ್ತರವರೆ, ತಾವು ದೀರ್ಘವಾಗಿ ಮಾತನಾಡ ಬೇಡಿ. ಇದು ಚರ್ಚೆಯಲ್ಲ. ಸಕ್ಕರೆ ಮಂತ್ರಿಗಳು ಇಲ್ಲಿದ್ದಾರಲ್ಲ? ಇದೇ ಜಿಲ್ಲೆಯವರು, ಅವರ ಗಮನಕ್ಕೆ ಈ ವಿಷಯ ಬಂದಿಲ್ಲವೇ?

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಅಧ್ಯಕ್ಷರೆ, ಗಮನಕ್ಕೆ ಬಂದಿದ್ದರೆ ಹೇಳುತ್ತಿದ್ದರು ಮಂತ್ರಿಗಳ ಗಮನಕ್ಕೆ ಬಂದಿಲ್ಲವೆಂದು ಕಾಣಿಸುತ್ತದೆ ನನಗೆ ಏನು ಗೊತ್ತು?

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು: ಈಗ ಮಾನ್ಯ ಪುಟ್ಟಣ್ಣಯ್ಯನವರೆ, ಇದು ಚರ್ಚೆಯಲ್ಲ. ದಯವಿಟ್ಟು ಸೂಕ್ಷ್ಮವಾಗಿ ಎರಡು ಮಾತಿನಲ್ಲಿ ಹೇಳಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ರೈತನ ಆತ್ಮಹತ್ಯೆಗೆ ಯಾರು ಕಾರಣ, ಯಾರು ಕಾರಣರಲ್ಲವೆಂದು ಚರ್ಚೆ ಮಾಡಲಿಕ್ಕೆ, ಸಮಗ್ರ ಕರ್ನಾಟಕದಲ್ಲಿ ನಡೆದಿರತಕ್ಕ ಆತ್ಮಹತ್ಯೆ ಬಗ್ಗೆ ಚರ್ಚೆ ಮಾಡಲು ಒಂದು ದಿನ ನಿಗದಿ ಮಾಡಿ, ಚರ್ಚೆ ಮಾಡೋಣ.

ಅಧ್ಯಕ್ಷರು: ಆಯಿತು. ಈ ಬಗ್ಗೆ ಚರ್ಚೆ ಮಾಡಲು ಒಂದು ದಿನವನ್ನು ನಿಗದಿ ಮಾಡೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇದು ಒಂದೇ ವಿಷಯವಲ್ಲ. 56,000 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂರು ಜನ ಮಾಜಿ ಮುಖ್ಯಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಮಾತನಾಡಿದ್ದಾರೆ.

ಶ್ರೀ ವಿಶ್ವನಾಥ್ ಸಿ. ಮಾಮನಿ: ಪುಟ್ಟಣ್ಣಯ್ಯನವರೆ, ಚರ್ಚೆ ಮಾಡಲು ಶನಿವಾರ ದಿನ ಫಿಕ್ಸ್ ಮಾಡಿ ಬಿಡೋಣ ಬಿಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ. ಮಾನ್ಯ ಅಧ್ಯಕ್ಷರೆ, ಆತ್ಮಹತ್ಯೆ ಎನ್ನುವುದು ಲಘು ವಿಷಯವಲ್ಲ. ಗಂಭೀರವಾದ ವಿಷಯ.

ಅಧ್ಯಕ್ಷರು: ಹೌದು. ಆತ್ಮಹತ್ಯೆ ಎಂದರೆ ಸ್ವರ್ಗಕ್ಕೆ ಹೋಗುವುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅಧ್ಯಕ್ಷರೆ, ಆತ್ಮಹತ್ಯೆಗೆ ಯಾರೂ ಕಾರಣರಲ್ಲ. ಇಡೀ ವ್ಯವಸ್ಥೆ ಸರಿಯಾಗಿ ಇಲ್ಲದೆ ಇರುವುದೇ ಕಾರಣ. ಇದು ತಲೆತಗ್ಗಿಸುವಂಥದ್ದು, ಇಡೀ ವ್ಯವಸ್ಥೆ ಮೂಲಕ ರೈತರ ರಕ್ಷಣೆ ಮಾಡುವುದಕ್ಕೆ ನಾವೆಲ್ಲಾ ಆಲೋಚನೆ ಮಾಡೋಣ, ಯಾವ ಕೃಷಿ ನೀತಿ ಇದೆ ಎಂದು ಹೇಳಿ? .

ಅಧ್ಯಕ್ಷರು: ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಒಂದು ದಿನವನ್ನು ನಿಗದಿ ಮಾಡೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅಧ್ಯಕ್ಷರೆ, ಈಗ ಕೊಟ್ಟಿರತಕ್ಕಂಥ ಸಕ್ಕರೆ, ಕಬ್ಬಿನ ಬೆಲೆ ಬಹಳ ಗುಣಾತ್ಮಕ ಬೆಲೆ ಎಂದು ನಾನೇನು ಹೇಳುತ್ತಿಲ್ಲ. ಆದರೆ, ಇವತ್ತಿನ ಸಂಕಷ್ಟದ ಸ್ಥಿತಿಯಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡಿ ಕನಿಷ್ಠ ಸುಧಾರಣೆ ಮಾಡತಕ್ಕ ಕೆಲಸವನ್ನು ಮಾಡಿದೆ. ಆದರೆ, ಸರ್ಕಾರಕ್ಕೆ ನಾನು ಹೇಳುವುದೇನೆಂದರೆ, ಈ ರೈತರಿಗೆ ಸಮಸ್ಯೆ ಬಂದಾಗ 150 ಕೋಟಿ ರೂ.ಗಳು. ಆ ರೈತರಿಗೆ ಸಮಸ್ಯೆ ಬಂದಾಗ 250 ಕೋಟಿ ರೂ.ಗಳನ್ನು ಕೊಟ್ಟು ರೈತರನ್ನು ಸಮಾಧಾನ ಮಾಡುವಂಥ ಕೆಲಸವನ್ನು ಕೈಬಿಟ್ಟಿದ್ದೇವೆ. ಸಂಪೂರ್ಣ ಕರ್ನಾಟಕದ ರೈತರನ್ನು ರಕ್ಷಣೆ ಮಾಡತಕ್ಕಂಥ ಯಾವುದಾದರೂ ಒಂದು ಆರ್ಥಿಕ ನೀತಿಯನ್ನು ಘೋಷಣೆ ಮಾಡುವುದಕ್ಕೆ ಪ್ರಯತ್ನ ಪಡಬೇಕಾಗುತ್ತದೆ ಯಾರೋ ಒಬ್ಬ ಕಬ್ಬು ಬೆಳೆಗಾರ ಬಂದಾಗ 200 ಕೋಟಿ ನೀಡುವುದು. ಆಮೇಲೆ ನಾವು ಎಲ್ಲಾ ಕಾರ್ಖಾನೆಯನ್ನು take over ಮಾಡುತ್ತೇವೆ, ಎಲ್ಲಾ ಕಾರ್ಖಾನೆಗಳನ್ನು ಬಂದ್ ಮಾಡುತ್ತೇವೆ ಎನ್ನುವ ಕೆಲಸವೂ ಸಾಧ್ಯವಿಲ್ಲ. ಅದಕ್ಕೆ ಕೈ ಹಾಕಬೇಡಿ. 400 ರೂಪಾಯಿಗಳನ್ನು ಕೊಡುವ ವಿಷಯದಲ್ಲಿ ನಮಗೂ, ಅವರಿಗೂ ಸಮಸ್ಯೆಯಾಗಿದೆ ಸಕ್ಕರೆ ವ್ಯವಸ್ಥೆಯ ಮಿತಿ

ಬದಲಾವಣೆ ಆಗಬಹುದು ಕಾರ್ಖಾನೆ ಮಾಲೀಕರು ಒಂದಲ್ಲ ಒಂದು ರೀತಿ ತಾವು ಬರೀ ಮಾಲೀಕರಲ್ಲ. ಕಬ್ಬು ಬೆಳೆಗಾರರನ್ನು ರಕ್ಷಣೆ ಮಾಡುವುದಕ್ಕೆ ತಾವು ಆಲೋಚನೆ ಮಾಡಬೇಕು. ಕಾನೂನು ಪ್ರಕಾರ ಎಲ್ಲಾ ಕಾರ್ಖಾನೆಗಳು ತೆಗೆದುಕೊಳ್ಳುತ್ತೇವೆ ಎನ್ನುವುದಲ್ಲ. ನಮ್ಮ ಸಕ್ಕರೆ ನೀತಿ ಏನಿದೆ, ಅದರಡಿಯಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಎಲ್ಲ ಅಧಿಕಾರ ತಮಗೆ ಇರಬಹುದು ಆದರೆ ನಮ್ಮ ಸದನದ ಮುಂದೆ ಇರತಕ್ಕಂಥ ಪ್ರಶ್ನೆ ಭೂಮಿಯಲ್ಲಿರುವ ಕಬ್ಬನ್ನು ಸಾಗಿಸಲಿಕ್ಕೆ ಮೊದಲ ಆದ್ಯತೆ ಕೊಡತಕ್ಕಂಥ ಕೆಲಸ ಆಗಬೇಕು ರೈತರು ತಕ್ಷಣವೇ ಕಬ್ಬು ಕಾರ್ಖಾನೆಗೆ ಹೋಗಬೇಕು ಈಗಾಗಲೇ 21 ದಿವಸಗಳ ಕಾಲ delay ಆಗಿದೆ. ನಾವು ಉತ್ತರ ಕರ್ನಾಟಕಕ್ಕೆ ಬಂದಿದ್ದೇವೆ ದಯವಿಟ್ಟು ನಾವೆಲ್ಲಾ ಕರ್ನಾಟಕದ ಸಮಗ್ರವಾದ ಬೇರೆ ಬೆಳೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ 3 ಮತ್ತು 4ನೇ ತಾರೀಖಿನಂದು ಅವಕಾಶ ಮಾಡಿಕೊಡಬೇಕು. ಇವತ್ತು ಸರ್ಕಾರ ಮಾತನಾಡಿದಂತೆ ನಡೆದುಕೊಳ್ಳಬೇಕು ಮತ್ತು ₹ 2650/- ಗಳು ರೈತನಿಗೆ ತಲುಪಬೇಕು. ಅದಕ್ಕೆ ಕಾರ್ಖಾನೆಯವರು ಸಹಕಾರ ನೀಡಬೇಕು ದಯವಿಟ್ಟು ಆತ್ಮಹತ್ಯೆಯನ್ನು ಲಘುವಾಗಿ ತೆಗೆದುಕೊಳ್ಳಬಾರದು ಕರ್ನಾಟಕದ ಒಟ್ಟು ಆತ್ಮಹತ್ಯೆಯ ಬಗ್ಗೆ ಚರ್ಚೆ ಮಾಡಿ ಈ ಸದನದಿಂದ ಒಂದು ನಿರ್ಣಯವನ್ನು ಹೊರಗಡೆ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ಶ್ರೀಮಾನ್ ವಿಠ್ಠಲ ಅರಬಾವಿಯವರು ಭಾಷಣ ಮಾಡಿದ ಸ್ವಲ್ಪ ಹೊತ್ತಿಗೆ ವಿಷ ಸೇವನೆ ಮಾಡಿದ್ದಾರೆಂದು ನಮಗೆ ಮಾಧ್ಯಮಗಳ ಮುಖಾಂತರ ಸಿಕ್ಕಿರುವ ವರ್ತಮಾನ. ಸಾಮಾನ್ಯವಾಗಿ ಒಬ್ಬ normal ಮನುಷ್ಯನ behaviour ಹೇಗಿರುತ್ತದೆ. ಒಂದು ಹೋರಾಟ, ಒಂದು agitation, ಭಾಷಣ. .

ಅಧ್ಯಕ್ಷರು: ರಮೇಶ್‌ಕುಮಾರ್‌ರವರೆ ತಾವು ಹಿರಿಯ ಸದಸ್ಯರಿದ್ದೀರಿ, ಈಗ ನಮ್ಮ ಮುಂದೆ ಇರುವ ವಿಚಾರ ಮುಖ್ಯಮಂತ್ರಿಗಳು ಘೋಷಣೆ ಮಾಡಿರುವ ಕಾರ್ಯಕ್ರಮಗಳ ವಿಚಾರವಿದೆ, ನೀವು ಈ ವಿಚಾರದ ಬಗ್ಗೆ

ಮಾತನಾಡುವುದಿದ್ದರೆ ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ತೆಗೆದುಕೊಂಡರೆ ಆಗ ಸುಧೀರ್ಘವಾಗಿ ಹೇಳಬಹುದು.

ಶ್ರೀ. ಕೆ ಆರ್ ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಪ್ರತ್ಯೇಕ ಚರ್ಚೆ ಅಲ್ಲ, ಈ ವಿಚಾರವನ್ನೇ ಈಗಾಗಲೇ ಸದನ ನಮ್ಮ ಮುಂದೆ ಇಟ್ಟುಕೊಂಡಿದೆ, ಅದಕ್ಕಾಗಿಯೇ ನಾನು ಹೇಳಿದ್ದು, The House is already seized this matter and you are the custodian and I am raising it in pertinence ಸದನದಲ್ಲಿ ಈ ವಿಚಾರ ಪೂರ್ಣ ಚರ್ಚೆಯಾಗಿ ಮುಖ್ಯಮಂತ್ರಿಗಳು ತಮ್ಮ ಉತ್ತರವನ್ನು ಕೊಟ್ಟಿದ್ದು, ಆ ಉತ್ತರ ಒಬ್ಬ ರೈತನಿಗೆ disappointing ಆಗಿದ್ದರೆ, ಇಂಥ ರಾಜ್ಯದಲ್ಲಿ ಇಂಥ ಭೂಮಿಯಲ್ಲಿ ಬದುಕುವುದು ಪ್ರಯೋಜನ ಇಲ್ಲ ಎಂದು ತಿಳಿದು ಆತ ಆತ್ಮಹತ್ಯೆ ಮಾಡಿಕೊಂಡಿದ್ದರೆ directly or indirectly ಸರ್ಕಾರವನ್ನು ಅಥವಾ ಮುಖ್ಯಮಂತ್ರಿಗಳನ್ನು ಹೊಣೆ ಮಾಡಬಹುದಾಗಿತ್ತು. ಕೆಲವರಿಗೆ ಕೆಲವು ಸಲ ಈ ರೀತಿ ಬಹಳ unpredictable ಆಗಿ behave ಮಾಡುವ character ಇರುತ್ತದೆ. ಕೆಲವು ಸಲ ಅದನ್ನು eccentric ಎಂದು ಕರೆಯುತ್ತಾರೆ ಕೆಲವು ಸಲ ವೈದ್ಯಕೀಯವಾಗಿ ಇದಕ್ಕೆ Schizophrenic Character ಎಂದೂ ಸಹ ಹೇಳುತ್ತಾರೆ ಸ್ಕೈಜೋನೋ ಅಥವಾ ಸ್ಕಿಜೋನೋ I don't know The doctors should tell

ಅಧ್ಯಕ್ಷರು: ವೈದ್ಯರು ಇಲ್ಲೇ ಇದ್ದಾರೆ.

ಶ್ರೀ ಕೆ ಆರ್ ರಮೇಶ್‌ಕುಮಾರ್: ಆದರೆ ಒಂದು, ಅವರ ಸಾವಿಗೆ warrant ಮಾಡುವಂಥ situation ಅವರು ವಿಷ ತೆಗೆದುಕೊಂಡಾಗ ಇರಲಿಲ್ಲ. There was no situation warranting his death or warranting him to commit suicide that instantaneously. Now observations are made, ನೀವೇ ಹೊಣೆ, ಸರ್ಕಾರವೇ ಹೊಣೆ ಇನ್ನೊಂದು ಮತ್ತೊಂದು ಎಂದು ಕೇವಲ Council of Ministers ಹೊಣೆಯಾಗುವುಲ್ಲ. ಈ ಸದನದ ಎಲ್ಲರೂ ಹೊಣೆಯಾಗುತ್ತೇವೆ. ಏಕೆಂದರೆ, ಆ ವಿಚಾರ ಇಲ್ಲಿ ಚರ್ಚೆಯಾಗುತ್ತಿತ್ತು. ಇನ್ನೂ conclude ಆಗಿಲ್ಲ Debate ಮಧ್ಯದಲ್ಲಿ ಇತ್ತು. ಆತ ಆವೇಶಕ್ಕೆ

ಒಳಗಾಗಿದ್ದಾನೆ. ಒಂದು ವಿಚಾರಣೆ ವಿವರವಾಗಿ ಮಾಡದೇ, ಅವರ ಕುಟುಂಬದ ಸದಸ್ಯರ ಕಡೆಯಿಂದ, ಅವರಿಗೆ ನಿಕಟವರ್ತಿಗಳು ಯಾರು ಇದ್ದರೋ ಅವರ ಕಡೆಯಿಂದ, ಇದಕ್ಕೆ ಮೊದಲೂ ಸಹ ಅವರು ಈ ರೀತಿ ಏನಾದರೂ ವರ್ತಿಸುತ್ತಿದ್ದರೇ? ಆ ರೀತಿ ದುಡುಕುವ ಸ್ವಭಾವವೇ? ಅಥವಾ ಅವರ ವೈಯಕ್ತಿಕ ಅಭ್ಯಾಸಗಳು ಇನ್ನೊಂದು, ಮತ್ತೊಂದು ಏನಿತ್ತು? ಅವರು ವಿಷ ತೆಗೆದುಕೊಂಡಾಗ ವಿಷದ ಬಾಟಲಿ ಎಲ್ಲಿಂದ ಬಂತು? ಅಥವಾ ಜೇಬಿನಲ್ಲಿ ಇಟ್ಟುಕೊಂಡು ಮೊದಲೇ ತಯಾರಿ ಮಾಡಿಕೊಂಡು ಬಂದಿದ್ದರೇ? ಅಥವಾ sudden ಆಗಿ ಅಲ್ಲಿ ಸಿಕ್ಕಿತೇ? ಅಥವಾ ಯಾರಾದರೂ ಕೊಟ್ಟರೇ? ಅಥವಾ ಈ ರೀತಿ ಹೋರಾಟ ಮಾಡುವ ಕಡೆ ಯಾರಾದರೂ ಮಾರಾಟಕ್ಕೆ ಇಟ್ಟಿರುತ್ತಾರೆಯೇ? ಹೇಗೆ ತೆಗೆದುಕೊಂಡರು? ಏಕೆ ತೆಗೆದುಕೊಂಡರು? Everything will have to be explained to people in detail It is no longer the death of an individual which get confined to that family I demand that, there should be an enquiry, judicial enquiry ಅದು, ಇದು ಎಂದು ಕಾರಣ ಹೇಳಿಕೊಂಡು ವರ್ಷಗಟ್ಟಲೇ ಕಳೆಯಬೇಡಿ A Magisterial enquiry is enough.

ಒಬ್ಬ ಮಾನ್ಯ ಸದಸ್ಯರು: C B I enquiry.

ಶ್ರೀ. ಕೆ.ಆರ್. ರಮೇಶ್‌ಕುಮಾರ್: ನಾನು ಅಂಥ ಹುಚ್ಚ ಅಲ್ಲಪ್ಪ. ದಯಮಾಡಿ ಸ್ವಲ್ಪ ಕೇಳಿ. ಒಂದು Magisterial enquiry ಮಾಡಿ, ಸತ್ಯ ಏನು ಎಂದು ಸಾಬೀತು ಮಾಡಿ. I am not going in to further details. ಅವರ ಸಾವು, it is an unnatural death It is an UD When an UD takes place, police will have to register the case Postmortem shall have to take place, there must be a report Body ಯಿಂದ Vircera ವನ್ನು ತೆಗೆದು ಇಟ್ಟಿರುತ್ತಾರೆ. ಅವರ close contacts, relatives, blood relatives ಎಲ್ಲರನ್ನೂ enquiry. ಮಾಡಿ, ಸತ್ಯಾಂಶ ಎಂದು ಸಂಶಯ ಇರುವುದರಿಂದ, warranting situation ಇಲ್ಲದೇನೇ ಒಬ್ಬ ಮನುಷ್ಯ ಅತ್ಯಂತ ಪ್ರಶಸ್ತವಾಗಿರುವಂಥ ತನ್ನ

ಬದುಕನ್ನೆ ನಾಶ ಮಾಡಿಕೊಂಡು ಅಂತ್ಯ ಮಾಡಿಕೊಳ್ಳುತ್ತಾನೆಂದರೆ it leads to many speculations. ಯಾರ ಯಾರ ಕಡೆಗೆ ಏನು ಅನುಮಾನದ ಬಗ್ಗೆಯಾದರೂ ಬೆಟ್ಟು ತೋರಿಸಬಹುದು, ಕಥೆಗಳನ್ನು ಕಟ್ಟಬಹುದು. ದಯಮಾಡಿ ಈ ಸಂಶಯವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಸರ್ಕಾರದ ಮೇಲೆ ತಮ್ಮ ಮುಖಾಂತರ ನಾನು ಒತ್ತಡ ಹೇರುತ್ತೇನೆ An enquiry is a must to reveal the truth ದಯಮಾಡಿ ತಾವು ಸಹಕರಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಹಾಗೂ ಇತರೆ ರೈತರು ಬೆಳೆಯುವ ಪದಾರ್ಥಗಳ ಬಗ್ಗೆ ಬಹಳ ಧೀರ್ಘವಾಗಿ ಎರಡು ದಿನಗಳ ಕಾಲ ಚರ್ಚೆಯಾಗಿದೆ ಮಾನ್ಯ ಸದಸ್ಯರುಗಳು ರೈತರ ಬಗ್ಗೆ ಈ ಸರ್ಕಾರ ನಿರ್ಲಕ್ಷ್ಯ ಧೋರಣೆ ತೋರಿದೆ, ಕಾಳಜಿ ವಹಿಸಿಲ್ಲ ಎಂಬ ಮಾತುಗಳನ್ನು ಹೇಳಿದ್ದಾರೆ, ಯಡಿಯೂರಪ್ಪನವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಿನ್ನೆ ವಿಠ್ಠಲ ಭೀಮಪ್ಪ ಅರಬಾವಿ ಯವರು ಏನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅದಕ್ಕೆ ಸರ್ಕಾರವೇ ಹೊಣೆ, ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು, ಸರ್ಕಾರ ಜವಾಬ್ದಾರಿ ಹೊರಬೇಕು ಎಂಬ ಮಾತುಗಳನ್ನು ಹೇಳಿದ್ದಾರೆ. ನಾನು ಆ ವಿಚಾರಕ್ಕೆ ನಂತರ ಬರುತ್ತೇನೆ. ಆತ್ಮಹತ್ಯೆಗಳು ಬಹಳ ವರ್ಷಗಳಿಂದ ಕರ್ನಾಟಕದಲ್ಲಿ ನಡೆಯುತ್ತಿದೆ. ಆತ್ಮಹತ್ಯೆಗಳು ಏಕೆ ಆಗುತ್ತಿದೆ ಎಂಬ ಬಗ್ಗೆ ಕೂಡ ಡಾ· ವೀರೇಶ್ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕದಲ್ಲಿ ಒಂದು ಸಮಿತಿಯೂ ಆಗಿತ್ತು ಆಗ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳು. ಡಾ: ವೀರೇಶ್ ಅವರ ಸಮಿತಿ ಆಗಿತ್ತು. ಆತ್ಮಹತ್ಯೆ ಇಂದು, ನಿನ್ನೆ ನಡೆದಿರುವುದು, ಹಿಂದೆ ಯಾವತ್ತೂ ನಡೆದಿಲ್ಲ ಎಂಬ ವಿಚಾರವಿಲ್ಲ. ರೈತರು ಅನೇಕ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಮಾಡಿಕೊಳ್ಳಬಾರದು, ನಾನು ಈಗಲೂ ರೈತರಲ್ಲಿ ಮನವಿ ಮಾಡುತ್ತೇನೆ. ರೈತರು ಆವೇಶಕ್ಕೆ ಉದ್ವೇಗಕ್ಕೆ ಒಳಗಾಗಿ ಅವರಿಗೆ ಏನೇ ಕಷ್ಟವಿದ್ದರೂ ಕೂಡ ಆತ್ಮಹತ್ಯೆಯಂತಹ ಆ ಕೆಲಸಕ್ಕೆ

ಕೈ ಹಾಕಬಾರದು. ಆತ್ಮಹತ್ಯೆಗೆ ಒಳಗಾಗಬಾರದು ಕಷ್ಟಗಳನ್ನು ಎದುರಿಸುವಂತಹುದು ಒಂದು. ಮತ್ತೆ ಸರ್ಕಾರ ಏನೇನು ರೈತರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಆ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಬಗೆಹರಿಸುವಂತಹ ಪ್ರಯತ್ನ ಮಾಡಬೇಕಾಗುತ್ತದೆ ಇಂತಹ ಪ್ರಕರಣಗಳು ಮತ್ತೆ ಮತ್ತೆ ಮರುಕಳಿಸಬಾರದು. ಯಾವ ರೈತರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳಬಾರದೆಂದು ಹೇಳಿ ನಾನು ಎಲ್ಲಾ ರೈತ ಬಾಂಧವರಲ್ಲಿ ಸರ್ಕಾರದ ಪರವಾಗಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದರು. ಇವರ ಕಾಲದಲ್ಲಿ ಹಾವೇರಿಯಲ್ಲಿ ಗೊಬ್ಬರ ಕೊಡಲಿಲ್ಲ, ಬೀಜ ಕೊಡಲಿಲ್ಲ ಎಂದು ಗೋಲಿಬಾರ್ ಆಯಿತು. ಸಿದ್ದಲಿಂಗಪ್ಪ ಚೂರಿ ಮತ್ತು ಪುಟ್ಟಪ್ಪ ಎಂಬ ಇಬ್ಬರು ರೈತರು ಸತ್ತರು. ಆಗ ನೀವೇ ಮುಖ್ಯಮಂತ್ರಿಗಳು. ನೀವು ಕಾರಣರೇ ಅದಕ್ಕೆ? ಯಾರು ಕಾರಣ? ಗೋಲಿಬಾರ್ ಮಾಡಿಸಿದವರು ಯಾರು? ಏನು ಪೋಲೀಸರು ಅವರೇ ಗೋಲಿಬಾರ್ ಮಾಡಿದರೇನು? ಯಾವ ಕಾರಣಕ್ಕೆ ಗೋಲಿಬಾರ್ ಆದದ್ದು? ನಿಮಗೆ ರೈತರಿಗೆ ಬೀಜ, ಗೊಬ್ಬರ ಕೊಡಲು ಆಗಲಿಲ್ಲ ಬೀಜ, ಗೊಬ್ಬರ ಕೊಡಿ ಎಂದು ಕೇಳಿದ್ದಕ್ಕೆ, ಅದು ಏನು ದೊಡ್ಡ Law & Order problem ಕೂಡ create ಆಗಿರಲಿಲ್ಲ. ಇವರು ರೈತರ ಮೇಲೆ ಪ್ರಮಾಣ ಮಾಡಿ ಪ್ರಮಾಣ ವಚನ ತೆಗೆದುಕೊಂಡರು, ರೈತರ ಮೇಲೆ ಯಾವುದೇ ಕಾರಣಕ್ಕೂ ಗೋಲಿಬಾರ್ ಅಲ್ಲ, ಲಾಠಿಚಾರ್ಜನ್ನು ಕೂಡ ಮಾಡುವುದಿಲ್ಲವೆಂದು ಹೇಳಿ, ಸರ್ಕಾರ ಬಂದು 10 ದಿನದಲ್ಲಿ ಗೋಲಿಬಾರ್ ಮಾಡಿಸಿದಿರಿ ನೀವು ರಾಜೀನಾಮೆ ಕೊಟ್ಟಿರೇನು? ಆಗ ನೀವು ರಾಜೀನಾಮೆ ಕೊಟ್ಟಿದ್ದರೆ ನಿಮಗೆ ಇಂದು ಕೇಳಲು ನೈತಿಕ ಹಕ್ಕು ಇರುತ್ತಿತ್ತು. ಇಲ್ಲಿ ನಾವೇನು ಗೋಲಿಬಾರ್ ಮಾಡಿದ್ದೇವೇನು? ಮಾಡಿಸಿದ್ದೇವೇನು? ಇದೇ ಮಾನ್ಯ ಯಡಿಯೂರಪ್ಪನವರು ಅವರ ಮನೆಗಳಿಗೆ ಹೋದರು. ಕ್ರಮ ತೆಗೆದುಕೊಳ್ಳುತ್ತೇವೆಂದು ಒಂದು ಆಯೋಗವಾಯಿತು. ಅದರಲ್ಲಿ ಅವರು ರೈತರೇ ಅಲ್ಲ ಗೂಂಡಾಗಳು ಎಂದು ವರದಿ ಕೊಟ್ಟರು. ಏನು ಮಾಡಿದಿರಿ? ಇಂದು ನಿಮಗೆ ರೈತರ ಬಗ್ಗೆ ಇರುವ ಕಳಕಳಿ ಆಗ ನಿಮಗೆ ಇರಲಿಲ್ಲವೇನು? ಸಿದ್ಧಲಿಂಗಪ್ಪ ಚೂರಿ ಮತ್ತು ಪುಟ್ಟಪ್ಪ

ಅವರು ರೈತರಲ್ಲವೇನು ಪಾಪ?. Are they are not farmers? ಅದಾಯಿತು. ಇವರು ಮುಖ್ಯಮಂತ್ರಿಗಳಾಗಿದ್ದಾಗ 2006-07 ರಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದರು. 2007-08ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು 2008-09 ರಲ್ಲಿ ಮುಖ್ಯಮಂತ್ರಿಗಳಾದರು. ಆಗ 2007-08ರಲ್ಲಿ 182 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವರದಿ ಆಗಿರುವುದು 142, ಪುರಸ್ಕೃತ ಪ್ರಕರಣಗಳು 160, ಆತ್ಮಹತ್ಯೆ ಪ್ರಕರಣಗಳು 182 ನಿಮ್ಮ ಕೈಯಲ್ಲಿ ಏಕೆ ತಪ್ಪಿಸಲು ಆಗಲಿಲ್ಲ? ರೈತರ ಪರ ಸರ್ಕಾರ, ರೈತರ ಮೇಲೆ ಪ್ರಮಾಣ ವಚನ ಮಾಡಿದ್ದೀರಿ ಮೂರು ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿದ್ದೀರಿ. ನನ್ನ ಕಾಲದಲ್ಲಿ ರೈತರು ಆತ್ಮಹತ್ಯೆ ಮಾಡಿ ಕೊಂಡು ಬಿಟ್ಟರು, ನಾನು ಮುಖ್ಯಮಂತ್ರಿಯಾಗಿ ಮುಂದುವರೆಯುವುದಿಲ್ಲ ಎಂದು ಹೇಳಿ ರಾಜೀನಾಮೆ ಕೊಡಬಹುದಾಗಿತ್ತಲ್ಲವೇ, ಕೊಟ್ಟರೇನು? ಅದೇ ಇನ್ನು ಒಂದು ವರ್ಷ 2009-10ರಲ್ಲಿ 145 ಜನ ಆತ್ಮಹತ್ಯೆ ಮಾಡಿಕೊಂಡರು. ಮತ್ತೆ 2010-11ರಲ್ಲಿ 117 ಜನ ಆತ್ಮಹತ್ಯೆ ಮಾಡಿಕೊಂಡರು. 2011-12ರಲ್ಲಿ 117 ಜನ ಆತ್ಮಹತ್ಯೆ ಮಾಡಿಕೊಂಡರು ನೀವೇ ಅಧಿಕಾರದಲ್ಲಿದ್ದಿರಿ. ನಿನ್ನೆ ಅತ್ಮಹತ್ಯೆ ಮಾಡಿಕೊಂಡಿದ್ದವರು ಬಹಳ ದೊಡ್ಡದಾಗಿ ಭಾಷಣ ಮಾಡಿರುವುದನ್ನು ಉಲ್ಲೇಖ ಮಾಡುತ್ತೀರಿ, ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತೀರಿ. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ರೈತರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿದ್ದರೆ ಇವರೆಲ್ಲಾ ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು? ನೀವು ರೈತರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಬಿಟ್ಟಿದ್ದೀರೇನು? ಹಾಗಿದ್ದರೆ ಒಬ್ಬರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲವಲ್ಲ ಹಾಗಿದ್ದ ಮೇಲೆ ನೀವು ನೇರವಾಗಿ ಜವಾಬ್ದಾರರಲ್ಲವೇನು? ಅದನ್ನು ಇಂದು ಜನರು ಚರ್ಚೆ ಮಾಡುತ್ತಾರೆ. ಈಗಾಗಲೇ ಮಾನ್ಯ ಕುಮಾರಸ್ವಾಮಿಯವರು ಹೇಳಿದರು. 2-3 ದಿನಗಳ ಕಾಲ ನೀವು ಧರಣಿ ಮಾಡಿದ್ದೀರಿ. ನಾವು ಈಗಾಗಲೇ ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಘೋಷಣೆ ಮಾಡಿರುವ ಬಿದಾಯಿ ಕಾರ್ಯಕ್ರಮದಿಂದ ಜಾತಿ ಮತ್ತು ಸಮಾಜ ವಿಭಾಗವಾಗುತ್ತದೆ ಅಲ್ಪಸಂಖ್ಯಾತರಿಗೆ ಶಾದಿ ಮಹಲ್ ಕೊಟ್ಟರೆ ಸಮಾಜ ಒಡೆದು ಹೋಗುತ್ತದೇನು? ಎಸ್.ಸಿ/ಎಸ್.ಟಿ ಜನಾಂಗದವರಿಗೆ, ಹಿಂದುಳಿದ

ವರ್ಗದವರಿಗೆ scholarship ಕೊಡುತ್ತೇವೆ, ಜಾತಿ ಒಡೆದು ಹೋಗುತ್ತದೆ ಏನು? Article 15 & 16 ಇರುವುದಾದರೂ ಏಕೆ? ಯಾರು disadvantaged classes ಇದ್ದಾರೆ, ಯಾರು ಸಮಾಜದಲ್ಲಿ ಅವಕಾಶದಿಂದ ವಂಚಿತರಾಗಿದ್ದಾರೆ, ಯಾರು ಶತ ಶತಮಾನದಿಂದ ಶೋಷಣೆಗೆ, ಅನ್ಯಾಯಕ್ಕೆ ದೌರ್ಜನ್ಯಕ್ಕೆ, ದಬ್ಬಾಳಿಕೆಗೆ ಒಳಗಾಗಿದ್ದಾರೆ, ಅವರಿಗೆ ವಿಶೇಷ ಸವಲತ್ತು ಕೊಟ್ಟು ಅವರನ್ನು ಮುಖ್ಯ ವಾಹಿನಿಗೆ ತರಬೇಕೆಂಬುದು ಸಂವಿಧಾನದ ಉದ್ದೇಶ ಹಾಗೂ ಧ್ಯೇಯ ನಾನು 25 ದಿನ ಹೋರಾಟ ಮಾಡಿದೆ, ಇಲ್ಲಿಯೂ ಕೂಡ ಹೋರಾಟ ಮಾಡಿದೆ ಎಂದು ಹೇಳಿದ್ದೀರಿ. 25ನೇ ತಾರೀಖಿಗೆ ರೈತರು ಇಲ್ಲಿ ಬಂದು ಹೋರಾಟ ಪ್ರಾರಂಭ ಮಾಡಿದರು. ನೀವು ಏಕೆ ಅಂದು ಮಾತನಾಡಲಿಲ್ಲ? ಇಲ್ಲಿ ಚರ್ಚೆಯಲ್ಲಿ ಭಾಗವಹಿಸಲಿಲ್ಲ, ನಿನ್ನೆ ವಿಠಲ್ ಅರಭಾವಿಯವರು ಸತ್ತ ತಕ್ಷಣ ಧರಣಿಯನ್ನೂ ಬಿಟ್ಟಿರಿ, ಶಾದಿ ಭಾಗ್ಯವನ್ನೂ ಬಿಟ್ಟಿರಿ, ಬಿದಾಯಿಯನ್ನೂ ಬಿಟ್ಟಿರಿ, ಓಡಿ ಹೋಗಿ ಅದರಲ್ಲಿ ರಾಜಕಾರಣ ಮಾಡುವ ಪ್ರಯತ್ನ ಮಾಡಿದಿರಿ ನಾವು ಯಾವಾಗಲೂ ಕೂಡ ರಾಜಕಾರಣ ಮಾಡುವುದನ್ನು ಮಾಡಬೇಕು, ಮಾಡಬಾರದೆಂದು ನಾನು ಹೇಳುವುದಿಲ್ಲ. ಆದರ ಸತ್ಯಾಂಶವನ್ನು, ವಾಸ್ತವಾಂಶವನ್ನು ಮುಚ್ಚಿಟ್ಟು ಕೇವಲ ರಾಜಕಾರಣಕ್ಕೋಸ್ಕರ ಮಾತನಾಡುವುದು ಇದೆಯಲ್ಲ, ಅದು ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಸಂಸದೀಯ ವ್ಯವಸ್ಥೆಯಲ್ಲಿ ಯಾರಿಗೂ ಕೂಡ ಗೌರವ, ಶೋಭೆ, ತರುವ ಕೆಲಸ ಅಲ್ಲ ಎಂಬುದನ್ನು ಬಹಳ ಸ್ಪಷ್ಟವಾಗಿ ತಿಳಿಸುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು 6 ತಿಂಗಳಾಯಿತು. ಮಂಡ್ಯದ ರೈತರು ಬಂದು ಹೇಳಿದರು, ಮಂಡ್ಯ ಸರ್ಕಾರಿ ಸಕ್ಕರೆ ಕಾರ್ಖಾನೆಗೆ ದುಡ್ಡು ಕೊಡದಿದ್ದರ ಕಾರ್ಖಾನೆಯನ್ನು ನಡೆಸಲಾಗುವುದಿಲ್ಲವೆಂದು. ಕೂಡಲೇ 14 ಕೋಟಿ ರೂ, ಹಣವನ್ನು ಬಿಡುಗಡೆ ಮಾಡಿದೆ. ಪಾಂಡವಪುರ ಸಕ್ಕರೆ ಕಾರ್ಖಾನೆಗೆ ದುಡ್ಡು ಕೊಡಬೇಕೆಂದು ಪುಟ್ಟಣ್ಣಯ್ಯನವರು ಕೇಳಿದರು. ಕೂಡಲೇ 10 ಕೋಟಿ ರೂ ಬಿಡುಗಡೆ ಮಾಡಿದೆ ಇನ್ನೊಂದು ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿ ಬಿಟ್ಟಿದೆ ರೈತರ ಬಾಕಿ ಕೊಡಬೇಕಿತ್ತು ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿಯೇ ರೈತರಿಗೆ ಕೊಡಬೇಕಿದ್ದ ಬಾಕಿ

ಉಳಿದಿತ್ತು. ಅದನ್ನು ಇವರ ಕೈಯಲ್ಲಿ ಕೊಡಲಾಗಿರಲಿಲ್ಲ. ಅದಕ್ಕೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 12 ಕೋಟಿ ರೂ ಬಿಡುಗಡೆ ಮಾಡಿದೆವು. 2 ಕೋಟಿ ರೂ ರೈತರಿಗೆ ಅಂದಿನಿಂದ ಕೊಟ್ಟಿರಲಿಲ್ಲ. ಆ ಬಾಕಿಯನ್ನು ನಾವು ಚುಕ್ತಾ ಮಾಡಿದೆವು. ಕೊಬ್ಬರಿ ಬೆಲೆ, ತೆಂಗಿನ ಕಾಯಿ ಬೆಲೆ ಬಿದ್ದು ಹೋಯಿತು ಎಂದರು. ಕೇಂದ್ರ ಸರ್ಕಾರದವರು 5,550/- ರೂ. ಎಂ ಎಸ್.ಪಿ.ಮಾಡಿದರು. ನಾವು ಒಂದು ಸಾವಿರ ರೂ ಬೆಂಬಲ ಬೆಲೆ ನೀಡಿ, ಒಂದು ಕ್ವಿಂಟಾಲ್‌ಗೆ 6,500/- ರೂ ಕೊಟ್ಟು 145 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರದಿಂದ ನಾವು ಬೆಂಬಲ ಬೆಲೆಗೆ ಕೊಟ್ಟಿದ್ದೇವೆ. ಇತ್ತೀಚೆಗೆ ಭತ್ತಕ್ಕೆ ಕೇಂದ್ರ ಸರ್ಕಾರದಿಂದ ಎಂ.ಎಸ್.ಪಿ. ಯಿಂದ 1310/- ರೂ. ಬೆಂಬಲ ಬೆಲೆ ನಿಗದಿ ಮಾಡಿದ್ದು, ಅದಕ್ಕೆ 290/- ರೂ. ಕೊಟ್ಟು 1600/- ರೂ.ಗಳಿಗೆ ಇಂದು ಎಲ್ಲಾ ಕಡೆ ಭತ್ತ ಖರೀದಿ ಕೇಂದ್ರಗಳನ್ನು ಮಾಡಿ ಭತ್ತ ಕೊಂಡುಕೊಳ್ಳುವ ಕೆಲಸ ಮಾಡಿದ್ದೇವೆ. ಹಾಗೆಯೇ ಜೋಳ 280-300/- ರೂ. ಕೊಟ್ಟು, 1,800/- ರೂ.ಗಳಿಗೆ ಜೋಳವನ್ನು ಕೊಂಡುಕೊಳ್ಳುತ್ತಿದ್ದು, ರಾಗಿಗೆ 300/- ರೂ. ಹೆಚ್ಚು ಕೊಟ್ಟು ಕೊಂಡುಕೊಳ್ಳುತ್ತಿದ್ದೇವೆ. ಗೋವಿನ ಜೋಳಕ್ಕೆ 1,310ರೂ ಕೊಟ್ಟು ಖರೀದಿ ಮಾಡುತ್ತಿದ್ದೇವೆ ಅಡಿಕೆಗೆ 72 ಕೋಟಿ ರೂ.ಗಳನ್ನು ಇವತ್ತು ಪ್ರಥಮ ಬಾರಿಗೆ NDRF ವತಿಯಿಂದ ಪ್ರತಿಯೊಂದು ಹೆಕ್ಟೇರ್‌ಗೆ ಕೊಡುತ್ತಿದ್ದೇವೆ. ಇನ್ನು ಕೇಂದ್ರ ಸರ್ಕಾರಕ್ಕೆ ನಾವು 500 ಕೋಟಿ ರೂ.ಗಳ ಆರ್ಥಿಕ ಸಹಾಯವನ್ನು ಕೊಡಬೇಕೆಂದು ಪತ್ರ ಬರೆದಿದ್ದೇವೆ ಕೇಂದ್ರದ Agriculture Minister ರವರು 175 ಕೋಟಿ ರೂ.ಗಳನ್ನು ಕೊಡುತ್ತೇನೆಂದು ಹೇಳಿದ್ದಾರೆ. ಅದು ಬಂದ ಮೇಲೆ ಅದನ್ನೂ ಕೂಡ ಕೊಡುತ್ತೇವೆ. ಎಲ್ಲಾ ಅಡಿಕೆ ಬೆಳೆಗಾರರು ಇವತ್ತು ಕೊಳೆ ರೋಗದಿಂದ ನಷ್ಟಕ್ಕೆ ಒಳಗಾಗಿದ್ದಾರೆ. ಅದನ್ನೂ ಕೂಡ ಕೊಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗಾಗಲೇ ಕೊಬ್ಬರಿಯನ್ನು ಕೊಂಡುಕೊಳ್ಳಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ತೆಂಗಿಗೂ ಕೂಡ 110 ಕೋಟಿ ರೂ.ಗಳನ್ನು ಕೊಡಲಿಕ್ಕೆ ಈಗಾಗಲೇ ತೀರ್ಮಾನ ಮಾಡಿದ್ದೇವೆ. ಅದನ್ನು ಈಗಲೇ ಬಿಡುಗಡೆ ಮಾಡತಕ್ಕದ್ದನ್ನೂ ಕೂಡ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ 585 ಕೋಟಿ ರೂ.ಗಳನ್ನು ಕೇರಳ ಮಾದರಿಯಲ್ಲಿ ಕೊಡಬೇಕೆಂಬ ಬಗ್ಗೆ ನಾನು

ಎರಡು ಬಾರಿ ಕೃಷಿ ಸಚಿವರನ್ನು ಭೇಟಿ ಮಾಡಿದ್ದೇನೆ, ಹಣಕಾಸು ಸಚಿವರನ್ನು ಭೇಟಿ ಮಾಡಿದ್ದೇನೆ, Prime Minister ರವರನ್ನು ಭೇಟಿ ಮಾಡಿದ್ದೇನೆ 2–3 ಸಾರಿ ಹೋಗಿ ಅವರನ್ನೆಲ್ಲಾ ಭೇಟಿ ಮಾಡಿ ಒತ್ತಾಯ ಮಾಡತಕ್ಕಂಥ ಕೆಲಸವನ್ನು ಮಾಡಿದ್ದೇನೆ. ಎಲ್ಲಿ ರಾಜ್ಯ ಸರ್ಕಾರ ಹಿಂದೆ ಬಿದ್ದಿದೆ? ಹಿಂದೆ ಬೀಳತಕ್ಕಂಥ ಪ್ರಯತ್ನವನ್ನು ಎಲ್ಲೂ ಕೂಡ ನಾವು ಮಾಡಲಿಲ್ಲ. ದ್ರಾಕ್ಷಿ ಬೆಳೆಗೆ, ದಾಳಿಂಬೆ ಬೆಳೆ ಇವುಗಳಿಗೆ ಸಂಬಂಧಿಸಿದಂತೆ ಕೂಡ 2–3 ಸಾರಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದೇವೆ. ಇವತ್ತು ದ್ರಾಕ್ಷಿ ಬೆಳೆಯದ್ದು ಸಾಲ 511 ಕೋಟಿ ರೂ.ಗಳು ಇದೆ. ಅದರಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಕೊಟ್ಟಿರತಕ್ಕ ಸಾಲ ಸೇರಿದೆ. ದಾಳಿಂಬೆ ಬೆಳೆಗೆ ಕೇಂದ್ರ ಸರ್ಕಾರದ ಸಾಲ ಇದೆ. ನಾವು ಆಗಲೇ ಮಾನ್ಯ ಕೃಷಿ ಸಚಿವರನ್ನು ಮತ್ತು ಹಣಕಾಸು ಸಚಿವರನ್ನು ಭೇಟಿ ಮಾಡಿ, ಇದನ್ನೆಲ್ಲಾ ಮನ್ನಾ ಮಾಡಿ ಎಂದು ಒತ್ತಾಯ ಮಾಡಿದ್ದೇವೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಇವರು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗಿತ್ತು ಎಂದು ಹೇಳಿದರು ನಾವು ಈಗಾಗಲೇ ಎರಡು ಸಾರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ರಾಜ್ಯದಲ್ಲಿ ಈಗಾಗಲೇ Sugar ದಾಸ್ತಾನು ಜಾಸ್ತಿಯಾಗಿ ಬಿಟ್ಟಿದೆ, ಸುಮಾರು 85 ಮೆಟ್ರಿಕ್ ಟನ್ ಶುಗರ್ ದಾಸ್ತಾನು ಇದೆ, ಶುಗರ್ ಆಮದಾಗುತ್ತಿದೆ, ಆಮದು ಶುಲ್ಕವನ್ನು ಹೆಚ್ಚು ಮಾಡಬೇಕು, export incentives ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ 2 ಪತ್ರಗಳನ್ನು ಬರೆದಿದ್ದೇನೆ. ನವೆಂಬರ್ ತಿಂಗಳಿನಿಂದ ಕಬ್ಬು ಅರೆಯತಕ್ಕದ್ದನ್ನು ಪ್ರಾರಂಭ ಮಾಡಿದ್ದಾರೆ. ಈ ಕಾನೂನು ರಚನೆಯಾದ ಮೇಲೆ Sugarcane Control Board ಅನ್ನು ರಚನೆ ಮಾಡಿದ್ದೇವೆ. ಅದರಲ್ಲಿ ರೈತರ ಪ್ರತಿನಿಧಿಗಳು ಇರುತ್ತಾರೆ, ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳೂ ಕೂಡ ಇರುತ್ತಾರೆ. ಇವರ ಪ್ರತಿನಿಧಿಗಳ ಜೊತೆಗೆ ಮೂರು ಸಾರಿ ಚರ್ಚೆ ಮಾಡಿದ್ದೇನೆ. ರೈತರ ಜೊತೆ ಚರ್ಚೆಯೇ ಮಾಡಿಲ್ಲ ಎನ್ನುತ್ತೀರಿ. ಮಾನ್ಯ ಯಡಿಯೂರಪ್ಪನವರು ರೈತರನ್ನು ನೋಡಲಿಕ್ಕೆ ಹೋಗಿಲ್ಲ ಎಂದು ಹೇಳುತ್ತಾರೆ. ಮಾನ್ಯ ಕೃಷಿ ಸಚಿವರು, ಮಾನ್ಯ ಸಕ್ಕರೆ ಸಚಿವರು, ಮಾನ್ಯ ಸಹಕಾರ ಸಚಿವರು, ಮಾನ್ಯ ನೀರಾವರಿ ಸಚಿವರಾದ ಎಂ.ಬಿ.ಪಾಟೀಲ್‌ರವರು, ಹೀಗೆ ಒಟ್ಟು ನಮ್ಮ ನಾಲ್ಕು ಜನ ಮಂತ್ರಿಗಳು

ರೈತರನ್ನು ನೋಡಲಿಕ್ಕೆ ಹೋಗಿದ್ದಾರೆ. ಮಾನ್ಯ ಪುಟ್ಟಣ್ಣಯ್ಯನವರು ಅವರ delegation ಜೊತೆಗೆ ಬಂದಿದ್ದರು. ಅವರನ್ನೂ ಕೂಡ ಹೋಗಿ ಭೇಟಿ ಮಾಡಿದ್ದೇನೆ ಕೋಡಿಹಳ್ಳಿ ಚಂದ್ರಶೇಖರ್‌ರವರನ್ನೂ ಕೂಡ ಭೇಟಿ ಮಾಡಿದ್ದೇವೆ. ಅದಾದ ಮೇಲೆ ರೈತರು ಸುಮಾರು 20 ಜನರ ಜೊತೆಗೆ ನಾನು ಚರ್ಚೆ ಮಾಡಿದ್ದೇನೆ. ಅವರೆಲ್ಲ delegates ಜೊತೆಗೆ ನಾನು ಚರ್ಚೆ ಮಾಡಿದ್ದೇನೆ. ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡಿದ್ದೇನೆ ಅಸೆಂಬ್ಲಿಯಲ್ಲಿ ಚರ್ಚೆ ನಡೆಯುತ್ತಿದೆ, ಈಗಾಗಲೇ ನಾವು 2500 ರೂ.ಗಳನ್ನು ಬೋರ್ಡ್‌ನಿಂದ ನಿಗದಿ ಮಾಡಿದ್ದೇವೆ, 300 ಕೋಟಿ ರೂ.ಗಳ ಟ್ಯಾಕ್ಸ್‌ನ್ನು ರದ್ದು ಮಾಡಿದ್ದೇವೆ, ನೀವು ಸಹಕರಿಸಬೇಕು, ನಾನು ಉತ್ತರ ನಾಳೆ ಕೊಡುತ್ತೇನೆ ಎಂದು ಹೇಳಿದ್ದೆ. ಆದರೆ ಅವತ್ತು ಉತ್ತರ ಕೊಡಲಿಕ್ಕೆ ಆಗಲಿಲ್ಲ ನಾನು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿಯೇ ಈ ದುರ್ಘಟನೆ ನಡೆದು ಹೋಯಿತು ಈ ದುರ್ಘಟನೆ ಆಗಬಾರದಾಗಿತ್ತು ನಾವೆಲ್ಲಾ cabinet colleagues ಹೋಗಿ ಮಾನ್ಯ ಪ್ರಭಾಕರ ಕೋರೆಯವರ KLE hospital ಗೆ ಹೋಗಿ ಮೃತ ರೈತರಾದ ವಿಠಲ ಭ ಮಪ್ಪ ಅರಭಾವಿ ಅವರಿಗೆ ಗೌರವ ಸಲ್ಲಿಸಿ ಬಂದಿದ್ದೇವೆ ನಮ್ಮ ಬೆಳಗಾಂ ಜಿಲ್ಲಾ ಮಂತ್ರಿಗಳಾದ ಮಾನ್ಯ ಸತೀಶ್ ಜಾರಕಿಹೊಳಿಯವರು ನಿನ್ನೆ ರಾತ್ರಿಯಿಂದ ಅಲ್ಲೇ ಕುಳಿತು ಅಲ್ಲಿ ನಡೆದ cremationನಲ್ಲಿ participate ಮಾಡಿದ್ದಾರೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು, ಯಾರು ಕೂಡ ಮಾಡಿಕೊಳ್ಳಬಾರದು. ಅದಕ್ಕೆ ಯಾರು ಕೂಡ encourage ಮಾಡತಕ್ಕದ್ದನ್ನೂ ಕೂಡ ಮಾಡಬಾರದು. ಅದನ್ನು ರಾಜಕೀಯವಾಗಿ ಬಳಸಿಕೊಳ್ಳತಕ್ಕದ್ದನ್ನೂ ಕೂಡ ಮಾಡಬಾರದು. ಅವರಲ್ಲಿ ವಿಶ್ವಾಸ ತುಂಬಬೇಕು. ಇಂತಹದ್ದು ಮಾಡಿಕೊಳ್ಳಬಾರದು ಕಳೆದ ಆರು ತಿಂಗಳಿನಲ್ಲಿ ರೈತರ ಪರವಾಗಿ ಏನೆಲ್ಲಾ ಮಾಡಲಿಕ್ಕೆ ಸಾಧ್ಯವಾಗುತ್ತದೆಯೋ, ಅದೆಲ್ಲವನ್ನೂ ಕೂಡ ನಮ್ಮ ಸರ್ಕಾರದವರು ಮಾಡಿದ್ದೇವೆ ಕಳೆದ ಎರಡು ಮೂರು ತಿಂಗಳಿನಿಂದ ರೈತರ ಚಳವಳಿಗಳು ಮತ್ತು ಪ್ರತಿಭಟನೆಗಳು ನಡೆಯುತ್ತಿವೆ. ಎಲ್ಲಾದರೂ ಒಂದು ಕಡೆ ರೈತರ ಮೇಲೆ ಕೇಸ್ ಹಾಕುವುದಾಗಲಿ, ಲಾಠಿಚಾರ್ಜ್ ಮಾಡುವುದಾಗಲಿ, ಇವತ್ತಿಗೂ ಮಾಡಲಿಕ್ಕೆ ನಾವು ಹೋಗಿಲ್ಲ, ಮುಂದೆಯೂ ಕೂಡ

ಮಾಡುವುದಿಲ್ಲ. ಒಬ್ಬರ ಮೇಲೆ ಕೇಸ್ ಹಾಕುವುದಾಗಲಿ, ಲಾಠಿ ಚಾರ್ಜ್ ಮಾಡುವುದಾಗಲಿ ಮಾಡದೆ, ಅತ್ಯಂತ ಸಂಯಮದಿಂದ ನೀವು ನಡೆದುಕೊಳ್ಳಿ ಎನ್ನತಕ್ಕಂಥ instructions ಅನ್ನು ಪೊಲೀಸ್ ಡಿಪಾರ್ಟ್‌ಮೆಂಟ್‌ನವರಿಗೆ ನಾವು ಕೊಟ್ಟಿದ್ದೇವೆ. ಇವರು ಇರುವಾಗ ದಾವಣಗೆರೆಯಲ್ಲಿ, ರೈತರು ನಮ್ಮ ಜಮೀನುಗಳಿಗೆ acquisition matters ನಲ್ಲಿ ಕಡಿಮೆ ದುಡ್ಡು ಕೊಟ್ಟಿದ್ದೀರಿ ಎಂದು ಚಳವಳಿ ಮಾಡಿದರೆ, ಅವರ ಕೈಗೆ ಕೋಳ ಹಾಕಿ ಜೈಲಿಗೆ ಹಾಕಿದಿರಿ. ಬಳ್ಳಾರಿಯಲ್ಲಿ ರೈತರು ನಮ್ಮ ಜಮೀನನ್ನು acquire ಮಾಡಿಕೊಳ್ಳಬೇಡಿ ಎಂದರೆ, ನೂರಾರು ಜನರನ್ನು ಇವರು ಜೈಲಿಗೆ ಕಳುಹಿಸಿದರು. ಚಾಮರಾಜನಗರದಲ್ಲಿ ಕರೆಂಟ್ ಇಲ್ಲ ಎಂದು ಕೇಳಿದರೆ, ಅವರನ್ನು ಜೈಲಿಗೆ ಕಳುಹಿಸತಕ್ಕ ಕೆಲಸವನ್ನು ಮಾಡಿದರು. ಇವರು ರೈತರ ವಿಷಯದಲ್ಲಿ ನಮಗೆ ಪಾಠ ಹೇಳಲಿಕ್ಕೆ ಪ್ರಾರಂಭ ಮಾಡಿದ್ದಾರೆ ಇವರ ಕಾಲದಲ್ಲಿ ರೈತರ ಪರವಾಗಿ ಏನೂ ಮಾಡಲಿಕ್ಕಾಗಲಿಲ್ಲ. ಇವರ ಸರ್ಕಾರ ಉಳಿಯಲಿಲ್ಲ. ಗೋಲಿಬಾರ್ ಮಾಡಿ ಇಬ್ಬರನ್ನು ಕೊಂದು ಹಾಕಿದವರು ಇವತ್ತು ನಮಗೆ ರೈತರ ಬಗ್ಗೆ ದೊಡ್ಡ ಪಾಠ, ಪ್ರವಚನ ಹೇಳತಕ್ಕದ್ದನ್ನು ಮಾಡುತ್ತಿದ್ದಾರೆ. ಈ ಸರ್ಕಾರ ರೈತರ ಪರವಾಗಿದೆ ಎಂದು ನಾನು ಹೇಳುತ್ತಿದ್ದೇನೆ. ರೈತರ ಕಷ್ಟ ಸುಖಗಳಿಗೆ ನಾವು ಸ್ಪಂದಿಸುತ್ತೇವೆ. ಅದಕ್ಕೋಸ್ಕರವೇ ನಾವು ನಮ್ಮ ಪ್ರಣಾಳಿಕೆಯಲ್ಲಿ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡುತ್ತೇವೆಂದು ನಾವು ಹೇಳಿಕೊಂಡಿದ್ದೇವೆ ಆ ಬಗ್ಗೆ ನಮ್ಮ ಭಾಷಣದಲ್ಲಿ ಘೋಷಣೆ ಮಾಡಿದ್ದೇವೆ. ಈಗ ಅದು ಅಂತಿಮ ಹಂತಕ್ಕೆ ಬಂದಿದೆ. ಆ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ್ದೇವೆ ಈಗಾಗಲೇ ಕೃಷಿ ವಿಶ್ವವಿದ್ಯಾನಿಲಯದ ತಜ್ಞರು, ಆರ್ಥಿಕ ತಜ್ಞರು, ರೈತರ ಪ್ರತಿನಿಧಿಗಳು, central ನಲ್ಲಿ ಕೆಲಸ ಮಾಡಿದವರು ಅವರೆಲ್ಲರ ಜೊತೆಗೂ ಕೂಡ ವ್ಯಾಪಕವಾಗಿ ಚರ್ಚೆ ಮಾಡಿದ್ದೇವೆ. ಅವರೊಂದಿಗೆ ಚರ್ಚೆ ಮಾಡಿ ಅವರೆಲ್ಲರ ಅಭಿಪ್ರಾಯಗಳನ್ನು ಪಡೆದುಕೊಂಡು ಇವತ್ತು ಅದು ಕ್ಯಾಬಿನೆಟ್ ಮುಂದೆ ಬಂದಿತ್ತು. ಕ್ಯಾಬಿನೆಟ್ ಮುಂದೆ ಚರ್ಚೆಯಾಗಿ ಅದಕ್ಕೆ ಇನ್ನೂ ಕೆಲವು ಅಂತಿಮ ರೂಪ ಕೊಡುವ ಸಲುವಾಗಿ ಕ್ಯಾಬಿನೆಟ್ ಸಬ್ ಕಮಿಟಿಗೆ ಅದನ್ನು ಕಳುಹಿಸಿಕೊಟ್ಟಿದ್ದೇವೆ. ಕೇವಲ ಅದು ಪ್ರಚಾರಕ್ಕೋಸ್ಕರ ಮಾಡುತ್ತಿರುವಂಥಾದ್ದಲ್ಲ

ಅದು ನಮ್ಮ ಉದ್ದೇಶವೂ ಅಲ್ಲ. ಕೇವಲ vote ಗೋಸ್ಕರವು ನಾವು ಅದನ್ನು ಮಾಡುತ್ತಿಲ್ಲ. It is our commitment. ಇದು ನಮ್ಮ ಬದ್ಧತೆ. ರೈತರು ಬೆಳೆದಂತಹ ಬೆಳೆಗಳಿಗೆ ನ್ಯಾಯಯುತವಾದಂತಹ ಬೆಲೆ ಸಿಗುತ್ತಿಲ್ಲ. ರೈತರು ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಪ್ರತಿವರ್ಷ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಏನಾದರೂ ಮಾಡಿ ಈ ಸಮಸ್ಯೆಗೆ ಪರಿಹಾರ ಹುಡುಕಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಲಿಕ್ಕೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಕೇಂದ್ರದಲ್ಲೂ ಕೂಡ ಒಂದು ಕೃಷಿ ಬೆಲೆ ಆಯೋಗವಿದೆ ಅದಕ್ಕಿಂತ ಇದರಲ್ಲಿ ಎಷ್ಟು improvement ಮಾಡಲಿಕ್ಕೆ ಸಾಧ್ಯವಾಗುತ್ತದೆ? ಹೇಗೆಲ್ಲಾ ರೈತರಿಗೆ ಅನುಕೂಲಗಳನ್ನು ಮಾಡಿಕೊಡುವುದಕ್ಕಾಗುತ್ತದೆ? ಆದಷ್ಟು ವೈಜ್ಞಾನಿಕವಾಗಿ ಬೆಲೆಯನ್ನು ಕೊಡಲಿಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಇದನ್ನು ನಾವು ಮಾಡುತ್ತಿದ್ದೇವೆ ಈ ಸರ್ಕಾರದ ರೈತಪರ ಕಾಳಜಿ ಬಗ್ಗೆ ಯಾರೂ ಕೂಡ ಸಂಶಯ ಇಟ್ಟುಕೊಳ್ಳಬೇಕಾದಂತಹ ಅವಶ್ಯಕತೆ ಇಲ್ಲ. ನಾವು ರೈತರ ಪರವಾಗಿ ನೂರಕ್ಕೆ ನೂರರಷ್ಟು ಇದ್ದೇವೆ ಎನ್ನುವುದನ್ನು ಅತ್ಯಂತ ಘಂಟಾಘೋಷವಾಗಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಇದನ್ನು ಪ್ರಾಮಾಣಿಕವಾಗಿ ನಾನು ಹೇಳುತ್ತಿದ್ದೇನೆ. ಇದನ್ನು ಪ್ರಚಾರಕ್ಕಾಗಿಯಾಗಲಿ ಅಥವಾ ರಾಜಕೀಯವಾಗಿ ಹೇಳುವುದಕ್ಕಾಗಲಿ ಈ ಕೆಲಸವನ್ನು ನಾನು ಮಾಡುತ್ತಿಲ್ಲ ಎನ್ನುವಂತಹ ಮಾತುಗಳನ್ನೂ ಕೂಡ ಅತ್ಯಂತ ಸ್ಪಷ್ಟವಾಗಿ ತಿಳಿಸಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಕಬ್ಬಿನ ಬೆಲೆ ನಿಗದಿ ಮಾಡುವಾಗ ಎಲ್ಲಾ ಪ್ರಯತ್ನಗಳನ್ನು ಕೂಡ ಮಾಡಿದ್ದೇವೆ, ನಾವು ಯಾವುದೇ ನಿರ್ಲಕ್ಷ್ಯ ಮಾಡಿಲ್ಲ, ವಿಳಂಬ ಮಾಡಿಲ್ಲ ಅಥವಾ ಬೇಜವಾಬ್ದಾರಿಯಿಂದ ನಡೆದುಕೊಂಡಿಲ್ಲ. ಆ ಕಾರಣದಿಂದ ಇವತ್ತು ವಿಠಲ್ ಭೀಮಪ್ಪ ಅರಭಾವಿಯವರು ಈ ದುರ್ಘಟನೆಗೆ ಒಳಗಾಗಿದ್ದಾರೆ, ಅವರು ಮೃತರಾಗಿದ್ದಾರೆ. ಅವರ ಬಗ್ಗೆ ನನಗೆ ಗೌರವವಿದೆ, ಗೌರವದಿಂದ ಮಾತನಾಡುತ್ತಿದ್ದೇನೆ. ಆದರೆ ಇವರ ಸಾವಿಗೆ ಸರ್ಕಾರ ಕಾರಣವೆಂದು ಏನು ಮಾತನಾಡುತ್ತಿದ್ದಾರೆ, ಇದು ರಾಜಕೀಯ ಪ್ರೇರಿತವಾದ ಮಾತುಗಳೇ ಹೊರತು. ಇದರಲ್ಲಿ ಯಾವುದೇ ಸತ್ಯಾಂಶವಿಲ್ಲವೆಂದು ಅತ್ಯಂತ ಸ್ಪಷ್ಟವಾಗಿ

ಹೇಳಬಯಸುತ್ತೇನೆ. ಮಾನ್ಯ ಸದಸ್ಯರಾದ ರಮೇಶ್ ಕುಮಾರ್ ಅವರು ಒಂದು ಮಾತನ್ನು ಹೇಳಿದರು. ಧರಣಿ ಸಮಯದಲ್ಲಿ ಅವರು ಒಂದು ಗಂಟೆ ಮಾತನಾಡಿದರು, ಒಂದು ಗಂಟೆ ಭಾಷಣ ಮಾಡುವಾಗ ಅವರು ನನ್ನನ್ನು ಬೈದಿರುವುದು, ಟೀಕೆ ಮಾಡಿರುವುದು ನಿಜ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವರ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ಸ್ವಾತಂತ್ರ್ಯವಿದೆ, ಅವರು ಹೇಳಿದ್ದಾರೆ. ಆದರೆ ನಾವು ಒಂದು ಟನ್ ಕಬ್ಬಿಗೆ ₹ 2,500 ಬೆಲೆ ಕೊಡಬೇಕೆಂದು 10ನೇ ತಾರೀಖೇ ತೀರ್ಮಾನ ಮಾಡಿದ್ದೇವೆ. ಇದೇ ಕೋಡಿಹಳ್ಳಿ ಚಂದ್ರಶೇಖರ್ ಅವರೂ ಕೂಡ ಆ Boaid Meetıng ನಲ್ಲಿ ಭಾಗವಹಿಸಿದ್ದರು, ಅವರೂ ಕೂಡ ಒಬ್ಬ Member ಇದ್ದಾರೆ. ಪುಟ್ಟಣ್ಣಯ್ಯನವರೂ ಕೂಡ ಒಬ್ಬ Member ಆಗಿದ್ದಾರೆ. ನಾವು ಎಲ್ಲಾ ಪ್ರಯತ್ನ ಮಾಡಿದ್ದೇವೆ. In what way we arc responsible? ಇಲ್ಲೇ ಎರಡು ದಿವಸ ಚರ್ಚೆಯಾಗಿದೆ ಮತ್ತು ಆ ಚರ್ಚೆ ಅಪೂರ್ಣವಾಗಿದೆ, ನಾನು ನಿನ್ನೆ ಉತ್ತರ ಕೊಡಬೇಕಾಗಿತ್ತು. ಆ ಉತ್ತರವನ್ನು ಕೊಡುವುದರೊಳಗೆ ಇಂಥ ದುರ್ಘಟನೆ ಆಗಿ ಹೋಯಿತು. ಈಗಾಗಲೇ 58 Sugar Factoryಗಳಲ್ಲಿ 53 Sugar Factory ಗಳು ಆರಂಭವಾಗಿವೆ. ನಾವು ಬಂದಾಗ ₹ 780 ಕೋಟಿ ಬಾಕಿ ಇತ್ತು, ಅದರಲ್ಲಿ factory ಅವರನ್ನು ಕರೆದು ಸಭೆ ಮಾಡಿ ₹ 748 ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡಿಸಿದ್ದೇವೆ, ಇನ್ನೂ ₹ 31 ಕೋಟಿಯಷ್ಟು ಬಾಕಿ ಉಳಿದಿದೆ, ಅದನ್ನೂ ಕೊಡಿಸುವಂಥ ಪ್ರಯತ್ನ ಮಾಡುತ್ತೇವೆ ಎಲ್ಲಿ ರೈತರಿಗೆ ವಿರುದ್ಧವಾದ ಒಂದೇ ಒಂದು ನಡೆ ನಮ್ಮಿಂದ ಇದೆ ಹೇಳಿ? ರಾಜಕೀಯವಾಗಿ ವೀರಾವೇಶದಿಂದ ಮಾತನಾಡಬಹುದು, ದೊಡ್ಡ ಧ್ವನಿಯಲ್ಲಿ ಮಾತನಾಡಬಹುದು. ಆದರೆ ನೀವು ಅಧಿಕಾರದಲ್ಲಿದ್ದಾಗ ಯಾವ ಕಾಳಜಿಯನ್ನು ವ್ಯಕ್ತಪಡಿಸಿದ್ದಿರಿ, ಇವರ ಪ್ರಾಮಾಣಿಕತೆ ಏನಿತ್ತು ಎನ್ನುವುದು ಇಡೀ ನಾಡಿಗೆ ಗೊತ್ತಾಗಿದೆ. ಈ ಕಾಯಿದೆಯನ್ನು ಇವರು ಮಾಡಿದರು, ಅದನ್ನು ಜಾರಿ ಮಾಡುವ ಪ್ರಯತ್ನ ಮಾಡಿದ್ದೇವೆ. ಈಗ ಇವರೇನು ಸಂಶಯವನ್ನು ವ್ಯಕ್ತಪಡಿಸಿದ್ದಾರೆಂದರೆ, Sugar Factory ಅವರು ರೈತರಿಗೆ ಕೊಡದೆ ಹೋದರೆ ಏನು ಮಾಡುವುದು ಎನ್ನುವುದಾಗಿದೆ. ಅದು ಇವರೇ

ಮಾಡಿದ ಕಾಯಿದೆಯಲ್ಲವೇ? ಅವತ್ತು ಇವರು ಕಾಯಿದೆ ಮಾಡುವಾಗ ಈ ಎಲ್ಲಾ ಯೋಚನೆಗಳು ಬರಲಿಲ್ಲವೇ? ನೀವೇ ಮಾಡಿದಂಥ ಕಾನೂನು, ಅದು ಇದೇ ಸದನದಲ್ಲಿ ಆಗಿದೆ, ಎಲ್ಲರೂ ಕಾನೂನನ್ನು ಗೌರವಿಸಬೇಕು, Sugar Factory ಅವರೂ ಕೂಡ ಒಪ್ಪಿಕೊಳ್ಳಬೇಕಾಗುತ್ತದೆ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಕಾನೂನಿನಲ್ಲಿ ಏನೇನು ಅವಕಾಶಗಳಿವೆ, section 9 of the Act ಏನು ಹೇಳುತ್ತದೆ? ರೈತ ಕಬ್ಬು ಕೊಟ್ಟ 14 ದಿವಸಗಳಲ್ಲಿ ಪೇಮೆಂಟ್ ಮಾಡಬೇಕೆಂದಿದೆ ₹ 1,800, ₹ 2,000 ಕೊಡುತ್ತೇವೆಂದು ಕಾರ್ಖಾನೆಯವರು ಬರೆಸಿಕೊಂಡಿದ್ದಾರೆಂದು ಈಗ ಹೇಳುತ್ತಿದ್ದಾರೆ. Is it valid in the eye of law? It is not at all valid ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಕಾರ್ಖಾನೆಯವರು ಕೊಡದೇ ಹೋದರೆ ಆಗ ಕಾನೂನು ರೀತ್ಯಾ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶಗಳಿವೆ, ಆ ಎಲ್ಲಾ ಕ್ರಮಗಳನ್ನೂ ಕೂಡ ನಾವು ತೆಗೆದುಕೊಳ್ಳುತ್ತೇವೆ. ಇದಕ್ಕಿಂತ ಸ್ಪಷ್ಟವಾಗಿ ಇನ್ನೇನು ಹೇಳಬೇಕು? ಇದನ್ನೆಲ್ಲಾ ಹೇಳುವುದಕ್ಕಿಂತ ಮುಂಚಿತವಾಗಿ ನಮ್ಮ ವಿಠ್ಠಲ್ ಅರಭಾವಿ ಯವರು ಪ್ರಾಣ ಕಳೆದುಕೊಂಡಿದ್ದಾರೆ. ನಮ್ಮ ರಮೇಶ್ ಕುಮಾರ್ ಅವರು ಒಂದು enquiry ಆಗಬೇಕೆಂದು ಹೇಳಿದ್ದಾರೆ. Magisterial Enquiry ಯನ್ನು ಮಾಡಿಸುವುದಕ್ಕೆ ಸರ್ಕಾರ ಸಿದ್ಧವಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಸತ್ಯ ಗೊತ್ತಾಗಬೇಕು, ಇದಕ್ಕೆ ಸರ್ಕಾರವೇ ಹೊಣೆ, ಕೊಲೆಗಡುಕ ಸರ್ಕಾರ ಎಂದು ಕೂಗುತ್ತಿದ್ದಿರಲ್ಲಾ? ಸರ್ಕಾರ ಅತ್ಯಂತ ಮಾನವೀಯ ಮನಸ್ಸುಳ್ಳ ಮಾನವೀಯತೆಯುಳ್ಳ ಸರ್ಕಾರವಾಗಿದೆ ತುಳಿತಕ್ಕೊಳಗಾದವರಿಗೆ, ಅನ್ಯಾಯಕ್ಕೆ ಒಳಗಾದವರಿಗೆ, ಶೋಷಣೆಗೆ ಒಳಗಾದವರಿಗೆ ಸೇರಿದಂತೆ ಎಲ್ಲರಿಗೂ ನ್ಯಾಯ ಒದಗಿಸಿಕೊಡಬೇಕೆನ್ನುವುದು ನಮ್ಮ ಉದ್ದೇಶ ಪಾಪ, ಕಾಕತಾಳೀಯವಾಗಿ ಸತ್ತಿರುವವನು ಕುರುಬನು, ನಾನೂ ಕುರುಬನವನು. ಇವರು (ಮುಖ್ಯಮಂತ್ರಿಗಳು) ಕುರುಬರು, ಸತ್ತವನೂ ಕುರುಬನು ಎಂದು ಯಾವ ಉದ್ದೇಶವಿಟ್ಟುಕೊಂಡು ಯಡಿಯೂರಪ್ಪನವರು ಹೇಳುತ್ತಾರೋ ಗೊತ್ತಿಲ್ಲ

ಶ್ರೀ ಬಿ.ಎಸ್ ಯಡಿಯೂರಪ್ಪ: ನಾನು ನಿಮ್ಮ ಮನಸ್ಸನ್ನು ನೋಯಿಸ ಬಾರದೆಂದು ಬಹಳ ಶಾಂತಿಯಿಂದ ನೀವು ಮಾತನಾಡುವುದನ್ನು

ಕೇಳುತ್ತಿದ್ದೇನೆ. ನೀವು ಏನು ಬೇಕಾದರೂ ಮಾತನಾಡಿ. ನಿಮ್ಮ ಭಾಷಣಕ್ಕೆ ನಾನು ಉತ್ತರವನ್ನು ಕೊಡುತ್ತೇನೆ, ಈ ಸದನದಲ್ಲೇ ಇರುತ್ತೇನೆ. ಏಕೆಂದರೆ ನಮ್ಮ ಕಡೆ ಒಂದು ಹಳೆಯ ಮಾತಿದೆ, ದೆವ್ವದ ಬಾಯಲ್ಲಿ ಭಗವದ್ಗೀತೆ ಕೇಳಿದಂತೆ ಎಂದು..

(ಗೊಂದಲ)

ಅಧ್ಯಕ್ಷರು: ಯಡಿಯೂರಪ್ಪನವರೆ, ಅವರು yield ಆಗಿಲ್ಲ, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಯಡಿಯೂರಪ್ಪನವರು, ನಾವು 25 ದಿವಸ ಧರಣಿ ಮಾಡುತ್ತಿದ್ದೆವು, ಸರ್ಕಾರದಿಂದ ಯಾರೂ ಬಂದು ನಮ್ಮನ್ನು ಮಾತನಾಡಿಸಲಿಲ್ಲವೆಂದು ಹೇಳಿದರು ನಮ್ಮ ಕಾನೂನು ಮಂತ್ರಿಗಳನ್ನು ಹೋಗಿ ಅವರ ಜೊತೆ ಮಾತನಾಡಿ ಎಂಮ ಹೇಳಿದೆ. ಅದಕ್ಕೆ ಅವರು ಯಾರೂ ಬರಕೂಡದು ಎಂದು ಹೇಳಿದರಂತೆ. ನಾವು 5 ದಿವಸಗಳ ಕಾಲ ಹಗಲೂ ರಾತ್ರಿ ಅಸೆಂಬ್ಲಿಯಲ್ಲಿ ಮಲಗಿದ್ದೆವು. ಇದೇ ಮಾನ್ಯ ಯಡಿಯೂರಪ್ಪನವರು, ಬಿರಿಯಾನಿಯನ್ನೆಲ್ಲಾ ತರಿಸಿಕೊಂಡು ತಿಂದು ಅಸೆಂಬ್ಲಿಯನ್ನೆಲ್ಲಾ ಅಪವಿತ್ರ ಮಾಡಿಬಿಟ್ಟರೆಂದು ಹೇಳಿದರು. ಆಗ ಇವರೇ ಮುಖ್ಯಮಂತ್ರಿಗಳು, ಅಕ್ರಮ ಗಣಿಗಾರಿಕೆ ನಡೆಯುತ್ತಿದೆ, ಲೂಟಿ ಮಾಡುತ್ತಿದ್ದಾರೆ, ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಸಾವಿರಾರು ಕೋಟಿ ಹಣ ಲೂಟಿಯಾಗಿದೆ, CBI enquiry ಮಾಡಿರೆಂದು ಹೇಳಿದರ, ಆಗ ಇವರು ಜಪ್ಪಯ್ಯವೆಂದರೂ ಒಪ್ಪಲಿಲ್ಲ. ಇವತ್ತು, ಅಕ್ರಮ ಗಣಿಗಾರಿಕ ನಡೆದಿರುವುದು ಸತ್ಯವೆಂಬುದನ್ನು ಅವರೂ ಒಪ್ಪಿಕೊಂಡಿದ್ದಾರೆ. 3 ಕೋಟಿ ಟನ್ ಕಬ್ಬಿಣದ ಅದಿರು ಇವರ ಕಾಲದಲ್ಲಿ ಕದ್ದು ಹೋಗಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ, ಆಗ ಅವರೇ ಅಸೆಂಬ್ಲಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ

ಶ್ರೀ ಬಿ.ಎಸ್. ಯಡಿಯೂರಪ್ಪ: ಕಳೆದ 10 ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ನಡೆದಿರುವಂಥ ಎಲ್ಲಾ ಅಂಕಿ–ಅಂಶಗಳನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇವರು ಇದ್ದಾಗ 3 ಕೋಟಿ ಟನ್ ಕಬ್ಬಿಣದ ಅದಿರು ಕದ್ದು ಹೋಗಿದೆ ಎಂದು ಇವರೇ ಅಸೆಂಬ್ಲಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ...

(ಗೊಂದಲ)

ಅಧ್ಯಕ್ಷರು: ಖಾದರ್. ನೀವು ಹಾಗೆ ಕೂಗಾಡಬೇಡಿ, ಯಡಿಯೂರಪ್ಪ ನವರೆ, ಅವರು yield ಆಗಲಿಲ್ಲ ಎಂದರೆ ನಾನು ಏನು ಮಾಡಲಿ? ನೀವು request ಮಾಡಿಕೊಳ್ಳಬೇಕು ..

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಬೆಂಗಳೂರಿನಿಂದ ಬಳ್ಳಾರಿ ವರೆಗೆ ಪಾದಯಾತ್ರೆ ಮಾಡಿದರು, ಈಗ ಬಣ್ಣ ಬಯಲಾಗುತ್ತಿದೆಯಲ್ಲಾ, ಎಲ್ಲಾ ನಿರೀಕ್ಷೆಯಂತೆ ಬಂದಿದೆ, ನೀವೇ ಜವಾಬ್ದಾರರು ಎನ್ನುವ ಸತ್ಯ ಹೊರಗೆ ಬಂದಿದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಯಡಿಯೂರಪ್ಪನವರೆ, ಏತಕ್ಕೆ ಜೈಲಿಗೆ ಹೋದಿರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ನಾವು 16 ದಿವಸಗಳ ಕಾಲ ಪಾದಯಾತ್ರೆ ಮಾಡಿದೆವು. ನಮ್ಮ ಜೊತೆ ಬಂದು ಮಾತನಾಡಿದಿರಾ? ಈಗ ನಮಗೆ ಬುದ್ಧಿವಾದ ಹೇಳುತ್ತಿದ್ದಾರೆ. ಅದೂ ಏನು ಅಲ್ಪಸಂಖ್ಯಾತರಿಗೆ ಮಾಡಿರತಕ್ಕಂತಹ ಒಂದು ಕಾರ್ಯಕ್ರಮ ಬಜೆಟ್‌ನಲ್ಲಿ ಘೋಷಣೆ ಆಗಿರುವಂಥ ಕಾರ್ಯಕ್ರಮ. ನಾವು issue ತೆಗೆದುಕೊಂಡಿದ್ದು ಧರಣಿ ಮಾಡುವುದಕ್ಕೆ ತೆಗೆದುಕೊಂಡ ವಿಷಯ ಅಕ್ರಮ ಗಣಿಗಾರಿಕೆಯಿಂದ ಕೋಟ್ಯಂತರ ರೂಪಾಯಿ ಸರ್ಕಾರಕ್ಕೆ ನಷ್ಟವಾಗಿದೆ ಎಂದು and it is proved Supreme Court, CEC ಎಲ್ಲರೂ ಹೇಳಿದ್ದಾರೆ ಅಕ್ರಮ ಗಣಿಗಾರಿಕೆ ನಡೆದಿರುವುದು ನಿಜ.

ಕೋಟಿಗಟ್ಟಲೆ ಲೂಟಿ ಆಗಿರುವುದು ನಿಜವೆಂದು ಎಲ್ಲಾ ಕಡೆ ಸಾಬೀತಾಗಿದೆ ಅವತ್ತು ನಾವು ಇದನ್ನು ಪ್ರಸ್ತಾಪ ಮಾಡಿದಾಗ ಅಕ್ರಮ ಗಣಿಗಾರಿಕೆ ನಡೆದಿಲ್ಲವೆಂದು ಇವರು ಡಿಫೆಂಡ್ ಮಾಡಿಕೊಂಡಿದ್ದರು. CBI ತನಿಖೆಗೆ ನೀವು ಒಪ್ಪಿಕೊಳ್ಳಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರ, export ರದ್ದು ಮಾಡಿದವನು ನಾನು.

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ಅವರು ಭಾಷಣ ಪೂರೈಸಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವರು CBI ತನಿಖೆಗೆ ಒಪ್ಪಲಿಲ್ಲ ಇವತ್ತು CBI enquiry ನಡೆಯುತ್ತಿದೆ. ಬೇಲಿಕೇರಿ ಬಂದರಿನಲ್ಲಿ ಕಬ್ಬಿಣದ ಅದಿರು ಅಕ್ರಮವಾಗಿ ಕದ್ದು ಹೋಗಿದೆ ಎಂದರೆ, ಇಲ್ಲಾ, ಕಬ್ಬಿಣದ ಅದಿರು ಕದ್ದು ಹೋಗಿಲ್ಲವೆಂದು ಹೇಳಿದ್ದರು ನಾವು ಅಧಿಕಾರಕ್ಕೆ ಬಂದ ಮೇಲೆ ಒಂಭತ್ತು ಬಂದರುಗಳಲ್ಲಿ ಏನು ಕಬ್ಬಿಣದ ಅದಿರು ಕದ್ದು ಹೋಗಿದ, ಅವೆಲ್ಲಕ್ಕೂ ಕೂಡ ಇವತ್ತು ನಾವು CBI enquiry ಗೆ ಒಪ್ಪಿಕೊಂಡಿದ್ದೇವೆ. ಒಂಭತ್ತು ಬಂದರುಗಳಲ್ಲಿ ಎಲ್ಲೆಲ್ಲಿ ಕಬ್ಬಿಣದ ಅದಿರು ಕದ್ದು ಹೋಗಿದೆ, ಅದೆಲ್ಲವೂ ಕೂಡ ತನಿಖೆ ಆಗಬೇಕೆಂದು ಇವತ್ತು ನಿರ್ಧಾರ ತೆಗೆದುಕೊಂಡಿದ್ದೇವೆ. ಲೋಕಾಯುಕ್ತ ವರದಿ ಬಂತು.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಣ್ಣ ಬಯಲಾಗಿರುವುದು ಯಡಿಯೂಪ್ಪನಿಂದ, ನೀವು ಮುಖ್ಯ ಮಂತ್ರಿಯಾಗಿರುವುದು ಯಡಿಯೂರಪ್ಪನಿಂದ

ಶ್ರೀ ಸಿದ್ದರಾಮಯ್ಯ: ಈ ರಾಜ್ಯದ ಜನ ನಮಗೆ ಆಶೀರ್ವಾದ ಮಾಡಿರುವಂಥದ್ದು

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನೀವು ಹೇಳುವಾಗ ಅವರು ಎಲ್ಲ ಕೇಳಿಸಿಕೊಂಡರು ಅವರೇನಾದರೂ ಎದ್ದು ಮಾತನಾಡಿದರಾ? ಇಲ್ಲ ಅವರು ಮಾತನಾಡುವಾಗ ನೀವೇಕೆ ಏಳುತ್ತೀರಿ? ಅವರು ಈಲ್ಡ್ ಆದರೆ ನೀವು ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಕುಳಿತುಕೊಳ್ಳಿ, ನೀವು ಮಾತನಾಡುವಾಗ ನಾವು ಕೇಳಿದ್ದೇವೆ

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ಅವರು ಈಲ್ಡ್ ಆಗದೇ ನೀವು ಮಾತನಾಡುವುದಕ್ಕಾಗುತ್ತಾ?

ಶ್ರೀ ಸಿದ್ದರಾಮಯ್ಯ: ಭ್ರಷ್ಟಾಚಾರ ಅಂದ ತಕ್ಷಣ ಎದ್ದು ಬಿಡಬೇಕೆಂದೇನೂ ಇಲ್ಲ, ಕುಳಿತುಕೊಳ್ಳಿ.

ಅಧ್ಯಕ್ಷರು: ಅವರು ಈಲ್ಡ್ ಆಗದೆ ನೀವು ಮಾತನಾಡಬೇಡಿ. ಏನೂ ರೆಕಾರ್ಡ್ ಮಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್: ಪ್ರತ್ಯೇಕವಾಗಿ ಅದರ ಬಗ್ಗೆ ಒಂದು ಚರ್ಚೆಯನ್ನೇ ಇಟ್ಟುಬಿಡಿ

ಶ್ರೀ ಸಿದ್ದರಾಮಯ್ಯ: ಆಯಿತು ಬನ್ನಿ ಚರ್ಚೆ ಮಾಡೋಣ, ಚರ್ಚೆ ಮಾಡುವುದಕ್ಕೆ ಅವಕಾಶವೇ ಕೊಡಲಿಲ್ಲ ನೀವು

ಅಧ್ಯಕ್ಷರು: ಅವರು ಈಗ conclusion ಗೆ ಬಂದಿದ್ದಾರೆ

ಶ್ರೀ ಸಿದ್ದರಾಮಯ್ಯ: ಆಯಿತು ಚರ್ಚೆ ಮಾಡೋಣ ಬನ್ನಿ ಸಾರ್ವಜನಿಕರ ಮುಂದೆಯೇ ಹೋಗೋಣ ಬನ್ನಿ ಭಾಷಣ ಮಾಡುವುದಕ್ಕೆ

ಅಧ್ಯಕ್ಷರು: ನೀವು ನೋಟಿಸ್ ಕೊಡಿ ಚರ್ಚೆಗೆ ಅವಕಾಶ ಕೊಡುತ್ತೇನೆ ಆಯಿತು, ಚರ್ಚೆಗೆ ನೋಟಿಸ್ ಕೊಡಿ ಚರ್ಚೆಗೆ ತೆಗೆದುಕೊಳ್ಳೋಣ ನಾರು

ಬೇಡವೆಂದು ಹೇಳುತ್ತಾರೆ. ದಯವಿಟ್ಟು ಅವರು ಈಲ್ಡ್ ಆಗದೆ. ಮಾತನಾಡಬೇಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಎರಡು ವರ್ಷಗಳ ಕಾಲ ಲೋಕಾಯುಕ್ತ ವರದಿಯನ್ನು ಇವರು ಹಾಗೆಯೇ ಇಟ್ಟಿದ್ದರು ಬೆಂಗಳೂರು ಸುತ್ತಮುತ್ತ ಭೂಮಿ ಎಲ್ಲಾ ಒತ್ತುವರಿ ಆಗಿತ್ತು. ಆ ವರದಿಯನ್ನು ಹಾಗೆಯೇ ಇಟ್ಟುಬಿಟ್ಟರು. ಅದನ್ನು ಅಸೆಂಬ್ಲಿ ಮುಂದೆಯೂ ಇಡಲಿಲ್ಲ ಇವರ ಕಾಲದಲ್ಲಿ ಯಾವುದೇ ಭ್ರಷ್ಟಾಚಾರವಾಗಲಿ, ಭೂಮಿ ಒತ್ತುವರಿಯಾಗಲಿ, ಭೂಮಿ ನುಂಗಿ ಹಾಕುವುದು ಇವುಗಳ ಬಗ್ಗೆ ಎರಡೂವರೆ ವರ್ಷ ಏನೂ ಮಾತೇ ಆಡಲಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಎರಡು ಬಾರಿ ಅಕ್ರಮ ಗಣಿಗಾರಿಕೆ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಸ್ತಾಪ ಮಾಡಿದರು ಕೂಡ ಅವಕಾಶ ಸಿಕ್ಕಿರಲಿಲ್ಲ. ಅಕ್ರಮ ಗಣಿಗಾರಿಕೆ ಬಗ್ಗೆ ಲೋಕಾಯುಕ್ತದವರು ಕೊಟ್ಟ ವರದಿ ಎರಡು ವರ್ಷಗಳ ಕಾಲ ಹಾಗೆಯೇ ಉಳಿದಿತ್ತು. ಈಗ ನಾವು ಅದನ್ನು ಜಯರಾಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಅವರ ವರದಿ ಬಂದ ಮೇಲೆ ಆ ವರದಿಯನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಮತ್ತೆ ಲೋಕಾಯುಕ್ತಕ್ಕೆ ಕೇಳುತ್ತೇವೆಂದು ಬರೆದುಬಿಟ್ಟರು ಇದು ಹೊಸ ವಿಚಾರ, ಇದು ತಮಗೂ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದೇ ಬೆಳಗಾಂ ಅಧಿವೇಶನದಲ್ಲಿ ಲೋಕಾಯುಕ್ತ ತನಿಖೆಗೆ ಕೊಟ್ಟವನು ನಾನು. ಅಕ್ರಮ ಗಣಿಗಾರಿಕೆ ಬಗ್ಗೆ ತನಿಖೆಗೆ ಕೊಟ್ಟವನು ನಾನು. ಸತ್ಯ ಹೊರಗೆ ಬಂದಿದ್ದು ನನ್ನಿಂದ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕುಮಾರಸ್ವಾಮಿ ಕಾಲದಲ್ಲಿ ತನಿಖಗೆ ಕೊಟ್ಟಿದ್ದಿರಿ.

ಅಧ್ಯಕ್ಷರು: ನೀವು ಮಾತನಾಡುವಾಗ ಅವರು ಎದ್ದಿದ್ದರಾ? ನೀವು ಕಬ್ಬು ಬೆಳೆಗಾರರ ಬಗ್ಗೆ ಮಾತನಾಡಬೇಕಾಗಿತ್ತು, ಬೇರೆ ವಿಚಾರಕ್ಕೆ ಏಕೆ ಬಂದಿರಿ ನೀವು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾವು ಈಗ ಲೋಕಾಯುಕ್ತ ವರದಿಯನ್ನು CBIಗೆ ಕೊಡುವುದು ಮತ್ತು ಉಳಿದಂತಹ ಎಲ್ಲಾ ವಿಚಾರಗಳನ್ನು ಲೋಕಾಯುಕ್ತ ಪೊಲೀಸರಿಗೆ ವಹಿಸುವುದು, ವಿಶೇಷ ನ್ಯಾಯಾಲಯ ಮಾಡುವುದು, ಯಾರ್ಯಾರು ನುಂಗಿದ್ದಾರೆ ಅವರ ಹತ್ತಿರ ಎಲ್ಲಾ ವಸೂಲಿ ಮಾಡುವುದು, ಇವೆಲ್ಲಾ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಆದ್ದರಿಂದ ನಮ್ಮ ಸರ್ಕಾರ ರೈತರ ಪರವಾಗಯೂ ಇದ್ದೇವೆ ಹಾಗೂ ಭ್ರಷ್ಟಾಚಾರದ ವಿರುದ್ಧವಾಗಿಯೂ ಇದೆ ಈ ಸರ್ಕಾರ ಜನಪರವಾಗಿ ಕೆಲಸ ಮಾಡುತ್ತಿದೆ, ರೈತರ ಪರವಾಗಿ ಕೆಲಸ ಮಾಡುತ್ತದೆ. ರೈತರ ಕಷ್ಟಕ್ಕೆ ನಾವು ಯಾವಾಗಲೂ ಸದಾ ಸ್ಪದಿಸುತ್ತೇವೆ, ಎನ್ನತಕ್ಕಂತಹ ಮಾತುಗಳನ್ನು ಅತ್ಯಂತ ಸ್ಪಷ್ಟವಾಗಿ ಹೇಳಿ, ಮಾನ್ಯ ಸದಸ್ಯರುಗಳು ಯಾರೂ ಕೂಡ ಇದರ ಬಗ್ಗೆ ಆತಂಕಪಡಬೇಕಾಗಿಲ್ಲ, ಸಂಶಯ ಪಡಬೇಕಾಗಿಲ್ಲ ಎನ್ನತಕ್ಕಂತಹ ಮಾತುಗಳನ್ನು ಹೇಳಿ, ಬಹುಶಃ ನಾನು ಅವರು ಹೇಳಿದಂತಹ ಎಲ್ಲಾ ವಿಚಾರಗಳಿಗೂ ಉತ್ತರ ಕೊಡುವುದಕ್ಕೆ ಹೋಗಲಿಲ್ಲ. ಕೆಲವು ವಿಚಾರಗಳಿಗ ಮಾತ್ರ ಉತ್ತರ ಕೊಟ್ಟಿದ್ದೇನೆ. ನಿನ್ನೆ ಆಗಿರತಕ್ಕಂತಹ ಘಟನೆಗೆ ನಮ್ಮ ಸರ್ಕಾರ ಯಾವ ರೀತಿಯಲ್ಲೂ ಕೂಡಾ ಕಾರಣವಲ್ಲ, ಮಾನ್ಯ ವಿರೋಧ ಪಕ್ಷದ ನಾಯಕರು ಮೂರುವರೆ ಗಂಟೆಗಳ ಕಾಲ ಇಡೀ ರಾಜ್ಯದ ಎಲ್ಲಾ ರೈತರ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ ಅವರಿಗೂ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಈ ವಿಚಾರದಲ್ಲಿ ಪಾಪ ಅವರು ರಾಜಕೀಯ ಮಾಡುವುದಕ್ಕೆ ಹೋಗಲಿಲ್ಲ. ಆದ್ದರಿಂದ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ, ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಆ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ರೈತರ ಪರವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ ನಿಮಗೆ ಧನ್ಯವಾದಗಳು.

ಅಧ್ಯಕ್ಷರು: ಇಲ್ಲಿಗೆ ಚರ್ಚೆ ಮುಕ್ತಾಯವಾಗಿದೆ. ದಯವಿಟ್ಟು ಧರಣಿ ವಾಪಸ್ ತೆಗೆದುಕೊಳ್ಳಿ. ನಾಳೆಯಿಂದ ಸದನ ನಡೆಸುವುದಕ್ಕೆ ಅವಕಾಶ ಮಾಡಿ ಕೊಡಿ

(ಈ ಹಂತದಲ್ಲಿ BJP ಹಾಗೂ KGP ಪಕ್ಷದ ಶಾಸಕರು ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)

(ಗೊಂದಲ)

ಅಧ್ಯಕ್ಷರು: ಆಯಿತು. ನಿಮಗೆ ಚರ್ಚೆಗೆ ಬೇರೆ ವಿಚಾರ ಇಲ್ಲವಾ? ಒಬ್ಬ ಹಿರಿಯ ಸದಸ್ಯರಾಗಿ ಮಾರ್ಗದರ್ಶನ ಮಾಡುವುದು ಬಿಟ್ಟು ನೀವು ಹೀಗೆಲ್ಲಾ ಮಾತನಾಡುವುದಾ? ಅವರು ಏನು ಹೇಳಬೇಕೋ ಅದನ್ನು ಹೇಳಿದ್ದಾರೆ, ನಿಮಗೆ ತಿಳಿದಿದ್ದನ್ನು ನೀವು ಹೇಳಿದ್ದೀರಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಚರ್ಚೆ ಮಾಡುತ್ತಿಲ್ಲ, ಒಂದು ನಿಮಿಷ ಅವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಹಲವಾರು ವಿಷಯಗಳ ಬಗ್ಗೆ ಸದನದಲ್ಲಿ ಬೆಳಕು ಚೆಲ್ಲಿದ್ದಾರೆ. ಹಲವಾರು ವಿಷಯಗಳಲ್ಲಿ ರೈತರಿಗೆ ಕೇಂದ್ರ ಸರ್ಕಾರದವರು ಯಾವ ಒಂದು ಬೆಂಬಲ ಬೆಲೆ ನಿಗದಿ ಮಾಡಿದ್ದಾರೆ, ಅದರ ಜೊತೆಗೆ ಪ್ರೋತ್ಸಾಹ ಧನದ ರೀತಿಯಲ್ಲಿ ತಾವು ಭತ್ತಕ್ಕೆ 280 ರಿಂದ 290 ರೂಪಾಯಿಗಳಂತೆ ಘೋಷಣೆ ಮಾಡಿದ್ದೀರಿ, ಅದು ಉತ್ತಮವಾದ ಕೆಲಸ ಆದರೆ ಒಂದು ನಾನು ನಿಮ್ಮಲ್ಲಿ ಮನವಿ ಮಾಡುವುದು, ಕೆಲವು ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೆ ಏನು ಪತ್ರ ಬರೆದಿದ್ದಾರೆ, ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಯತಕ್ಕಂತಹ ವಿಷಯದಲ್ಲಿ ಬಹುಶ ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯವರು ಹಾಗೂ ಮಾನ್ಯ ಚಿದಂಬರಂರವರು ಅಲ್ಲಿರತಕ್ಕಂತಹ ಪರಿಸ್ಥಿತಿಯಲ್ಲಿ ಯಾವ ರೀತಿಯಲ್ಲಿ ಸ್ಪಂದಿಸುತ್ತಾರೆಂದು ನನಗೆ ಗೊತ್ತಿಲ್ಲ. ಮಾನ್ಯ ಚಿದಂಬರಂವರಿಗೂ ತಾವು ಮನವಿ ಸಲ್ಲಿಸಿದ್ದೀರಿ.

ಅಧ್ಯಕ್ಷರು: ಆಯಿತು, ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗೋಣ.

ಶ್ರೀ ಹೆಚ್ ಡಿ ಕುಮಾರಸ್ವಾಮಿ: ಪಾವಗಡ ಹಾಗೂ ಶಿರಾ ಈ ಭಾಗಗಳಲ್ಲಿ ಬಡ ರೈತರಿದ್ದಾರೆ, ಅವರು ಮಳೆ ಆಧಾರದ ಮೇಲೆ ಜೀವನ ಮಾಡುವವರು. ಭತ್ತ, ಶೇಂಗಾ ಹಾಗೂ ಮೆಕ್ಕೆ ಜೋಳಕ್ಕೆ ಹೆಚ್ಚಿನ ಪ್ರೋತ್ಸಾಹ ಧನ ಕೊಟ್ಟು ಬೆಂಬಲ ಬೆಲೆ ಕೊಟ್ಟರೆ ಆ ರೈತರು ಉಳಿಯುತ್ತಾರೆ. ಸ್ವಲ್ಪ ನೀವು ದೊಡ್ಡ ಮನಸ್ಸು ಮಾಡಿ ಕೊಬ್ಬರಿಗೆ ಇವತ್ತೇನು ಒಂದು ಸಾವಿರ ರೂಪಾಯಿ ಕೊಟ್ಟಿದ್ದೀರಿ. ನಿಜವಾಗಿಯೂ ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ ಅದೇ ರೀತಿಯಲ್ಲಿ ಮೆಕ್ಕೆ ಜೋಳ, ಭತ್ತ, ದಾಳಿಂಬೆ ಹಾಗೂ ದ್ರಾಕ್ಷಿ ಬೆಳೆಗಾರರು ಇದ್ದಾರೆ. ಚಿಕ್ಕಬಳ್ಳಾಪುರದಲ್ಲಿ ದ್ರಾಕ್ಷಿ ಬೆಲೆ ಕೆ.ಜಿ.ಗೆ ಆರು ರೂಪಾಯಿಗೆ ಇಳಿದು ಹೋಗಿದೆ. ಇದಕ್ಕೆ ತಕ್ಷಣ ಬೆಂಬಲ ಬೆಲೆ ಕೊಡಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ತಾವು ದೊಡ್ಡ ಮನಸ್ಸು ಮಾಡಿ ತೀರ್ಮಾನ ಮಾಡಬೇಕು. ಅದೇ ರೀತಿಯಲ್ಲಿ ಮೆಕ್ಕೆಜೋಳ, ಭತ್ತ, ದ್ರಾಕ್ಷಿ ಮತ್ತು ದಾಳಿಂಬೆ ಬೆಳೆಗಳ ಬೆಲೆಗಳ ಬಗ್ಗೆ ಕೂಡ ಸರ್ಕಾರ ನೋಡಬೇಕಾಗುತ್ತದೆ ಚಿಕ್ಕಬಳ್ಳಾಪುರದಲ್ಲಿ ದ್ರಾಕ್ಷಿಯ ಬೆಲೆ ಕೆ.ಜಿ.ಗೆ 6 ರೂ ಗಳಿಗೆ ಇಳಿದುಹೋಗಿದೆ ಇದಕ್ಕೆ ದಯವಿಟ್ಟು ಬೆಂಬಲ ಬೆಲೆಯನ್ನು ಸರ್ಕಾರ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ ತೀರ್ಮಾನ ಮಾಡಬೇಕು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅಧಿವೇಶನ ಮುಗಿದ ಮೇಲೆ ಡೆಲಿಗೇಷನ್ ತೆಗೆದುಕೊಂಡು ಹೋಗೋಣ ಈ ಬಗ್ಗೆ ಕೇಂದ್ರ ಸರ್ಕಾರದ ಮೇಲೂ ಒತ್ತಾಯ ಮಾಡುತ್ತೇನೆ ಮತ್ತು ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ಏನೆಲ್ಲಾ ಸಹಾಯವನ್ನು ಮಾಡುವುದಕ್ಕೆ ಆಗುತ್ತದೆಯೋ ಆ ಬಗ್ಗೆ ಎಲ್ಲಾ ಪ್ರಯತ್ನವನ್ನೂ ಮಾಡುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳುತ್ತದೆಂದು ಹೇಳಬಯಸುತ್ತೇನೆ.

(ಸದನವು ಸಂಜೆ 7 ಗಂಟೆ 31 ನಿಮಿಷಕ್ಕೆ ಮುಕ್ತಾಯವಾಯಿತು ಮತ್ತು ದಿನಾಂಕ 29ನೇ ನವೆಂಬರ್ 2013 ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)